ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 36

ಸೆಪ್ಟೆಂಬರ್ 07.2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org



WTO: ದೋಹ ಸಭೆ

ದೇಶದೇಶಗಳ ಕೈ ತಿರುಚುವ ಅಮೆರಿಕಾದ ದುಷ್ಟ ಯತ್ನ

ಒರಿಸ್ಸಾದಲ್ಲಿ ಕೋಮು ಜ್ವಾಲೆ





ಇಲ್ಲಿ ಭೂಮಿ ಬಡವರಿಗಿಲ್ಲ ಉಳ್ಳವರಿಗೆ

ಕಾವಿ ಪಡೆಯ ಶಿಕ್ಷಣ 'ಸುಧಾರಣೆ'

ಕರಾವಳಿಯಲ್ಲಿ ಕೊಳ್ಳಿ ದೆವ್ವಗಳ ಕುಣಿತ

ನೋಟ

ಅತೀಂದ್ರಿಯ ಭ್ರಮಾಲೋಕ ಮತ್ತು ಕೋವೂರ್



ಡಾ. ಜಿ. ಭಾಸ್ಕರ ಮಯ್ಯ

ಡಾ. ಕೋವೂರ್ ಈ ಮಾನವ ನಿರ್ಮಿತ ಮೂಢನಂಬಿಕೆಗಳನ್ನು ತಮ್ಮ ಯೌವನಾವಸ್ಥೆಯಲ್ಲಿಯೇ ಅರ್ಥೈಸಿ ಕೊಂಡಿದ್ದರೂ ಅದಕ್ಕೆಂದೇ ಅವರು ಎರಡು ವರ್ಷಗಳ ಕಾಲ ಜೋತಿಷ್ಯ, ಹಸ್ತಸಾಮುದ್ರಿಕೆ ಮುಂತಾದವುಗಳನ್ನೆಲ್ಲಾ ಅಮೂಲಾಗ್ರವಾಗಿ ಕಲಿತರು. ಅವರೇ ಎನ್ನುವಂತೆ ಅದರಿಂದಾದ ಲಾಭವೆಂದರೆ ಅವುಗಳು ಕೇವಲ 'ನಿರರ್ಥಕ' - ಎಂಬ ತಿಳಿವು ಬಂದುದು.

'ವಿಜ್ಞಾನವು ಯಾವ ವಿಚಾರವನ್ನು ತೆಗೆದುಕೊಂಡು ಮುಂದೆ ಹೋಗುತ್ತದೋ, ಅದು ಮನುಷ್ಯನ ಇಂದಿನ ಸ್ಥಿತಿಯ ವಿಮರ್ಶೆಯಾಗಿರುತ್ತದೆ. ಇದು ಕೊನೆಯಿಲ್ಲದ ಸುಧಾರಣೆಗಳ ಸಂಭಾವ್ಯತೆಯ ಮಾರ್ಗವನ್ನು ತೆರೆಯುತ್ತದೆ. ಇಂಥ ವಿಚಾರಗಳ ವಿಕಾಸ ಮತ್ತು ಪ್ರಚಾರ ಸ್ವತಃ ವೈಜ್ಞಾನಿಕರ ಕರ್ತವ್ಯವಾಗಿರಬೇಕು. ಆದರೆ, ಇದನ್ನು ವ್ಯವಹಾರಿಕ ಜಗತ್ತಿಗೆ ಕೊಂಡೊಯ್ಯುವುದು ವಿಜ್ಞಾನದ ಹೊರಗೆ ಇರುವ ಸಾಮಾಜಿಕ ಶಕ್ತಿಗಳನ್ನು ಅವಲಂಭಿಸಿದೆ' - ಜೆ. ಡಿ. ಬರನಾಲ್.

ಬಹಳ ಕಾಲದಿಂದ ವಿದೇಶಿ ಚಾನೆಲ್ AXN ಮೂಢನಂಬಿಕೆಗಳನ್ನು ವೈಜ್ಞಾನಿಕ ಸತ್ಯವೆಂಬಂತೆ ಬಿತ್ತರಿಸುತ್ತಾ ಬಂದಿದೆ. 'ನಂಬಬಹುದೆ' 'ನಂಬಲಸಾಧ್ಯವೆ'? ಎಂಬ ಶೀರ್ಷಿಕೆಯಡಿಯಲ್ಲಿ ನಾನಾ ಅತೀಂದ್ರಿಯ ಅಸಂಬದ್ಧಗಳನ್ನು ಪ್ರಸಾರ ಪಡಿಸುತ್ತಿರುತ್ತದೆ. ಉದಾ: ಫಿಲಿಫೈನ್ಸ್‌ನಲ್ಲಿ ಕ್ರಾಸ್‌ನ್ನು ಏರಿ ಏಸುಕ್ರಿಸ್ತನಂತೆ ಮೊಳೆ ಹೊಡೆದುಕೊಂಡು ರಕ್ತಸ್ರಾವ ಮಾಡಿಕೊಳ್ಳುವ ದೃಶ್ಯ. ಹದಿನೈದು ನಿಮಿಷಗಳ ನಂತರ ಅವರನ್ನು ಕೆಳಗಿಳಿಸಲಾಗುತ್ತದೆ. ಇದರಲ್ಲಿ ಹೆಂಗಸರೂ ಸೇರಿರುತ್ತಾರೆ. ಅದು ಹರಕೆ. ಇದರಿಂದ ಕ್ಯಾನ್ಸರ್‌ನಂತಹ ಕಾಯಿಲೆ ಗುಣವಾದುದರ ಬಗ್ಗೆ ಟಿ.ವಿ. ಚಾನೆಲ್ ಬೊಗಳೆ ಬಿಡುತ್ತದೆ. ಆದರೆ, ಅದೆಂತಹ ಕ್ಯಾನ್ಸರ್, ಆಸ್ಪತ್ರೆಯಲ್ಲಿ ಔಷಧಿ ಕೊಡಿಸಲಾಗಿತ್ತೆ, ಈ ಹರಕೆ ನಂತರ ಪುನಃ ಡಾಕ್ಟರಿಗೆ ತೋರಿಸಲಾಗಿತ್ತೆ? - ಈ ಯಾವ ವಿವರವನ್ನು ಟಿ.ವಿ. ಚಾನೆಲ್ ಕೊಡುವುದಿಲ್ಲ. ಇದು ಮೂಢನಂಬಿಕೆಯ ಭಯಾನಕ ವ್ಯಾಪಾರ. ಇಂದು ಎಲ್ಲಾ ಟಿ.ವಿ. ಚಾನೆಲ್‌ಗಳು ಇದನ್ನು ಅನುಕರಿಸುತ್ತಾ ಜನರನ್ನು ಮೌಢ್ಯದ ಅಂಧಕೂಪ (ಕತ್ತಲಬಾವಿ)ದಲ್ಲಿ ತಳ್ಳುತ್ತಿವೆ.

ಮೊನ್ನೆ ಮೊನ್ನೆ ನಡೆದ ಸೂರ್ಯಗ್ರಹಣದ ಸಂದರ್ಭದಲ್ಲೂ ಇಂತಹ ಅತಿರೇಕಗಳನ್ನು ಟಿ.ವಿ. ಪರದೆಯ ಮೇಲೆ ನೋಡಬಹುದು. ಅಲ್ಲಿ ವಿಜ್ಞಾನಿಯನ್ನು ಕೂಡಿಸಿರುತ್ತಾರೆ. ಆದರೆ ಅವನ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವ ಅವಕಾಶವನ್ನು ಕೊಡದೆ, ಮುಠ್ಠಾಳ ಜ್ಯೋತಿಷಿಯ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳುವಂತೆ ಮಾಡುತ್ತಾರೆ. ಟಿ.ವಿ. 9 ಎಂಬ ಚಾನೆಲ್ ಅಂತೂ 'ಹೀಗೂ ಉಂಟೆ'? ಎಂಬ ಶೀರ್ಷಿಕೆಯಡಿಯಲ್ಲಿ ಪ್ರತೀದಿನ ಮೌಢ್ಯವನ್ನು ಪ್ರಚಾರ ಮಾಡುತ್ತಾ ಅದರ ವ್ಯಾಪಾರದಲ್ಲಿ ತೊಡಗಿರುತ್ತದೆ. 21ನೆಯ ಶತಮಾನದ ಜನ ಮಧ್ಯಯುಗದ ಕತ್ತಲೆಯತ್ತ ಸಾಗುತ್ತಿದ್ದಾರೆ. ಇತ್ತೀಚೆಗಂತೂ 'ಜ್ಯೋತಿಷ್ಯ', 'ವಾಸ್ತು' ಟಿವಿ ಚಾನೆಲ್‌ಗಳ ಅವಿಭಾಜ್ಯ ಅಂಗವಾಗಿದೆ. ಈ ಚಾನೆಲ್‌ಗಳು 'ಸತೀ ಪದ್ಧತಿ'ಯನ್ನು ವಿಜೃಂಭಿಸುತ್ತಾರೆ. ದೇವರಾಲ ಸತೀಕಾಂಡ ಇದಕ್ಕೊಂದು ಜ್ವಲಂತ ಉದಾಹರಣೆ.

ಇಂದು ಮೀಡಿಯಾಕ್ಕೆ ಯಾವುದೇ ಜವಾಬ್ದಾರಿಯಿಲ್ಲ! ಪ್ರಾಯೋಜಕರಿಂದ ಹಣ ಪಡೆಯುವುದು, ಜನರನ್ನು ಹುಚ್ಚರನ್ನಾಗಿಸುವುದು ಇವರ ಕಾಯಕ. ನಾವು ವಿಜ್ಞಾನಯುಗದಿಂದ ಪಾಷಾಣಯುಗಕ್ಕೆ ದಾಪುಗಾಲಿಡುತ್ತಾ ಸಾಗುತ್ತಿದ್ದೇವೇನೋ ಎಂಬ ಭಾವನೆ ಹಲವು ಬಾರಿ ಬರುತ್ತದೆ.

ಈ ನಿಟ್ಟಿನಲ್ಲಿ ವೈಜ್ಞಾನಿಕ 'ಸತ್ಯ' ಶೋಧನೆಗಾಗಿಯೇ ಜೀವನ ಮುಡುಪಾಗಿಟ್ಟ ಮಹಾತ್ಮನನ್ನು ಸ್ಮರಿಸಿಕೊಳ್ಳಬೇಕು ಎನ್ನಿಸಿ ಡಾ|| ಅಬ್ರಾಹಂ ಟಿ. ಕೋವೂರರನ್ನು ಕೇಂದ್ರವನ್ನಾಗಿರಿಸಿಕೊಂಡು, ವಿಜ್ಞಾನಕ್ಕೂ ಅಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ಜನ ತಿಳಿದುಕೊಳ್ಳುವಂತಾಗಲಿ ಎಂಬ ದೃಷ್ಟಿಯಿಂದ ಪ್ರಸ್ತುತ ಲೇಖನ.

ಸಿಲೋನಿನ ಥರ್ಸ್ಟನ್ ಕಾಲೇಜಿನ ಜೀವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಅಬ್ರಾಹಂ ಟಿ. ಕೋವೂರ್ ಅವರು ಜಗತ್ ಪ್ರಸಿದ್ಧ ವಿಚಾರವಾದಿಗಳು. ಮೂಢನಂಬಿಕೆ, ಅತೀಂದ್ರೀಯ ಶಕ್ತಿ, ಟೆಲಿಪತಿ, ಮಾಟ, ಜ್ಯೋತಿಷ್ಯ, ಕುಂಡಲಿನಿ, ಯೋಗಸಿದ್ಧಿ, ಕ್ಲೈರಿವಾಯನ್ಸ್ ಮೊದಲಾದ ಹಲವಾರು ದಗಲ್‌ಬಾಜಿತನಗಳ ವಿರುದ್ಧ ತಮ್ಮ 23 ಪಂಥಾಹ್ವಾನಗಳನ್ನು ಜಗತ್ತಿನಾದ್ಯಂತ ನೂರಾರು ಪತ್ರಿಕೆಗಳಲ್ಲಿ ಪ್ರಕಟಿಸಿದವರು. ಆದರೆ, ಎರಡು ದಶಕಗಳ ತನಕ ಅಥವಾ ಇಂದಿನ ತನಕವೂ ಅವರು ಒಡ್ಡಿದ ಪಂಥಾಹ್ವಾನವನ್ನು ವಿಶ್ವದ ಯಾರಿಗೂ ಎದುರಿಸಿ ಗೆಲ್ಲಲಾಗಲಿಲ್ಲ. ಈಗ ಅವರು ನಮ್ಮ ನಡುವೆ ಇಲ್ಲ. ಆದರೆ, ಅವರ ವಿಚಾರಗಳನ್ನು ಅಲ್ಲಲ್ಲಿ ಅವರ ಮಾತುಗಳಲ್ಲಿ ಮತ್ತು ಅವರ ಕುರಿತಾದ ಅಪಾರ ಸಾಹಿತ್ಯದಿಂದ ಇಲ್ಲಿ ಕೊಡಬಯಸುತ್ತೇನೆ.

ಕೋವೂರ್ ಹೇಳುತ್ತಾರೆ -


'ನನ್ನ ಬಾಲ್ಯದ ಕೆಲವು ಅತ್ಯಂತ ಕೆಟ್ಟ ಹೆದರಿಕೆಗಳೆಂದರೆ ಭೂತಗಳು, ದೆವ್ವಗಳು?. ಮಾಟ, ಶಾಪ, ನರಕ, ಸೈತಾನ, ದೇವರ ಕ್ರೋಧ - ಇತ್ಯಾದಿ ನನ್ನ ವಿಶ್ವವಿದ್ಯಾಲಯದ ದಿನಗಳ ಕ್ರಮಾಗತ ಶೋಧನೆಗಳು ಮತ್ತು ನನ್ನ ವೈಚಾರಿಕ ಚಿಂತನವು ಅಮರವಾದ ದೆವ್ವ ಭೂತಗಳು, ಪವಾಡ ಪುರುಷರುಗಳ ಬಗ್ಗೆ ಸಂಶಯಿಸುವಂತೆ ಮಾಡಿತು. ಎಷ್ಟೋ ಭೂತದ ಮನೆಗಳು ವಿಚಿತ್ರಭಯ ಹುಟ್ಟಿಸುತ್ತವೆನ್ನುವ ವಿಚಾರಗಳಿಗೆಲ್ಲಾ ಕೆಲವೊಂದು ಸ್ಥಾಪಿತ ಹಿತಾಸಕ್ತಿಯ ಏಜೆಂಟರುಗಳೇ ಕಾರಣವೆಂಬುದೂ ತಿಳಿಯಿತು. ಕೆಲವೊಮ್ಮೆ ಇಂಥ ಕೃತ್ಯಗಳು ಮನೋವಿಕಾರದಿಂದಾದರೆ ಕೆಲವೊಮ್ಮೆ ಪುಂಡಾಟಿಕೆ ಮತ್ತು ಲಾಭಕೋರತನದಿಂದಾಗಿದೆ ಎಂದೂ ತಿಳಿಯಿತು.'

ಡಾ. ಕೋವೂರರು ಸಹಸ್ರಾರು ವಿಭಿನ್ನ ಪ್ರಕಾರದ ಭೂತಹಿಡಿದ ಯಾ ದೆವ್ವ ಹಿಡಿದ ಮನೋವಿಕಾರಿಗಳನ್ನು ಹಿಪ್ನೋಸಿಸ್ ಮೊದಲಾದ ವೈಜ್ಞಾನಿಕ ಮಾರ್ಗಗಳಿಂದ ಗುಣಪಡಿಸಿದ್ದಾರೆ. ಆಕಸ್ಮಿಕವಾಗಿ ಕೆಲವು ಭೂತ ಬಿಡಿಸುವ ಪಾದ್ರಿಗಳು, ಸನ್ಯಾಸಿಗಳು - ದರ್ಶನ, ಪೂಜೆ, ಭಜನೆ ಇತ್ಯಾದಿಗಳ ಮೂಲಕ ಗೆಲವು ಸಾಧಿಸಬಹುದು. ಇದರಲ್ಲಿಯೂ ಪಾತ್ರ ವಹಿಸುವುದು ಸಮ್ಮೋಹನದ ತಂತ್ರವೆ. ಆದರೆ, ಇದು ಮಾತ್ರ ಮೂಢನಂಬಿಕೆಗಳನ್ನು ಸಮಾಜದಲ್ಲಿ ಶಾಶ್ವತವಾಗಿ ಉಳಿಯಗೊಡುತ್ತವೆ.

ಭೂತ ಮೈಮೇಲೆ ಬಂತೆಂದು ಸ್ವರ - ಬದಲಾಯಿಸುವುದು, ಪೂರ್ವಜನ್ಮದ ಸ್ಮರಣೆ - ಇವೆಲ್ಲ ಭ್ರಾಂತ ಮನಸ್ಸಿನ ಕಲ್ಪನೆಗಳು.

ಡಾ. ಕೋವೂರರು ಎಷ್ಟೋ ಭೂತಗೃಹಗಳಲ್ಲಿ ಮಲಗಿದ್ದರು. ಅವರ ಪತ್ನಿಯು ಎಷ್ಟೋ ದಿನ ಅರ್ಧರಾತ್ರಿಯಲ್ಲಿ ದೆವ್ವಗಳನ್ನು ಹುಡುಕುತ್ತಾ ಸ್ಮಶಾನಗಳಲ್ಲಿ ಕಳೆದಿದ್ದರು. ಅವರು ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾರೆ - 'ನಾವು ಎಂದೂ ಅಲ್ಲಿ ಭೂತಗಳನ್ನು ಕಾಣದಿದ್ದರೂ ಯಾರೋ ಉಂಟುಮಾಡುತ್ತಿದ್ದ ಕೆಲವು ವಿಚಿತ್ರ ಶಬ್ದಗಳಿಂದ ನಾವು ಹೆದರಿದ್ದೆವು. ಮಾನಸಿಕ ಆಘಾತಕ್ಕೂ ಒಳಗಾಗಿದ್ದೆವು. ಏಕೆಂದರೆ ದೆವ್ವಗಳ ವಿಚಾರಗಳನ್ನು ನಾವು ನಮ್ಮ ಬಾಹ್ಯ ಪ್ರಜ್ಞೆಯಿಂದ ಸಂಪೂರ್ಣವಾಗಿ ಹೊರದೂಡಿದ್ದರೂ ನಮ್ಮ ಸುಪ್ತ ಚೇತನದಲ್ಲಿ ಅವು ಹುದುಗಿಕೊಂಡಿರುತ್ತವೆ. ಭೂತದ ಬಗ್ಗೆ ಯಾವುದೇ ಭಯದ ವಾತಾವರಣದಲ್ಲಿ ಬೆಳೆಯದ ನಮ್ಮ ಮಗನನ್ನು ಅಲ್ಲಿಗೆ ತಂದಾಗ ಅವನು ಯಾವುದೇ ಆಘಾತಕ್ಕೂ ಒಳಗಾಗಲಿಲ್ಲ.'

ಈ ಸಂದರ್ಭದಲ್ಲಿ ನಾನು ನನ್ನ ಒಂದು ಅನುಭವವನ್ನು ಹೇಳಲು ಬಯಸುತ್ತೇನೆ. ನಾನು ವಿದ್ಯುತ್ ಇಲ್ಲದ ಕರಾಳರಾತ್ರಿಗಳ ಐತಿಹ್ಯಗಳನ್ನೊಳಗೊಂಡ ಪರಿಸರದಲ್ಲಿಯೇ ಬೆಳೆದವ. ನಾನು ಹೇಳುವ ಈ ವಿಚಾರಗಳು



ಸುಮಾರು 35-40 ವರ್ಷಗಳಷ್ಟು ಹಿಂದಿನದು. ವಿಜ್ಞಾನದ ವಿದ್ಯಾರ್ಥಿಗೆ ವೈಜ್ಞಾನಿಕ ಮನೋಧರ್ಮ ಇರಲೇಬೇಕೇಂದೆನೂ ಇಲ್ಲ. ಆದರೆ, ಕಷ್ಟಪಟ್ಟು ಅಧ್ಯಯನ ನಡೆಸಿ ಈ ಮೂಡನಂಭಿಕೆಗಳ ಬಗೆಗೆ ತಾತ್ವಿಕ, ವೈಜ್ಞಾನಿಕ ಧೋರಣೆಗಳನ್ನು ಬೆಳೆಸಿಕೊಂಡ ನನಗೂ ಅರ್ಧರಾತ್ರಿಯಲ್ಲಿ ಯಾವುದೋ ಸಪ್ಪಳ ಕೇಳಿದಾಗ ರೋಮಗಳು ನಿಗುರಿ ನಿಲ್ಲುತ್ತಿದ್ದವು. ವಿಚಿತ್ರ ಭಯ ಆವರಿಸುತ್ತಿತ್ತು. ಸತ್ತ ಮೇಲೆ ಹೆಣವನ್ನು ಸುಟ್ಟರೆ ಬೇರೆ ಬೇರೆ ಆಕ್ಸೈಡ್, ಅಂಗಾರಾಮ್ಲ, ನೈಟ್ರೇಟ್, ನೈಟ್ರೈಟ್ ಇತ್ಯಾದಿಗಳಾಗಿ ಈ ಪಂಚಭೂತಗಳಲ್ಲಿ (ಭೌತ ಪದಾರ್ಥ - ಮೂಲವಸ್ತು ಯಾ ಅವುಗಳ ಸಂಯುಕ್ತಗಳಲ್ಲಿ) ಸೇರಿ ಹೋಗುತ್ತವೆ. 'Matter can neiter be created nor be destroyed' - ಇದಿಷ್ಟು ಗೊತ್ತಿದ್ದೂ, ವಿಚಾರವಾದಿ ಸಂಘಟನೆಗಳ ಸಂಪರ್ಕದಲ್ಲಿ ಇದ್ದೂ, ಏಕೆ ನನಗೆ ಈ ಭಯ?

ಆಗ ನನಗೆ ಕೋವೂರರ ವಿಚಾರಗಳ ಸಂಪರ್ಕವಿರಲಿಲ್ಲ. ಬಹಳ ಕಾಲ ಈ ಕುರಿತು ಒದ್ದಾಡಿದ ನಂತರ ಗೌರವಾನ್ವಿತ ಕಾರಂತರನ್ನು ಭೇಟಿಯಾದೆ. ಆಗ್ಗೆ ಅವರು ನಮ್ಮೂರಲ್ಲಿ ನೆಲೆಸಿದ್ದರಷ್ಟೆ. ಅವರೆಂದರು - 'ಬೈರಾಗಿಗಳು ಸನ್ಯಾಸಿಗಳು ಎಲ್ಲೆಲ್ಲೂ ಮಲಗುತ್ತಾರೆ. ಅವರಿಗೆ ಅಂಥ ಭಯಗಳಿಲ್ಲ. ಬರೇ ಸಿದ್ಧಾಂತ ತಿಳಿದರೆ ಪ್ರಯೋಜನವಿಲ್ಲ. ಪ್ರಯೋಗ ಮಾಡಿ ನೋಡಬೇಕು.' ಆ ನಂತರ ನಾನು ಟಾರ್ಚ್ ಹಿಡಿದು ಭೂತದ ಬೇಟೆಗೆ ಹೊರಟೆ. ಎಷ್ಟೆಷ್ಟೋ ದೆವ್ವದ ಕಲ್ಲುಗಳನ್ನು ಮಧ್ಯರಾತ್ರಿಯಲ್ಲಿ ಮನೆಯಂಗಳಕ್ಕೆ ತಂದೆ. ಆದರೆ ಪ್ರತಿ ಬಾರಿಯೂ ಮೈ ನಡುಗುತ್ತಿತ್ತು. ಸುತ್ತ ಬೆಳಕು ಹಾಯಿಸಿ - 'ಇಲ್ಲ - ಎಲ್ಲಿದೆ ದೆವ್ವ?' `Matter can neit?er be created nor be destroyed? ಎನ್ನುತ್ತಾ ತಾಲೀಮು ಮಾಡುತ್ತಾ ಕೊನೆಗೆ ಯಾವ ಭಯವೂ ಇಲ್ಲದೆ ಸ್ಮಶಾನದಲ್ಲಿ ಮಲಗಿದೆ. ಕೋವೋರರ ಮಾತು ಎಷ್ಟು ಅರ್ಥಗರ್ಭಿತ ಎನ್ನುವುದು ಈಗ ಸರ್ವವಿಧಿತ.

ಡಾ. ಕೋವೂರ್ ಹೇಳುವಂತೆ - ಪ್ರಾರ್ಥನೆ, ಪೂಜೆ, ಬಳಿ ತೆಗೆಯುವುದು. ಕಾಸ್ಮಿಕ್ ಹೀಲಿಂಗ್ - ಇತ್ಯಾದಿಗಳೆಲ್ಲಾ ಕೇವಲ ಸ್ವಲ್ಪ ಮಟ್ಟಿಗೆ ಮಾನಸಿಕ ಪ್ರಭಾವವನ್ನು ಬೀರುತ್ತವೆ. ಅಷ್ಟೆ. ಅವೆಲ್ಲಾ ಮಾದಕ ದ್ರವ್ಯಗಳಂತೆ ಮನುಷ್ಯನ ಮಿದುಳಿನ ಮೇಲೆ ಪ್ರಭಾವ ಬೀರುತ್ತವೆ. ಪವಿತ್ರವೆಂದೆನಿಸಿಕೊಂಡವುಗಳನ್ನು ಅಪವಿತ್ರಗೊಳಿಸಿದಲ್ಲಿ, ದೇವ ದೈವಗಳ ನಿಯಾಮಾವಳಿಗಳನ್ನು ಉಲ್ಲಂಘಿಸಿದ ಸಂದರ್ಭಗಳಲ್ಲಿ ಮುಗ್ಧ ಜನರನ್ನು ಕಾಡುವ ತೀವ್ರ ಭಯವೇ ಈ ಎಲ್ಲಾ ಮಾನಸಿಕ ಕಾಯಿಲೆಗಳ ಮೂಲ.

ಡಾ. ಕೋವೂರ್ ಈ ಮಾನವ ನಿರ್ಮಿತ ಮೂಢನಂಬಿಕೆಗಳನ್ನು ತಮ್ಮ ಯೌವನಾವಸ್ಥೆಯಲ್ಲಿಯೇ ಅರ್ಥೈಸಿ ಕೊಂಡಿದ್ದರೂ ಅದಕ್ಕೆಂದೇ ಅವರು ಎರಡು ವರ್ಷಗಳ ಕಾಲ ಜೋತಿಷ್ಯ, ಹಸ್ತಸಾಮುದ್ರಿಕೆ ಮುಂತಾದವುಗಳನ್ನೆಲ್ಲಾ ಅಮೂಲಾಗ್ರವಾಗಿ ಕಲಿತರು. ಅವರೇ ಎನ್ನುವಂತೆ ಆದರಿಂದಾದ ಲಾಭವೆಂದರೆ ಅವುಗಳು ಕೇವಲ 'ನಿರರ್ಥಕ' - ಎಂಬ ತಿಳಿವು ಬಂದುದು. ತಮ್ಮ ಜೀವನದ ಎಷ್ಟೋ ಘಟನೆಗಳನ್ನು ಅವರು ಜ್ಯೋತಿಷ್ಯದಲ್ಲಿ ಹೇಳಿದ ಅತ್ಯಂತ ಕೆಟ್ಟ ಗಳಿಗೆಯಲ್ಲಿಯೇ ತೊಡಗಿಸಿಕೊಂಡಿದ್ದರು. ಇದರಿಂದ ಅವರಿಗಾದ ಅನುಭವವೆಂದರೆ - ಆ ನಂಬಿಕೆಗಳ ಅಸಂಬದ್ಧತೆ, ಇಂಡಿಯಾದಲ್ಲಿರುವ ತಮ್ಮ ಆಸ್ತಿಯನ್ನು ಮಾರುವ ಸಂದರ್ಭದಲ್ಲಿ ಒಬ್ಬ ಒಳ್ಳೆಯ ಗಿರಾಕಿ - ಕೋವೂರ್ ಆರಿಸಿದ ದಿನಾಂಕ ಕೊಳ್ಳುವವರಿಗೂ ಕೊಂಡವನಿಗೂ ಅಪಾಯಕಾರಿಯೆಂದು ಬಿಟ್ಟು ಹೋದ. ತಾವು ಮದುವೆಯಾದಾಗ ಎಡಗಾಲನ್ನು ಮುಂದಕ್ಕೆ ಹಾಕಿ ಹೊಸ್ತಿಲು ದಾಟಿದ್ದಕ್ಕೆ ಅವರ ವಯಸ್ಸಾದ ತಾಯಿ ಬಹಳ ಕಾಲ ಅಳುತ್ತಿದ್ದರಂತೆ. ಕೊಲೊಂಬಾದ ಸಮಂಕಪಾಗಲ್ಲಿಯಲ್ಲಿರುವ ಅವರ 'ಟಿರುವಿಲ್ಲಾ' ಬಂಗಲೆಯು ಕಂಟ್ರಾಕ್ಟರುಗಳು ಮತ್ತು ಕೆಲಸಗಾರರ ಇಚ್ಛೆಗೆ ವಿರುದ್ಧವಾಗಿ 'ಕೆಟ್ಟ ಗಳಿಗೆ' ಯಲ್ಲಿಯೇ ತಳಪಾಯವನ್ನು ಹಾಕಲಾಗಿತ್ತು. ಆದರೆ, 'ಇಂದಿಗೂ ಅದು ಗಟ್ಟಿಮುಟ್ಟಾಗಿದೆ' ಎಂದು ಅವರು ನಗುತ್ತಾ ಹೇಳುತ್ತಾರೆ.

ಆದರೆ, ಡಾ. ಕೋವೂರ್ ಅವರು ತಮ್ಮ ಸಂಶೋಧನೆಗಳನ್ನು ನಿವೃತ್ತಿಯಾದ ಮೇಲೆಯೇ ಹೊರಗೆಡಹಿದರು. ಮೌಢ್ಯವನ್ನು ಪ್ರಸಾರಮಾಡುವ ವಿಶ್ವವಿದ್ಯಾಲಯಗಳಲ್ಲಿ ಅವರು ಕೆಲಸ ಮಾಡಬೇಕಾಗಿದ್ದುದರಿಂದ ಅದಕ್ಕಿಂತ ಮುಂಚೆ ಆ ವಿಚಾರಗಳನ್ನು ಅವರು ಜಗತ್ತಿನೆದಿರು ಪ್ರಕಟಪಡಿಸಿಲಿಲ್ಲ.

ಸಂಪಾದಕೀಯ

ಓರಿಸ್ಸಾ ಅವ್ಯಾಹತ ದಾಳಿ ಆತಂಕಕಾರಿ

ಒರಿಸ್ಸಾದಲ್ಲಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತ ಲಕ್ಷ್ಮಣಾನಂದ ಸರಸ್ವತಿಯವರ ಕೊಲೆಗೆ ಪ್ರತೀಕಾರವಾಗಿ ಇಡೀ ಒರಿಸ್ಸಾ ರಾಜ್ಯದಾದ್ಯಂತ ಸಂಘ ಪರಿವಾರದಿಂದ ನಡೆದಿರುವ ಗಲಭೆ ಅತ್ಯಂತ ಆತಂಕ ಹುಟ್ಟಿಸುವಂತಾಗಿದೆ. ಈಗಾಗಲೇ ಆ ಕೊಲೆಯನ್ನು ಕ್ರಿಶ್ಚಿಯನ್ನರೇ ಮಾಡಿದ್ದಾರೆಂದು ತೀರ್ಮಾನಿಸಿ ಬಿಟ್ಟಿರುವ ಸ್ವಘೋಷಿತ ನ್ಯಾಯಾಧೀಶರು ಕ್ರೈಸ್ತ ಸನ್ಯಾಸಿಯನ್ನು ಜೀವಂತ ದಹಿಸಿರುವ ಘಟನೆ ಅತ್ಯಂತ ಬರ್ಬರ, ಅಮಾನವೀಯವಾದುದು ಮತ್ತು ಮುಂದುವರಿದಿರುವ ಧಾಳಿಯಲ್ಲಿ ಅಪಾರ ಪ್ರಮಾಣದಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಆಸ್ತಿ, ಕಟ್ಟಡಗಳ ಧ್ವಂಸ, ಮತಾನುಯಾಯಿಗಳ ಮೇಲೆ ಧಾಳಿ ಅವ್ಯಾಹತವಾಗಿ ನಡೆದೇ ಇದ್ದು, ರಾಜ್ಯ ಸರ್ಕಾರ ಅವುಗಳನ್ನು ನಿಯಂತ್ರಿಸಲಾಗದೇ ಇರುವುದು ದಿಗ್ಭ್ರಮೆ ಹುಟ್ಟಿಸುವಂತಹದ್ದು. ಸರ್ಕಾರವೊಂದು ತನ್ನ ನಾಗರೀಕರಿಗೆ ಸೂಕ್ತ ರಕ್ಷಣೆ ನೀಡಲಾಗದೇ ಕಾನೂನು ಸುವ್ಯವಸ್ಥೆ, ಸಂವಿಧಾನ ಜಾರಿಗೊಳಿಸದೇ ಇರುವುದು ಫ್ಯಾಶಿಸ್ಟ್ ಶಕ್ತಿಗಳ ಅಟ್ಟಹಾಸಕ್ಕೆ ಪೆಟ್ರೋಲ್ ಸುರಿದಂತಾಗಿದೆ. ತನ್ನ ಸರ್ಕಾರಕ್ಕೆ ಬಿಜೆಪಿ ಬೆಂಬಲಿಸಿದೆ ಎಂಬ ಕಾರಣದಿಂದ ಎಂತಹ ರಾಜಿಗೂ ಸಿದ್ಧವಾಗಿ, ಕ್ರಮ ವಹಿಸದಿರುವುದು ಖಂಡನೀಯ.


ವಿಹೆಚ್‌ಪಿ ಕಾರ್ಯಕರ್ತನ ಕೊಲೆಯ ಬಗ್ಗೆ ಕಾನೂನು ಪ್ರಕಾರ ಕ್ರಮ ವಹಿಸಬೇಕಿರುವುದು ಪೋಲಿಸ್ ಇಲಾಖೆ, ಸರ್ಕಾರ. ಆ ಬಗ್ಗೆ ತನಿಖೆಯಾಗಿ ಅಪರಾಧಿಗಳನ್ನು ಶಿಕ್ಷಿಸಬೇಕಾದ್ದು ಸರ್ಕಾರವೇ. ಇಂತಹ ನಿಷ್ಠುರ ಕ್ರಮ ವಹಿಸಲೇಬೇಕು. ಆದರೆ ಇದಾವುದಕ್ಕೂ ಆಸ್ಪದವನ್ನೇ ನೀಡದೇ, ವಿಹೆಚ್‌ಪಿ ತಾವೇ ಮುಂದಾಗಿರುವುದು ಕಾನೂನಿನ ಆಡಳಿತಕ್ಕೆ ಧಕ್ಕೆಯುಂಟು ಮಾಡುವಂತದ್ದು. ಇಂತಹ ಪ್ರತೀಕಾರ ಮನೋಭಾವ ಇಡೀ ಸಮಾಜವನ್ನು ದಳ್ಳುರಿಗೆ ತಳ್ಳುವಂತಹದ್ದು, ಇಂತಹ ಧಾಳಿಯಲ್ಲಿ ಹಾನಿಗೊಳಗಾದವರು. ಸುದ್ದಿ ಪ್ರಕಟಣೆಯಾದಕ್ಕಿಂತ ಇನ್ನೂ ಹೆಚ್ಚು ಎಂದೂ ಹೇಳಲಾಗುತ್ತಿದೆ.

ಇಂತಹುದೇ ಕೃತ್ಯಗಳನ್ನು ಹಿಂದೆ ಗುಜರಾತ್‌ನ ಗೋದ್ರಾ ಘಟನೆ ನೆಪ ಹೂಡಿ ಅಲ್ಪಸಂಖ್ಯಾತ ಮುಸ್ಲಿಮರ ಮಾರಣ ಹೋಮವನ್ನೇ ನಡೆಸಿ ಇಡೀ ದೇಶವೇ ತಲ್ಲಣಗೊಂಡಿದ್ದು ಇನ್ನೂ ಹಸಿರಾಗಿದೆ. ಒರಿಸ್ಸಾದಲ್ಲಿನ ಅವರ ಈ ಕೃತ್ಯಗಳು ಕೋಮುದ್ವೇಷ ಹುಟ್ಟಿಸಿ ರಾಜಕೀಯ ಅಧಿಕಾರ ಹಿಡಿಯುವ ಹುನ್ನಾರವೇ ಆಗಿದೆ.

ಈ ಪ್ರಯೋಗವನ್ನು ದೇಶದ ಹಲವೆಡೆ ಹಬ್ಬಿಸಲಾಗುತ್ತಿದೆ. ಅಧಿಕಾರ ಹಿಡಿದಿರುವ ಬಿಜೆಪಿ ಕರ್ನಾಟಕದಲ್ಲಿ ತನ್ನ ನೆಲೆ ಕ್ರೋಢೀಕರಿಸಿಕೊಳ್ಳಲು, ಆರ್.ಎಸ್.ಎಸ್. ಬಳಗದ ಕೃತ್ಯಗಳಿಗೆ ಪರೋಕ್ಷವಾಗಿ ಪ್ರತ್ಯಕ್ಷವಾಗಿ ಬೆಂಬಲಿಸುತ್ತಿದೆ. ಈಗ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಂಘ ಪರಿವಾರದಿಂದ ನಡೆದಿರುವ ಅಲ್ಪಸಂಖ್ಯಾತರ ಮೇಲಿನ ಹಲ್ಲೆಗಳು, ಕೊಲೆ ಯತ್ನಗಳು, ಪ್ರಾರ್ಥನಾ ಮಂದಿರಗಳ ಮೇಲಿನ ದಾಳಿಗಳು ಗುಜರಾತ್ ಒರಿಸ್ಸಾದ ಪ್ರಯೋಗಗಳನ್ನು ನೆನಪಿಸುತ್ತಿವೆ. ಇವೇ ಶಕ್ತಿಗಳು ಖ್ಯಾತ ಕಲಾವಿದ ಎಂ.ಎಫ್.ಹುಸೇನ್‌ರವರ ಕಲಾಕೃತಿಗಳನ್ನು ಧ್ವಂಸಗೊಳಿಸಲು ದೆಹಲಿಯಲ್ಲಿ ಧಾಳಿ ಮಾಡಿದ್ದು ಸಹ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಾಶಗೊಳಿಸುವಂತಹದ್ದೇ ಆಗಿದೆ.


ಆದ್ದರಿಂದ ರಾಜ್ಯದಲ್ಲಿಯೂ ಎಲ್ಲಾ ಮಾನವೀಯತೆ, ಪ್ರಗತಿ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲರೂ ಈ ಕೃತ್ಯಗಳನ್ನು ಖಂಡಿಸಿ,ಎದುರಿಸಬೇಕು. ಇಲ್ಲವಾದರೆ ಸೌಹಾರ್ದ ಕರ್ನಾಟಕವೇ ಕೋಮುದ್ವೇಷದ ಕೂಟವಾದೀತು.

ಕಾವಿ ಪಡೆಯ ಶಿಕ್ಷಣ 'ಸುಧಾರಣೆ'



'ನೀವು ಮಾಡಬೇಕಾದದ್ದನ್ನು ಹೊರಗೆ ಎಲ್ಲೂ ಹೇಳಬೇಡಿ, ಮಾಡಬೇಕಾದುದನ್ನು ಮಾಡಿಬಿಡಿ, ಮಾಡುವುದನ್ನು ಹೇಳಿದರೆ ಅದಕ್ಕೆ ವಿರೋಧಗಳು ಬರುತ್ತವೆ' ಇದು ರಾಜ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತನ್ನ ಸಂಪುಟದ ಸಚಿವರೊಬ್ಬರಿಗೆ ಹೇಳಿದ ಬಹಿ(ಅಂತ)ರಂಗದ ಕಿವಿಮಾತು! ಅವರು ಹೇಳಿದ್ದು ಉನ್ನತ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರಿಗೆ. ಅದೂ ಶಿಕ್ಷಣದ ಸುಧಾರಣೆಗೆಂದು ನಡೆದ ಸಮಾಲೋಚನಾ ಸಭೆಯಲ್ಲಿ. ಈ ಸಭೆ ಬೆಂಗಳೂರಿನ 'ಐಸೆಕ್'ನಲ್ಲಿ ಸಂಘ ಪರಿವಾರವೇ ಏರ್ಪಡಿಸಿದ್ದು. 'ಶಿಕ್ಷಣದ ಸುಧಾರಣಾ' ರೀತಿ ರಿವಾಜುಗಳನ್ನು ರೂಪಿಸಲು ನೆರೆದವರು ರಾಮಾಜೋಯಿಸ್‌ರಂತಹ ಚೆಡ್ಡಿ ಪಡೆಯೇ.

ಜನತೆಯಿಂದ ಆರಿಸಲ್ಪಟ್ಟ ಪ್ರಜಾಪ್ರಭುತ್ವೀಯ ಸರ್ಕಾರವಾಗಿ, ಅಂತಹ ಜನತೆಗೆ ಬದ್ಧವಾಗಿರುವ ಸರ್ಕಾರದ ಮುಖ್ಯಸ್ಥನಾಗಿ ಹೀಗೆ ಹೇಳಲು ಯಡಿಯೂರಪ್ಪರಿಗೆ ಎಳ್ಳಷ್ಟು ಸಂಕೋಚ ಇಲ್ಲ ಎಂಬುದೇ ಒಂದು ದೊಡ್ಡ ದುರಂತದ, - ಅಪಾಯದ ಸನ್ನಿವೇಶವನ್ನು ಮತ್ತೆ ತೋರಿಸುತ್ತದೆ. ಸರ್ಕಾರ ಯಾವುದೇ ಮೂಲಭೂತ ನೀತಿ, ಕ್ರಮ ಕೈಗೊಂಡರೂ ಅದು ಅಸೆಂಬ್ಲಿಯಲ್ಲಿ- ಸಾರ್ವಜನಿಕ ವಾಗಿಯೂ ವ್ಯಾಪಕ ಚರ್ಚೆಯಾಗಬೇಕು. ಆ ಅಭಿಪ್ರಾಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಅವುಗಳನ್ನು ಅಳವಡಿಸಿಕೊಳ್ಳಬೇಕು, ಬದ್ಧವಾಗಿಯೂ ಇರಬೇಕು. ಆದರೆ ಇವರಿಗೆ ಇವಾವೂ ಬೇಡ. ಯಡಿಯೂರಪ್ಪನವರ ಹೇಳಿಕೆಯು ಪ್ರಜಾಪ್ರಭುತ್ವವನ್ನು ಒಂದು ಪ್ರಹಸನವೆಂದು ಬಗೆದ, ಸಿಕ್ಕ ಅಧಿಕಾರವನ್ನು ನೀತಿ, ನಿಯಮ, ರೂಢಿಗಳನ್ನು ಗಾಳಿಗೆ ತೂರಿ ಮುಚ್ಚಿಟ್ಟ ಫ್ಯಾಸಿಸ್ಟ್ ಅಜೆಂಡಾಗಳನ್ನು ಜಾರಿಗೊಳಿಸ ಬೇಕು ಎಂಬ ಹಿಡನ್ (ಬಚ್ಚಿಟ್ಟ) ಅಜೆಂಡಾದ ಅಭಿವ್ಯಕ್ತಿಯೇ ಆಗಿದೆ. ಇಂತಹದ್ದನ್ನು ಪಿತೂರಿ, ಬುಡಮೇಲು ಎಂದೇ ಕರೆಯಬೇಕಾಗುತ್ತದೆ.



ಬೆಂಗಳೂರಿನ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಒರಿಸ್ಸಾದಲ್ಲಿನ ಹತ್ಯಾಕಾಂಡ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಪರವಾಗಿ ಮಾತನಾಡುತ್ತಿರುವ ಕೆ.ಎನ್.ಉಮೇಶ್

ಈಗಾಗಲೇ ಹಲವು ಬಾರಿ ಗಮನಿಸಿದಂತೆ ಬಿಜೆಪಿ ಆಡಳಿತ ಪಕ್ಷವಾಗಿ ಅಧಿಕಾರದಲ್ಲಿರುವಾಗಲೇ ನಿಜವಾದ ಸ್ವರೂಪದಲ್ಲಿ ಸಂವಿಧಾನಕ್ಕೆ ನಿಷ್ಠವಾಗಿರದ, ಸಂವಿಧಾನೇತರ, ಪ್ರಜಾಪ್ರಭುತ್ವ ವಿರೋಧಿಯಾಗಿ ಫ್ಯಾಸಿಸ್ಟ್ ಮನೋಭಾವದ ಆರ್.ಎಸ್.ಎಸ್. ಇದರ ಚಾಲಕ - ಕೀಲಕ. ಇಡೀ ಆಡಳಿತ ಯಂತ್ರವನ್ನು ತನ್ನ ಉದ್ದೇಶಕ್ಕೆ ಬಳಸಲು ಸಂಘ ಪರಿವಾರ ಎಳ್ಳಷ್ಟು ವಿಳಂಬಿಸದೇ ಕಾರ್ಯಾಚರಣೆಗೆ ಇಳಿದಿದೆ. ಸಂಘ ಪರಿವಾರದ ಅಜೆಂಡಾ ಜಾರಿಯಲ್ಲಿ ಅದಕ್ಕೆ ಶಿಕ್ಷಣ ಅತ್ಯಂತ ಪ್ರಿಯವಾದ ವಿಷಯ. ಏಕೆಂದರೆ ಎಳೆಯ ಮೆದುಳು - ಮನಸ್ಸುಗಳಿಗೆ ವಿದ್ವೇಷದ ವಿಷ ಪ್ರಾಶನ ಮಾಡುತ್ತಾ ಹೋದರೆ ಮುಂದೆ ಅದು ವಿಷವೃಕ್ಷವನ್ನಾಗಿಸಿ, ಅದರ ವಿಷಫಲ ಹಲವು ಪೀಳಿಗೆಗಳಿಗೂ ಒಯ್ಯಬಹುದು ಎಂಬ ಅಪಾಯಕಾರಿ - ನಕಾರಾತ್ಮಕ ಪಾತ್ರವಿದೆ, ದುರಾಲೋಚನೆ ಇದೆ. ಆದ್ದರಿಂದ ಹಿಂದೆ ಹಲವು ದಶಕಗಳಲ್ಲಿ ವಿಶೇಷವಾಗಿ ಜೆಡಿ(ಎಸ್) ನೊಂದಿಗೆ ಸರ್ಕಾರದಲ್ಲಿ ಭಾಗಿಯಾಗಿರುವಾಗಲೇ 'ಕೇಶವಶಿಲ್ಪ'ದ ವಿದ್ವಾಂ(ಧ್ವಂ)ಸರು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಉದ್ದೇಶಗಳಿಗಾಗಿ ಹೇಗೆಲ್ಲಾ ಬದಲಾಯಿಸಬೇಕು ಎಂದು ನೀಲನಕ್ಷೆಯನ್ನು ರೂಪಿಸಿ ಜಾರಿಗೆ ತಳ್ಳಲು ಯತ್ನಿಸಿದ್ದಾರೆ. ಅದು ಅಷ್ಟು ಸಾಧ್ಯವಾಗಲಿಲ್ಲ. ಆದರೆ ಈಗ ಅವರದ್ದೇ ಸರ್ಕಾರ... ಅದಕ್ಕಾಗಿಯೇ ಆ ನೀಲನಕ್ಷೆಯನ್ನು ಇನ್ನಷ್ಟು ಆಳ - ನಿಖರಗೊಳಿಸಲು 'ಬೌದ್ಧಿಕ್ ಕಸರತ್ತು'ಗಳು ನಡೆದಿವೆ. ಈಗ ನಡೆಯುತ್ತಿರುವ ತಾಲೀಮು, ಯಡಿಯೂರಪ್ಪನವರ ಹೇಳಿಕೆ, ಮುಂದೆ - ಅನತಿ ದೂರದಲ್ಲೇ ಇಡೀ ಶಿಕ್ಷಣ ಕ್ಷೇತ್ರದ ಬುಡಮೇಲು ಪಿತೂರಿಗಳು ಜಾರಿಗೊಳ್ಳಲಿವೆ. ಕೋಮುವಾದೀಕರಣ ವ್ಯಾಪಕವಾಗಿ ಅತ್ಯಂತ ಕ್ಷಿಪ್ರವಾಗಿ ನಡೆಯಲಿವೆ. ಇಂತಹ ಸುಳಿವಾಗಿ ಸಾರ್ವಜನಿಕ ಶಿಕ್ಷಣದ ಆಯುಕ್ತರು 'ಮುಂದಿನ ವರ್ಷ ಪಠ್ಯಪುಸ್ತಕಗಳು ಬದಲಾಗಲಿವೆ' ಎಂದು ಹೇಳಿದ್ದಾರೆ. (ಬಹುಶಃ ಅದೆಂತಹ ಬದಲಾವಣೆಯೆಂದು ಅವರಿಗೇ ತಿಳಿದಿರಲಿಕ್ಕಿಲ್ಲ). ಯಡ್ಡಿಯ ತಾಕೀತು ಇಂತಹದ್ದಕ್ಕೆ ಇರಬಹುದು.

ಒರಿಸ್ಸಾದನಲ್ಲಿನ ಕ್ರಿಶ್ಚಿಯನ್ನರ ಮೇಲಿನ ಅಮಾನುಷ ಧಾಳಿಗಳನ್ನು ಪ್ರತಿಭಟಿಸಿ ರಾಜ್ಯದಲ್ಲಿ ಕ್ರಿಶ್ಚಿಯನ್ ಆಡಳಿತ ಮಂಡಳಿಗಳು ಶಾಲಾಕಾಲೇಜು ಬಂದ್ ಮಾಡಿ ಪ್ರಜಾಸತ್ತಾತ್ಮಕವಾಗಿ ಪ್ರತಿಭಟನೆ ನಡೆಸಿದರೆ, ಶಿಕ್ಷಣ ಸಚಿವರು 'ಇದಕ್ಕೆ ಸರಿಯಾದ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ಬೀದಿ ರೌಡಿಯಂತೆ ಬೆದರಿಕೆ ಒಡ್ಡಿದ್ದಾರೆ.

ಒಂದೆಡೆ ಸಂಘ ಪರಿವಾರ / ಸರ್ಕಾರ ಧಾರ್ಮಿಕ ಕ್ಷೇತ್ರದಲ್ಲಿಯೂ ಕೈಹಾಕಿ ಮಲಿನಗೊಳಿಸುತ್ತಿದೆ. ವಿಭಜನೆ ತರುತ್ತಿದೆ. ಸಂಘ ಪರಿವಾರ ನಿಷ್ಠ ಮಠಾಧೀಶರಿಗೆ - ರಾಜರಿಗೆ ಪ್ರಸಿದ್ಧ ಸಾರ್ವಜನಿಕ ದೇವಾಲಯಗಳನ್ನು ಹಸ್ತಾಂತರಿಸಿ ಜನರ ದೇವರ ನಂಬಿಕೆ - ಭಕ್ತಿಯನ್ನು ಖಾಸಗೀಕರಣ-ವ್ಯಾಪಾರೀಕರಣಗೊಳಿಸುತ್ತಿದೆ. ಅಂದರೆ ಧಾರ್ಮಿಕರಿದ್ದು ಜಾತ್ಯಾತೀತ - ಮನೋಭಾವದ, ಪರಧರ್ಮ ಸಹಿಷ್ಣುತೆ ಹೊಂದಿರುವ ಭಕ್ತ ಜನರನ್ನು ಸಂಘಪರಿವಾರಕ್ಕೆ ಒಪ್ಪಿಸುವುದು, ಅವರನ್ನು ಹಂತಹಂತವಾಗಿ ಕೋಮುವಾದೀಕರಿಸುವುದು ಅವರ ಬಹುದೊಡ್ಡ ಉದ್ದೇಶ. ಇಷ್ಟು ಮಾತ್ರವೇ ಅಲ್ಲದೇ ಚೆಡ್ಡಿಪಡೆ ರಾಜ್ಯಾದ್ಯಂತ ಒಂದಿಲ್ಲೊಂದು ನೆಪಹೂಡಿ ಮುಸ್ಲಿಂ - ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಧಾಳಿಗಳನ್ನು ಪುನರಾರಂಭಿಸಿದೆ. ಮಂಗಳೂರಿನಲ್ಲಿ ಕೊಲೆಗಳು - ಕೊಲೆ ಯತ್ನಗಳು, ಹೆಗ್ಗಡದೇವನ ಕೋಟೆ, ಬೆಂಗಳೂರು ಗ್ರಾಮಂತರದಲ್ಲಿ ಹಸುಗಳನ್ನು ಬಳಸುತ್ತಿರುವುದು, ಮಂಡ್ಯದ ಕೆ.ಆರ್.ಪೇಟೆಯಲ್ಲಿ ಗಡ್ಡಬಿಟ್ಟ, ಪ್ರಾರ್ಥನೆ ಬೋಧಿಸುವ ಮುಲ್ಲಾಗಳನ್ನು ಭಯೋತ್ಪಾದಕರೆಂದು ಘೋಷಿಸಿ 'ಕ್ರಮ' ಕೈಗೊಂಡದ್ದು, ದರ್ಗಾಗಳಲ್ಲಿ ಬಳಸುವ ಧಾರ್ಮಿಕ ಧ್ವಜವನ್ನೇ ಪಾಕಿಸ್ತಾನದ ಧ್ವಜವೆಂದು ಚಿಂತಾಮಣಿ, ಮುರುಗಮಲ್ಲ ಮುಂತಾದೆಡೆ ಗಲಾಟೆ ಎಬ್ಬಿಸಿದ್ದು... ಹೀಗೆ ಸಾಗುತ್ತಲೆ ಇವೆ. ಇನ್ನು ಬಾಬಾಬುಡನ್ ಗಿರಿಯ ಗುಹೆಯ ಆಚರಣೆ - ಸ್ವರೂಪವನ್ನೇ ಸೌಹಾರ್ದತೆಯ ಪರಂಪರೆಯನ್ನೇ ನಾಶಗೊಳಿಸಲು ಸರ್ಕಾರವೇ ತನ್ನ ಯಂತ್ರವನ್ನು ಅತ್ಯಂತ ಯೋಜಿತವಾಗಿ ಬಳಸಿ ಬುಡಮೇಲು ಮಾಡಲು ಕಾರ್ಯ ಪ್ರವೃತ್ತವಾಗಿದೆ. ಹಂಪಿಯನ್ನು ಉದ್ರಿಕ್ತತೆಯ ತಾಣವನ್ನಾಗಿಸಲು ಕರಸೇವಕರು ಟೊಂಕ ಕಟ್ಟಿ ನಿಂತಿದ್ದಾರೆ. ಇನ್ನೂ ಇಂತಹ ಅದೆಷ್ಟು 'ಸ್ಫೋಟಕ ವಿಷ ಸರ್ಪ'ಗಳು ಸಂಘ ಪರಿವಾರದ ಹುತ್ತದೊಳಗೆ ಇವೆಯೋ!


ನಮ್ಮ ಜನಸಂಸತಿ, ಸೌಹಾರ್ದತೆ, ಪ್ರಗತಿಯನ್ನು ರಕ್ಷಿಸಿ, ಮುಂದೊಯ್ಯಲು, ಇಂತಹ ಹುನ್ನಾರಗಳ ವಿರುದ್ಧ ಎಲ್ಲರು ಧ್ವನಿಯೆತ್ತುವುದು ಅತ್ಯಗತ್ಯ ಅಲ್ಲವೇ? ಇದು ಕ್ರಿಯಾಶೀಲತೆಗೆ ಮತ್ತೊಂದು ಸವಾಲು, ಸಕಾಲ.

ಸಾವಿನ ಭಯ, ಮಕ್ಕಳಿಗೆ ರಾತ್ರಿ ಇಡೀ ಜಾಗರಣೆ

ಜನಮರುಳೋ.. ಜಾತ್ರೆ ಮರುಳೋ....

■ ಡಾ. ಕೆ. ಲಿಂಗಪ್ಪ,
ರಾಜ್ಯ ಉಪಾಧ್ಯಕ್ಷ, ಬಿಜಿವಿಎಸ್, ಗುಲ್ಬರ್ಗಾ

ರಾತ್ರಿ ಕಳೆದು ಬೆಳಗಿನ ಜಾವ ಸುಮಾರು 1.30 ಆಗಿರಬಹುದು. ಅನಾಮಧೇಯ ಫೋನ್ ಕರೆಯೊಂದು ಗಾಢವಾದ ನಿದ್ರೆಯಲ್ಲಿದ್ದ ನನ್ನನ್ನು ಬಡಿದೆಬ್ಬಿಸಿತ್ತು. ನಾನು ಕೂಡ ನಿದ್ದೆಗಣ್ಣಿನಲ್ಲಿಯೆ ಗಾಬರಿಯಿಂದ ತಡಬಡಿಸುತ್ತಾ ಬೇಸರದ ಮನಸ್ಸಿನಲ್ಲಿಯೆ ಇದು ಯಾವುದೋ ಅಹಿತಕರ ಘಟನೆಯ ಸುದ್ದಿ ಹೊತ್ತು ತಂದಿರಬಾರದೆಂದು ಆಶಿಸಿ ಫೋನ್ ರೀಸಿವ್ ಮಾಡಿದೆ. ಫೋನಿನಲ್ಲಿ ಮಾತಾಡುವ ವ್ಯಕ್ತಿ ಯಾರೆಂದು ತಿಳಿಯುವ ಮೊದಲೇ 'ಸಾರ್ ಚಂದ್ರಗಹಣದ ನಿಮಿತ್ತ ಕೆಟ್ಟ ಸಮಯ ಬಂದಿದೆಯಂತೆ. ಆದುದರಿಂದ ಹನ್ನೆರಡು ವರ್ಷದೊಳಗಿನ ಮಕ್ಕಳು ನಾಲ್ಕು ಗಂಟೆಯವರೆಗೆ ಮಲಗದೆ ಜಾಗರಣೆ ಮಾಡಬೇಕಂತೆ, ಮಲಗಿದರೆ ಮಕ್ಕಳು ಗ್ರಹಣ ದೋಷದಿಂದ ಸಾಯುತ್ತವಂತೆ' ಎಂದು ಭಯ ಮಿಶ್ರಿತ ಧ್ವನಿಯಲ್ಲಿ ಉಸುರಿತು. ತಣ್ಣನೆಯ ಆ ನಡು ರಾತ್ರಿಯಲ್ಲಿಯೂ ಕೂಡ ನನ್ನ ಮೈಯೆಲ್ಲಾ ಕೆಂಡಮಂಡಲವಾದರೂ ತುಂಬಾ ಅತ್ಮೀಯತೆಯಿಂದ ಆ ಧ್ವನಿಯನ್ನು ನೀವು ಯಾರೆಂದು ವಿಚಾರಿಸಿದೆ. ಅಗ ಅನಾಮಧೇಯ ವ್ಯಕ್ತಿ 'ಸಾರ್, ನಾನು ಸರ್, 'ಸಾಂಸ್ಕೃತಿಕ ರಾಯಬಾರಿಗಳು' ತರಬೇತಿ ಶಿಬಿರಕ್ಕೆ ಬಂದಂತಹ ಶಿಭಿರಾರ್ಥಿ, ನಿನ್ನೆ ನೀವು ನಮ್ಮ ಶಿಬಿರದಲ್ಲಿ ನಿಮಗೆ ಯಾವುದಾದರೂ ತೊಂದರೆಯಾದರೆ ನಮಗೆ ಫೋನ್ ಮಾಡಿ ಅಂತ ಫೋನ್ ನಂಬರ್ ಕೊಟ್ಟಿರಲ್ಲಾ (ಅದರ ಹಿಂದಿನ ದಿನವೇ ಗುಲಬರ್ಗಾ ವಿಶ್ವ ವಿದ್ಯಾಲಯದಲ್ಲಿ ನಡೆದ ವಿಭಾಗ ಮಟ್ಟದ ಸಾಂಸತಿಕ ರಾಯಬಾರಿಗಳು ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ವೈಜ್ಞಾನಿಕ ಮನೋಬಾವ ಬೆಳೆಸಲು ಭಾರತ ಜ್ಞಾನ ವಿಜ್ಞಾನ ಸಮಿತಿ ಹಾಗು ಸಮುದಾಯ ಗುಲಬರ್ಗಾ ಕಾರ್ಯಕ್ರಮ ಕೊಟ್ಟಿದ್ದೆವು) ಆದಕ್ಕೆ ಫೋನ್ ಮಾಡುತ್ತಿದ್ದೇನೆ ಸಾರ್'



ಅಂತ ಹೇಳಿದ. ಆ ಕ್ಷಣದಲ್ಲಿ ಆ ಹುಡುಗನಿಗೆ ಹೇಗೆ ಸ್ಪಂದಿಸಬೇಕೂ ತಿಳಿಯಲಿಲ್ಲ, ಅದರೂ ಕೂಡ ಅವನನ್ನುದ್ದೇಶಿಸಿ ಅಂತಹ'ದೇನೂ ಅಗಲ್ಲ ನಿಶ್ಚಿಂತತೆಯಿಂದ ಮಲಗು ನಾಳೆ ಬೇಕಾದರೆ ಮಾತಾಡೋಣ ಅಂತ ಹೇಳಿ ಈ ವಿಷಯವನ್ನು ಅಷ್ಟು ಗಂಭೀರವಾಗಿ ಪರಿಗಣಿಸದೆ ನಡು ರಾತ್ರಿಯಲ್ಲಿ ನಿದ್ದೆಗೆಡಿಸಿದ ಅವನನ್ನು ಶಪಿಸುತ್ತಾ ಫೋನಿಟ್ಟೆ.

ಇನೇನು ನಿದ್ದೆಯು ತೆಕ್ಕೆಗೆ ಜಾರಬೇಕುವೆನ್ನುವಷ್ಟರಲ್ಲಿ ರಾಯಚೂರಿನಿಂದ ಮತ್ತೊಂದು ಕರೆ ಬಂತು. ಅದು ನನ್ನ ಬಾಲ್ಯದ ಗೆಳೆಯ ಸೈಯದ್ ಪಾಶಾನದು ಆಗಿತ್ತು. ಇವನು ಕೂಡ ಮೊದಲಿನವನ್ನಷ್ಟೆ ಗಾಬರಿಯಿಂದ ಹಳೆ ಪುರಾಣವನ್ನೇ ಬಿಚ್ಚಿ 'ನಿನ್ನ ಮಕ್ಕಳನ್ನು ಬೇಗ ನಿದ್ದೆನಿಂದ ಎಬ್ಬಿಸಿ ಹೊರಗೆ ಕರೆದು ಕೊಂಡು ಹೋಗು ಹಾಗೂ ಮಕ್ಕಳನ್ನು ಮಲಗದಂತೆ ಜಾಗರಣೆ ಮಾಡಿಸು, ಇಲ್ಲವಾದರೆ ಮಕ್ಕಳಿಗೆ ಅವಘಡಗಳು ಸಂಭವಿಸುತ್ತವೆ' ಅಂತ ಹೇಳಿ'ದ. ಹಾಗೆಯೇ, ಇಂತಿಂತಹ ಊರಲ್ಲಿ ಇಷ್ಟಿಷ್ಟು ಮಕ್ಕಳು ಸತ್ತಿದ್ದಾರಂತೆ ಅಂತ ಅಂಕೆ ಸಂಖ್ಯೆಯ ವರದಿ ಒಪ್ಪಿಸುತ್ತಿರವಾಗಲೆ ಫೋನ್ ಸರಿಯಾಗಿ ಕೇಳಿಸದ ಕಾರಣ ಬಾಗಿಲು ತೆರೆದು ಹೊರಗಡೆ ಬಂದೆ. ಹೊರಗಡೆ ಬಂದಾಗಲೆ ತಿಳಿದಿದ್ದು ಈ ವಿಷಯ ಎಷ್ಟು ಪ್ರಕೋಪಕ್ಕೆ ಹೋಗಿದೆ ಅಂತ. ಏಕೆಂದರೆ, ಈ ಹೊತ್ತಿಗಾಗಲೆ ಕತ್ತಲೆಯನ್ನೆ ಹೊದ್ದು ಮಲಗುವಂತಹ ಜನ ಅಂದು ತಮ್ಮ ತಮ್ಮ ಮಕ್ಕಳನ್ನು ಕಂಕುಳಲ್ಲಿ ಹಿಡಿದುಕೊಂಡು ಭಯದಿಂದ ಅತಿಂದಿತ್ತ ಓಡಾಡುತ್ತಿರುವುದು ಹಾಗೂ ಅದರ ಬಗ್ಗೆಯೇ ಚರ್ಚಿಸುವುದು ಆ ನಡು ರಾತ್ರಿಯಲ್ಲಿ ಸಾಮಾನ್ಯವಾಗಿತ್ತು. ಅವರು ಕೂಡ ಇಂತಹ ಫೋನ್ ಕರೆಗಳಿಂದ ಕಂಗೆಟ್ಟು ತಮ್ಮ ಮಕ್ಕಳನ್ನು ನಿದ್ರೆಯಿಂದ ಬಲವಂತವಾಗಿ ಹೊಡೆದೆಬ್ಬಿಸಿ ಅವುಗಳನ್ನು ಜಾಗರಣೆ ಮಾಡುವಂತೆ ತಾಕೀತು ಮಾಡುತ್ತಿದ್ದರೆ ಅವು ನಿದ್ದೆಗಾಗಿ ಅಂಗಲಾಚಿ ಹೋ ಎಂದು ಅಳುವ ಶಬ್ದ, ಗೊಂದಲ ಹಾಗೂ ಗಜಬಿಜಿ ನೋಡಿದವರ ಮನ ಕರಗುವಂತ್ತಿತ್ತು. ಎಲ್ಲರ ಮುಖದಲ್ಲಿಯೂ ಆತಂಕದ ಕರಿನೆರಳು. ಈ ವದಂತಿ ಹಬ್ಬಿಸಿದವರು ಯಾರು, ಏಕೆ ಹಬ್ಬಿಸಲಾಯಿತು ಅವರಿಗೆ ಬಂದ ಲಾಭವಾದರೂ ಏನು ತಿಳಿಯದಾಗಿದೆ. ಈ ಸುದ್ದಿಗಳಿಗೆ ಇಬ್ಬುಕೊಟ್ಟಂತೆ ಟಿ.ವಿ. ಮಾಧ್ಯಮಗಳು ಕೂಡ ಜನರ ಮುಗ್ಧತೆಯನ್ನು ಬಂಡವಾಳವನ್ನಾಗಿಸಿ ಕೊಂಡು 'ಹನ್ನೆರುಡು ವರ್ಷದವಳಗಿನ ಮಕ್ಕಳು ಮಲಗಿದರೆ ಸಾವು ಖಚಿತ' ಅಂತ ಕಣ್ಣಿಗೆ ರಾಚುವಂತೆ ಕೆಲ ಸಮಯದವರೆಗೆ ಬಿತ್ತರಿಸಿದ್ದು ಎಂತಹವರಿಗೂ ನಾಚಿಗೆ ತರುವಂತಹ ವಿಷಯ.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಷ್ಟೊಂದು ಪ್ರಮಾಣದಲ್ಲಿ ಬೆಳೆದರೂ ಜನರು ಇಂತಹ ಸುಳ್ಳು ವದಂತಿಗಳಿಗೆ ಮಾರು ಹೋಗುತ್ತಿರುವುದು

ಪುಟ 6ಕ್ಕೆ

ಗಣಪನಿಗೆ ಪೆಟ್ರೋಲ್ ಬೆಲೆಯೇರಿಕೆ ಬಿಸಿ ತಟ್ಟಲ್ಲ !

ಈ ಬಾರಿ ಗಣಪತಿ ಹಬ್ಬ ಮುಗಿದು ಗಣಪ ತನ್ನ ಇಲಿಯ ಮೇಲೆ ಹೋಗುವಾಗ ಬಿದ್ದು ಹೊಟ್ಟೆ ಒಡೆಯುವ ಸಂಭವ ಖಂಡಿತಾ ಇಲ್ಲ. ಏಕೆಂದರೆ ಎಲ್ಲಾ ಪದಾರ್ಥಗಳ ಬೆಲೆಯೂ ಈ ಪಾಟಿ ಬೆಲೆ ಏರಿಕೆ ಆಗಿರುವಾಗ ಹೊಟ್ಟೆ ತುಂಬಿ ಜಾಸ್ತಿಯಾಗುವುದಿರಲಿ, ಗಣಪ ಉಪವಾಸ ಬೀಳದಿದ್ದರೆ ಸಾಕು! ಇನ್ನು ಎಣ್ಣೆಯಲ್ಲಿ ಕರಿಯುವ ತಿಂಡಿಗಳಾದ ಕಡುಬು ಚಕ್ಕುಲಿ ಮುಂತಾದುವು ಮಿನಿ ಸೈಜಿನಲ್ಲಿ ಶಾಸ್ತ್ರಕ್ಕೆ ಮಾತ್ರ ಸಿಗಬಹುದು. ಗೌರಮ್ಮನಿಗೆ ಬೆಲ್ಲದ ಹೋಳಿಗೆ ಬದಲು ಸಕ್ಕರೆ ಹೋಳಿಗೆಯೇ ಸಿಗಬಹುದು! ಏಕೆಂದರೆ ಸಕ್ಕರೆಯ ಬೆಲೆ ಜಾಸ್ತಿಯಾದರೂ, ಬೆಲ್ಲದ ಬೆಲೆ ಅದಕ್ಕಿಂತಲೂ ಜಾಸ್ತಿ. ಗಣಪನಿಗೆ ಪೆಟ್ರೋಲ್ ಬೆಲೆ ಏರಿಕೆ ಪ್ರತ್ಯಕ್ಷವಾಗಿ ಬಿಸಿ ತಟ್ಟಲಾರದು ಏಕೆಂದರೆ ಅವನ ವಾಹನ ಇಲಿ! ಪೆಟ್ರೋಲ್ ಡೀಸಲ್ ಏನೂ ಕೇಳಲ್ಲ. ಗಣಪತಿಯ ತೂಕ ಕಡಿಮೆಯಾಗಿ ಇಲಿಗೂ ಖುಷಿ. ಆದರೆ ಗೋಕರ್ಣದ ಗಣಪತಿಗೆ ಖುಷಿಯೋ ಬೇಸರವೋ ತಿಳಿದುಬಂದಿಲ್ಲ. ರಾವಣನ ಕೈಲಿ ತಲೆ ಜಜ್ಜಿಸಿಕೊಂಡು ನಿಂತಿರುವ ಚಪ್ಪಟೆ ತಲೆಯ ಗಣಪನನ್ನು ಜನ ತಮ್ಮ ಮನೆಯ ಬಾಲಕನೆಂಬತೆ ತಲೆ ಸವರಿ ಮೈದಡವುತ್ತಿದ್ದರು. ಈಗ ಗೋಕರ್ಣ ಮಠಬಾರೆ ಯಾಗಿರು ವುದರಿಂದ (ಪರಬಾರೆಯ ಹಾಗೆ) ಇನ್ನು ಆ ಗುಡಿಗೆ ಒಬ್ಬ ಪೂಜಾರಿ ಬಂದು ಜನ ಮಠದ ಅನುಮತಿ ಪಡೆದು ದೂರದಿಂದಲೇ ಈ ಗಣಪನ ದರ್ಶನ ಪಡೆಯಬೇಕಾಗಬಹುದು. ಆಗ ಮನೆಯ ಬಾಲಕನಂತಿರುವ ಈ ಗಣಪನೂ "ದೇವರಾಗುತ್ತಾನೆ". ಗಣಪ ಹಬ್ಬಕ್ಕೆ ಬಂದಾಗ ಕೇಳಿ ಅವನ ಅಭಿಪ್ರಾಯವನ್ನು ಮುಂದೆ ತಿಳಿಸಲಾಗುವುದು.

● ● ●

ಆಪರೇಷನ್ ಕಮಲ ಇನ್ನು ಮುಂದುವರೆಯುತ್ತಂತೆ . ಆದರೆ ಇನ್ನು ಮುಂದೆ ಆಪರೇಷನ್ ಆದವರಿಗೆ ಮಂತ್ರಿ ಖಾತೆ ಇಲ್ವಂತೆ.

"ಸದ್ಯ, ಬಚಾವಾದ್ವಿ" ಎಂದು ಬಿಜೆಪಿ ಸಚಿವರು ನಿಟ್ಟುಸಿರು ಬಿಟ್ಟರಲೂ ಸಾಕು.

ಯಾರೋ ಅನ್ಯಾಯವಾಗಿ ಮಂತ್ರಿಗಳ ಸಂಖ್ಯೆ ಮಿತಿಗೊಳಿಸಿಬಿಟ್ಟಿದ್ದಾರೆ. ಇಲ್ಲದಿದ್ದಲ್ಲಿ ಕನಿಷ್ಠ ನೂರಿಪ್ಪತ್ತು ಮಂತ್ರಿಗಳನ್ನು ನೋಡಬಹುದಾಗಿತ್ತು. (ಒಂದಿಷ್ಟು ಬಸ್‌ಗಳೂ, ಜೀವಗಳೂ ಉಳೀತಿದ್ದವು).

ಮಂತ್ರಿ ಪದವಿಗಳು ಮುಗಿದ ಮೇಲೆ ನಿಗಮ ಮಂಡಲಿಗಳು. ನಂತರ ಏನು ಮಾಡಬೇಕು ಪಾಪ ಜನಸೇವೆ ಮಾಡಲೆಂದೇ ಶಾಸಕರಾದವರು? ಮಠಗಳಿಗೆ ದೇವಸ್ಥಾನಗಳನ್ನು ದಾನ ಮಾಡಿದ ಹಾಗೆ ಸರ್ಕಾರೀ ಫ್ಯಾಕ್ಟರಿಗಳನ್ನು ಇಂಥವರಿಗೆ ಪರಿಹಾರವಾಗಿ ಕೊಡಬಹುದು. ಬರೀ ಟ್ರಾನ್ಸಫರ್ರು, ಕಂಟ್ರಾಕ್ಟು ಅಂತ ನಂಬಿ ಕುಳಿತ ಶಾಸಕರ ಗತಿ ಛೇ ಪಾಪ! ಇಂಥ ಶಾಸಕರು ಬರೀ ನೂರು ನೂರಿಪ್ಪತ್ತು ಜನ ಹೀಗೇ ಅಕ್ಕನ ಮನೆಗೆ ಅಮೆರಿಕಕ್ಕೆ ಹೋಗಿಬರೋಕು ತಕರಾರು ಎತ್ತೋ ಜನ ಇದ್ದಾರಲ್ಲ ಛೇ! ಐದು ಕೋಟಿಗೂ ಹೆಚ್ಚು ಜನರಲ್ಲಿ ನೂರಿಪ್ಪತ್ತು ಶಾಸಕರ ಸಂಖ್ಯೆ ಜಾಸ್ತಿಯೇ? ಅಮೆರಿಕಕ್ಕೆ ಅವರೇನು ಸುಮ್ಮನೆ ಹೋಗುತ್ತಾರೆಯೇ? ಕನ್ನಡ ಉದ್ಧಾರ ಮಾಡಲು ತಾನೆ. ಕನ್ನಡದ ಕೆಲಸಕ್ಕೆ ಕನ್ನಡಿಗರೇ ತೊಂದರೆ ಕೊಡಬಹುದೇ? ಕರ್ನಾಟಕದಲ್ಲಿ ಬರೀ ಇಂಗ್ಲೀಷ್ ಕಲಿಸಿ , ಎಲ್ಲ ಕಡೆ ಇಂಗ್ಲೀಷ್ ಬಳಸುತ್ತಿರುವಾಗ ನಾವು ಅಮೆರಿಕಾ ಇಂಗ್ಲೆಡ್ ಗಳಿಗೆ ಹೋಗಿ ಅಲ್ಲಿ ಮ್ಯೂಸಿಯಂಗಳಲ್ಲಿ ತಾನೆ ನೋಡಬೇಕು ಕನ್ನಡವನ್ನು?

ಶ್ರೀ

● ● ●

ರಾಮಚಂದ್ರಾಪುರದ ಮಠದ ಸ್ವಾಮಿಗೆ ಗೋಕರ್ಣ ಸ್ವಾಹಾ ಮಾಡಿದರೂ ಹೊಟ್ಟೆ ತುಂಬಿಲ್ಲ. ಇನ್ನೂ ಕುಕ್ಕೆ, ಯಾಣ ಮುಂತಾದ ದೇವಸ್ಥಾನಗಳ ಮೇಲೂ ಇವರ ಕಣ್ಣು ಬಿದ್ದಿದೆಯಂತೆ. ಹೀಗೆ ದೇವಸ್ಥಾನಗಳು ಮಾತ್ರವಲ್ಲ ಅಜ್ಜಂಪುರದ ಬಳಿಯ ಅಮೃತ ಮಹಲ್ ಗೋ ತಳಿ ಸಂಶೋಧನಾ ಕೇಂದ್ರಕ್ಕೂ ಕೈ ಚಾಚಿದ್ದಾರಂತೆ . ಹೀಗೆಲ್ಲ ಇರುವ ವಿಚಾರ ಹೇಳಿದರೆ ಮುನಿಗಳಂತೆ ಅವರಿಗೆ ಕೋಪ ಬರುತ್ತದೆ. ನಾವೇನೂ ಕೇಳಿಲ್ಲ. ನಮ್ಮ ಭಕ್ತ ಸರ್ಕಾರವೇ ತಮಗೆ ಗಿಫ್ಟ್ ಕೊಟ್ಟಿದೆ ಎಂದು ಹೇಳುತ್ತಾರೆ. ಏನೋ ಒಂದು ಬಿಡಿ ಎರಡರ ಪರಿಣಾಮವೂ ಒಂದೇ. ತಾವು ಮಾಡಿದ ರಾಮನ ಪೂಜೆ, ಯಜ್ಞಗಳು ಇಷ್ಟು ಸಮೃದ್ಧ ಫಲವನ್ನು ಇಷ್ಟು ಶೀಘ್ರವಾಗಿ ನೀಡಿರುವುದು ಸಂತೋಷ. ಹೀಗೇ ದಾನ ಧರ್ಮಗಳು ಹೆಚ್ಚಾಗಿ ರಾಜ್ಯದಲ್ಲಿ ರಾಮರಾಜ್ಯ ಸ್ಥಾಪನೆಯಾಗಬಹುದು.

ಶಿಕ್ಷಣ ಕ್ಷೇತ್ರದಲ್ಲಿ ಸದ್ದು ಗದ್ದಲವಿಲ್ಲದೆ ಬದಲಾವಣೆ ತರಲು ಸನ್ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ ಸಚಿವರಿಗೆ ಕಿವಿಮಾತು ಬಹಿರಂಗವಾಗಿ ಹೇಳಿದ್ದಾರೆ. ನೀವು ಸದ್ದು ಮಾಡಿದರೂ ಮಾಡದಿದ್ದರೂ ಮಾಡುವ ಕೆಲಸ ಏನೆಂದು ಗೊತ್ತು ಬಿಡಿ. ಅದೇ ತಾನೆ ಕೇಸರೀಕರಣ.

ಹೇಗಿದ್ದರೂ ಕೇಂದ್ರ ಸರ್ಕಾರ 500 ಮತ್ತು 1000 ರೂಪಾಯಿಯ ನೋಟುಗಳನ್ನು ಬದಲಾವಣೆ ಮಾಡುತ್ತಿದೆಯಂತೆ. ಅದರಲ್ಲಿ ಗಾಂಧಿ ಚಿತ್ರದ ಬದಲು ನಿಮ್ಮ ಮಹಾತ್ಮ ಗೋಡ್ಸೆಯ ಚಿತ್ರವನ್ನೇ ಹಾಕಿಸಿಬಿಡಿ. ನಕಲೀ ದೇಶಭಕ್ತರ ಚಿತ್ರ ಹಾಕಿ ಸರ್ಕಾರವೇ ಹೊಸ ನಕಲೀ ನೋಟುಗಳನ್ನೇ ಚಲಾವಣೆ ತಂದುಬಿಟ್ಟರೆ ನಕಲಿ ನೋಟುಮಾಡುವವರಿಗೆ ತಾವು ನಕಲಿನೋಟಿನ ವಿರುದ್ಧ ಅಸಲೀ ನೋಟನ್ನು ಮಾಡಬೇಕೋ ಅಥವಾ ನಕಲೀ ನೋಟಿನ ನಕಲೀ ನೋಟನ್ನು ಮಾಡಬೇಕೋ ಎಂದು ಸಿಕ್ಕಾಪಟ್ಟೆ ಗೊಂದಲವಾಗಿ ಬಿಟ್ಟು ಸಮಸ್ಯೆ ಬಗೆಹರಿಯಬಹುದು.

'ಈ ಭೂಮಿ ಉಳ್ಳವರಿಗೆ - ಬಡಬಗ್ಗರಿಗಲ್ಲ'

ಲ್ಲಿ ಮುಂಜಾನೆಯೇ ಪೊಲೀಸರ ಕಾರುಬಾರು. ಡೆಗೋಡೆ ನಿರ್ಮಾಣ. ಮಹಿಳಾ ಪೊಲೀಸ್, ರುಷ ಪೊಲೀಸರ ತುಕಡಿ, ಜಲಫಿರಂಗಿ, ವಿಶೇಷ ಪ್ರಹಾರದಳ ಇನ್ನೂ ಏನೇನೋ. ವಿಷಯು ಗೊತ್ತಿಲ್ಲದವರಿಗೆ ಏನಿರಬಹುದೋ ಎಂಬ ಕುತೂಹಲ.

ಹೌದು ಅಲ್ಲಿದ್ದದ್ದು ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳು ಮತ್ತು ವಿವಿಧ ದಲಿತ ಸಂಘಟನೆಗಳು ಸೇರಿ ಹಮ್ಮಿಕೊಂಡಿದ್ದ ಹರಾಜು ತಡೆ ವಿರೋಧಿ ಹೋರಾಟ. ಹರಾಜು ನಡೆಯುವ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಇಂಥ ದೃಶ್ಯ. ಸರ್ಕಾರ ತೀರ್ಮಾನಿಸಿಬಿಟ್ಟಿದೆ. ಏನೇ ಆಗಲಿ ಇದನ್ನು ಹರಾಜು ಹಾಕಲೇಬೇಕು. ಹರಾಜಿನಲ್ಲಿ ಇದನ್ನು ಕೊಳ್ಳಲು ಬರುವ ಉಳ್ಳವರಿಗೆ ಏನೂ ತೊಂದರೆ ಆಗಬಾರದು. ಎಷ್ಟಿದ್ದರೂ ಅವರು ಉಳ್ಳವರು ತಾನೇ. ಅವರಿಗಲ್ಲದೇ ಇನ್ಯಾರಿಗೆ ರಕ್ಷಣೆ ಕೊಟ್ಟಾರು ನಮ್ಮ ಸರ್ಕಾರದವರು

ಅದು ಜನರ ಆಸ್ತಿ. ಸಾರ್ವಜನಿಕರ ಆಸ್ತಿ. ಅದಕ್ಕೆ 'ಸರ್ಕಾರಿ ಭೂಮಿ' ಅಂತಲೂ ಕರೀತಾರೆ. ಭವಿಷ್ಯದಲ್ಲಿ ನೂರಾರು ಸಾವಿರಾರು ವರ್ಷಗಳ ಕಾಲ ಅಥವಾ ಶಾಶ್ವತವಾಗಿ ಅದು ಸಾರ್ವಜನಿಕ ಉದ್ದೇಶಕ್ಕೆ ಬಳಕೆಯಾಗಬೇಕು. ಅಲ್ಲಿ ಶಾಲೆ ಕಾಲೇಜು, ಜನೋಪಯೋಗಿ ಕೆಲಸಕ್ಕೆ ಅದು ಬಳಕೆಯಾಗಬೇಕು. ಎಷ್ಟೋ ವರ್ಷಗಳ ಕಾಲ ಈ ಭೂಮಿಯನ್ನು ಭೂಗಳ್ಳರು ಆಳುವ ರಾಜಕೀಯ ಪಕ್ಷಗಳ ಪುಡಾರಿಗಳು, ಮಠಾಧಿಪತಿಗಳು ನುಂಗಿ ಕೂತಿದ್ದರು. ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮ ರೆಡ್ಡಿಯವರು ಕಳೆದ ವಿಧಾನಸಭೆಯ ಅವಧಿಯಲ್ಲಿ ಈ ಪ್ರಶ್ನೆಯನ್ನೆತ್ತಿ ಹೋರಾಡಿದ್ದರಿಂದ ರಾಮಸ್ವಾಮಿ ನೇತೃತ್ವದ ಸಮಿತಿ ರಚನೆಯಾಗಿ 41 ಸಾವಿರಕ್ಕೂ ಹೆಚ್ಚು ಭೂಮಿಯ ಕಳ್ಳತನ ಪತ್ತೆ ಹಚ್ಚಿತು.

ವಿವಿಧ ಜನ ಚಳುವಳಿಗಳ ಮುಖಂಡರು ಪ್ರತಿಭಟನೆಯಲ್ಲಿ



ಬೆಂಗಳೂರು ನಗರವನ್ನು ಕಟ್ಟಿದೋರು, ಬಡವರು, ದಲಿತರು, ಶ್ರಮಿಕರು ಇಂದಿಗೂ ಸ್ವಂತದ್ದೊಂದು ಸೂರು ಇಲ್ಲದೇ ಗುಡಿಸಲುಗಳಲ್ಲಿ, ಸೇತುವೆ ಕೆಳಗೆ ದುಬಾರಿ ಬಾಡಿಗೆಯ ಪುಟ್ಟ ಮನೆಗಳಲ್ಲಿ ವಾಸಿಸುತ್ತಾರೆ. ಇಂತಹ ನಿವೇಶನರಹಿತರಿಗೆ ನಿವೇಶನ ಕೊಡಿ, ಎಂಥದ್ದಾದರೂ ವಸತಿ ಯೋಜನೆ ಮೂಲಕ ಮನೆ ಕೊಡಿ ಅಂತ ಬೆಂಗಳೂರಿನಲ್ಲಿ ಬೃಹತ್ ಆಂದೋಲನ ನಡೆದದ್ದು ಈಗಾಗಲೇ ವರದಿಯಾಗಿದೆ. ಆ ಪ್ರಶ್ನೆ ಹಿಂದೆ ಎದ್ದು ಬಂದಾಗ ಹಿಂದೆಯೇ ವಿಧಾನಸಭಾ ಚುನಾವಣೆ ಅಂತೆಲ್ಲಾ ಬಂದು ಅದು ಇತ್ಯರ್ಥವಾಗಲಿಲ್ಲ.

ಈಗ ಯಡಿಯೂರಪ್ಪ ಸರ್ಕಾರ ಅದೇ ಹಳೇ ಸರ್ಕಾರದ ಚಾಳಿಯಲ್ಲೇ ಸರ್ಕಾರಿ ಜಮೀನು ಹರಾಜು ಹಾಕಲು ಹೊರಟಿದೆ.

ಪ್ರತಿಭಟನೆಕಾರರ ಪ್ರತಿಭಟನೆಯೂ ದೃಢವಾಗಿತ್ತು. ಆಗಸ್ಟ್ 27 ರಂದು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೃಹತ್ ಪ್ರತಿಭಟನೆ ಪ್ರತಿಭಟನೆ ಹಾಗೂ ಒಂದು ನಿರ್ಧಿಷ್ಟ ನಿವೇಶನಕ್ಕೆ ಸಂಬಂಧಿಸಿದ ಕೋರ್ಟ್ ಪ್ರತಿಭಟನಾ ಸಭೆ ನಡೆಯಿತು.ಸಿಪಿಐ, ಸಿಪಿಐ(ಎಂ), ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ),ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸಮತಾ ಸೈನಿಕ ದಳ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ದಲಿತ ಸಂಘರ್ಷ ಸಮಿತಿ, ಪ್ರಜಾವಿಮೋಚನಾ ಚಳುವಳಿ, ಕರ್ನಾಟಕ ರಾಜ್ಯ ರೈತ ಸಂಘ ಹೀಗೆ ವಿವಿಧ ಜನಪರ ಚಳುವಳಿಗಳ ಪ್ರತಿನಿಧಿಗಳ ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.


ಪ್ರತಿಭಟನಾಕಾರರ ಬಂಧನ

ಪ್ರತಿಭಟನೆಯ ಸಂದರ್ಭದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ವೆಂಕಟಸ್ವಾಮಿ, ಡಿ.ಎಸ್.ಎಸ್. ರಾಜ್ಯ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ, ಫಾರ್ವರ್ಡ್ ಬ್ಲಾಕ್‌ನ ಕೆ.ವೆಂಕಟೇಶ್ ರಾಜ್ಯ ರೈತ ಸಂಘದ ವೀರಸಂಗಯ್ಯ, ಸಿಪಿಐ ನ ಹರಿಗೋವಿಂದ್ ಮುಂತಾದವರು ಮಾತನಾಡಿದರು. ತೀರ್ಪಿನಿಂದಾಗಿ 27ಕ್ಕೆ ಹರಾಜು ನಡೆಯಲಿಲ್ಲ. 29ಕ್ಕೆ ಬೇರೆ ಭೂಮಿ ಹರಾಜು. ಪ್ರತಿಭಟನೆ ನಿಲ್ಲಲಿಲ್ಲ.

ಎಷ್ಟೆಲ್ಲಾ ಪೊಲೀಸ್ ಪಹರೆಯ ನಡುವೆಯೂ ಧಿಕ್ಕಾರಗಳು ಮೊಳಗಿದವು. ಜಿಲ್ಲಾಧಿಕಾರಿಗಳ ಕಛೇರಿಯ ಕಡೆಗೆ ಜನರು ನಡೆದರು. ಪೊಲೀಸರು ಸರ್ಕಾರದ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದರು.

ಬಂಧನ. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯೆ ಗೌರಮ್ಮ, ಕೆ.ಎಸ್.ಲಕ್ಷ್ಮಿ, ವಿದ್ಯಾರ್ಥಿ ಮುಖಂಡ ಪ್ರಸಾದ್, ಶಾರದಾ, ಒಬ್ಬೊಬ್ಬರನ್ನೇ ಪೊಲೀಸರು ಹಿಡಿದರು. ವ್ಯಾನಿಗೆ ತಳ್ಳಿದರು. ನಂತರದ ಸರದಿ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯ, ಕೆ.ಎನ್.ಉಮೇಶ್, ಪಿವಿಸಿ.ರಾಜ್ಯಾಧ್ಯಕ್ಷ ಪಟಾಪಟ್ ನಾಗರಾಜ್ ಮುಂತಾದವರು.

ಪ್ರಜ್ಞಾವಂತ ಚಳುವಳಿಯ ಪ್ರತಿಭಟನೆಯನ್ನು ಧಿಕ್ಕರಿಸಿ ಸರ್ಕಾರ ಭೂಮಿಯನ್ನು ಹರಾಜು ಹಾಕಿಯೇ ಹಾಕಿದೆ. ಭೂಮಿ ಶಾಶ್ವತವಾಗಿ ಇರುವಂಥಹದ್ದು. ಜನತೆಯೂ ಶಾಶ್ವತವೇ. ಈ ನಡುವೆ ಈಗಿರುವ ಸರ್ಕಾರ ಮಾತ್ರ ಬಲು ತಾತ್ಕಾಲಿಕ, ಹೀಗೆ ಅದು ಮುಂದೆ ನಡೆದರೆ ಈ ಸರ್ಕಾರ ಎಷ್ಟು ದಿನ ಮುಂದುವರಿಯಬೇಕು. ಮತ್ತೆ ಅದು ಗೆದ್ದು ಬರಬೇಕೋ ಬೇಡವೋ ಎಂದು ತೀರ್ಪು ನೀಡುವ ಹಕ್ಕು ಈ ಜನರ ಕೈಯಲ್ಲೇ ಇದೆ ಎಂಬುದನ್ನು ಆಳುವ ಜನರು ಮರೆತಿದ್ದಾರೆ ಎಂಬುದು ಸ್ಪಷ್ಟ. ಏಕೆಂದರೆ ಚುನಾವಣೆ ಕನಿಷ್ಟ ಇನ್ನೂ ನಾಲ್ಕುವರೆ ವರುಷ ಮುಂದೆ ಇದೆ ಅಂತ ಅವರು ಭಾವಿಸಿದ್ದಾರೆ. ಹೋರಾಟ ಮುಂದುವರೆಯುತ್ತದೆ.

■ ಆರ್.ಕೆ.

ಕರಾವಳಿಯಲ್ಲಿ ಕೊಳ್ಳಿ ದೆವ್ವಗಳ ಕುಣಿತ


ಸ್ವಲ್ಪ ಕಾಲ ತಣ್ಣಗಿದ್ದ ಕರಾವಳಿ ಮತ್ತೆ ಉದ್ವಿಗ್ನಗೊಂಡಿದೆ. ಕರಾವಳಿಯ ಜನರ ನೆಮ್ಮದಿಯ ಬದುಕಿಗೆ ಬೇತಾಳದಂತೆ ಬೆನ್ನಬಿದ್ದಿರುವ ಕೋಮು ಪಿಶಾಚಿಗಳು ಮತ್ತೆ ತಮ್ಮ ಕೋರೆ ಹಲ್ಲುಗಳನ್ನು ಪ್ರದರ್ಶಿಸತೊಡಗಿದ್ದಾರೆ. ಕೋಮು ಹಿಂಸೆಯಿಂದ ಬೇಸತ್ತು ನೆಮ್ಮದಿಯ ಬದುಕು ಬಯಸುತ್ತಿರುವ ಜನರ ನಿರಂತರ ನಿರ್ಲಿಪ್ತತೆಯ ಮಧ್ಯೆಯೂ ಕೋಮು ದ್ವೇಶವನ್ನೇ ಉಸಿರಾಡುವ ಕೊಳ್ಳಿದೆವ್ವಗಳು ತಮ್ಮ ಕಾರ್ಯಾಚರಣೆಯನ್ನು ಮುಂದುವರೆಸಿದ್ದೇವೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರ ವಹಿಸಿಕೊಂಡ ನಂತರ ಎಲ್ಲೆಡೆ ನಡೆದಂತೆ ಕರಾವಳಿಯಲ್ಲೂ ಸರ್ಕಾರದ ದುರಾಡಳಿತದ ವಿರುದ್ಧ ಹೋರಾಟಗಳು ತೀವ್ರಗೊಂಡಿದೆ. ಸರ್ಕಾರ ನಡೆಸುತ್ತಿರುವವರ ಸ್ವಜನಪಕ್ಷಪಾತ್ರ ಅಧಿಕಾರದ ಅಹಂಕಾರ, ನಿರ್ಲಜ್ಜತನ ದಿಂದಾಗಿ ಜನತೆಯ ಎದುರು ಸಂಘ ಪರಿವಾರ ಬೆತ್ತಲಾಗತೊಡಗಿದೆ.

ಪದ್ಮಪ್ರಿಯ ಪ್ರಕರಣ, ಆದಿ ಉಡುಪಿ ಬೆತ್ತಲೆ ಪ್ರಕರಣ ಆರೋಪಿಗಳ ಖುಲಾಸೆಯ ಸಂದರ್ಭದಲ್ಲಿ ಸಂಘ ಪರಿವಾರ ನಡೆಸಿದ ನಿರ್ಲಜ್ಜ ವಿಜಯೋತ್ಸವ ಉಡುಪಿಯ ವಕೀಲರಿಗೆ ನಕ್ಸಲ್ ನಿಗ್ರಹ ದಳದಿಂದ ಹಲ್ಲೆ, ಉಡುಪಿಯ ರಿಕ್ಷಾ ಚಾಲಕರಿಗೆ ಪಾನಮತ್ತ ಪೊಲೀಸರಿಂದಾದ ಹಲ್ಲೆ, ಮಂಗಳೂರಿನಲ್ಲಿ ನಡೆದ ನೀರಿನ ಹೋರಾಟ ನಿರಂತರವಾಗಿ ನಡೆಯುತ್ತಿದ್ದ ಹೋರಾಟವನ್ನು ಬಗ್ಗುಬಡಿಯಲು ಶಾಂತಿಯುತ ಪ್ರತಿಭಟನಾಕಾರರ ಮೇಲೆ ನಡೆದ ಕುಖ್ಯಾತ ಲಾಠಿ ಚಾರ್ಜ್ ಪ್ರಕರಣಗಳಿಂದಾಗಿ ಕರಾವಳಿಯಲ್ಲಿ ಬಿಜೆಪಿಯ ವಿರುದ್ಧ ಜನಾಭಿಪ್ರಾಯವೇ ರೂಪುಗೊಂಡಿದೆ.

ಮುಸ್ಲೀಮರ ವಿರುದ್ಧ ದ್ವೇಷ ಹುಟ್ಟಿಸಿಯೇ ಬಡ ಹಿಂದುಗಳನ್ನು ಭಾವನಾತ್ಮಕ ಬ್ಲಾಕ್‌ಮೇಲ್ ನಡೆಸಿ ಕರಾವಳಿಯನ್ನು ದಶಕಗಳ ಕಾಲ ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದ ಬಿಜೆಪಿಗೆ ಈ ಬೆಳವಣಿಗೆಗಳು ಆತಂಕ ಹುಟ್ಟಿಸಿದೆ. ಬಹಳ ಕಾಲದ ನಂತರ ಕರಾವಳಿಯ ಜನತೆ ತಮ್ಮ ದಿನ

ಪುಟ 6ಕ್ಕೆ


ಮಂಗಳೂರಿನ ಪಚ್ಚನಾಡಿಯ ಚರ್ಚ್‌ಗೆ ಸೇರಿದ ಜಾಗದಲ್ಲಿ ಕೇಸರಿ ಬಾವುಟ ನೆಟ್ಟಿರುವ ಚಿಡ್ಡಿಪಡೆ

ಕರಾವಳಿಯಲ್ಲಿ ಕೊಳ್ಳಿ ದೆವ್ವಗಳು.....

ಪುಟ 5 ರಿಂದ

ನಿತ್ಯದ ಸಮಸ್ಯೆ ಬದುಕಿನ ಬವಣೆ, ಉಳ್ಳವರ ಅಟ್ಟಹಾಸದಿಂದ ತಮ್ಮ ಬದುಕೇ ನಾಶವಾಗುತ್ತಿರುವುದರ ಬಗ್ಗೆ ಚಿಂತಿಸತೊಡಗಿದ್ದಾರೆ. ಬಿಜೆಪಿಯ ನಕಲಿ ಹಿಂದುತ್ವದ ಟೊಳ್ಳುತನದ ಬಗ್ಗೆ ಜನತೆಗೆ ನಿಧಾನವಾಗಿ ಅರಿವು ಮೂಡತೊಡಗಿದೆ.

ಈ ಎಲ್ಲಾ ಬೆಳವಣಿಗೆಯಿಂದ ಕಂಗಾಲಾಗಿರುವ ಬಿಜೆಪಿ ಜನರ ಗಮನವನ್ನು ಮತ್ತೆ ಮತೀಯವಾದದ ಕಡೆಗೆ ಸೆಳೆಯಲು ಯತ್ನಿಸುತ್ತಾ ನಾನಾ ಕಸರತ್ತುಗಳನ್ನು ನಡೆಸತೊಡಗಿದೆ. ಬಾಂಬ್ ಸ್ಫೋಟ, ಅಮರನಾಥ ಭೂ ವಿವಾದ ಹೀಗೆ ನಾನಾ ವಿಷಯಗಳನ್ನು ಎತ್ತಿ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸಲು ಯತ್ನಿಸಿದರೂ ಜನ ಮಾತ್ರ ಇವರನ್ನು ಕ್ಯಾರೆ ಅನ್ನಲಿಲ್ಲ. ಅನಂತರ ಇವರ ದೃಷ್ಟಿ ಹರಿದದ್ದು ಕ್ರೈಸ್ತರ ಮೇಲೆ ಕ್ರೈಸ್ತರು ಕಳೆದ 60 ವರ್ಷಗಳಿಂದ ಪ್ರಾರ್ಥನೆ ಸಲ್ಲಿಸುತ್ತಾ ಬಂದಿದ್ದ ವಾಮಂಜೂರು ಬಳಿಯ ಚರ್ಚ್‌ಗೆ ಸೇರಿದ ಜಾಗದಲ್ಲಿ ದಿಢೀರ್ ಕೇಸರಿ ಧ್ವಜ ನೆಟ್ಟು ಶಿಲುಬೆಗಳಿಗೆ ಹಾನಿ ಮಾಡಿ, ಇದು ಸರ್ಕಾರಿ ಜಾಗ, ಹಿಂದುಗಳಿಗೆ ಸೇರಬೇಕೆಂದು ವಿವಾದ ಎಬ್ಬಿಸಿದರು. ಜಿಲ್ಲಾಡಳಿತದ ಸಂಘ ಪರಿವಾರದ ಪರ ನಿಲುವಿನ ಹೊರತಾಗಿಯೂ ಕ್ರೈಸ್ತರ ತಣ್ಣಗಿನ ಪ್ರತಿಕ್ರಿಯೆಯಿಂದಾಗಿ ಘಟನೆ ತೀವ್ರ ಸ್ವರೂಪ ಪಡೆಯಲಿಲ್ಲ.

ಇಷ್ಟೆಲ್ಲಾ ಪ್ರಯತ್ನದ ನಂತರವೂ ಜನರ ನಿರ್ಲಿಪ್ತತೆ ಪ್ರಚೋದನೆಗೆ ಒಳಗಾಗದೇ ಇರುವ ಮನೋಭಾವವನ್ನು ಕಂಡು ಕೈ ಕೈ ಹಿಸುಕಿಕೊಳ್ಳತೊಡಗಿದ ಚಡ್ಡಿಪಡೆಯ ನೆರವಿಗೆ ಮತ್ತೆ ಬಂದದ್ದು ಮುಸ್ಲಿಂ ಮತಾಂಧರು. ಜಿಲ್ಲೆಯಲ್ಲಿ ಕೋಮು ಸಂಘರ್ಷಗಳಿಗೆ ಜನರ ನೀರಸ ಪ್ರತಿಕ್ರಿಯೆಗಳಿಂದ ಸಂಘ ಪರಿವಾರದಂತೆಯೇ ಮುಸ್ಲಿಂ ತೀವ್ರವಾದಿಗಳು ಕೆಲಸವಿಲ್ಲದೆ ಚಡಪಡಿಸತೊಡಗಿದ್ದರು.

ಕೋಮು ಗಲಭೆಗಳಾಗಿ ಮುಸ್ಲಿಮರು ದೌರ್ಜನ್ಯಕ್ಕೊಳಗಾಗದಿದ್ದರೆ ಮುಸ್ಲಿಮರ ಆಸ್ತಿಪಾಸ್ತಿ ಧ್ವಂಸ, ಜೀವ ಹಾನಿ ಸಂಭವಿಸದಿದ್ದರೆ, ತಮಗೆ ಅಸ್ತಿತ್ವವೇ ಇಲ್ಲ, ತಮ್ಮನ್ನು ಮುಸ್ಲಿಮರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ತಿಳಿದಿರುವ ಮುಸ್ಲಿಂ 'ಡಿಗ್ನಿಟಿಯ' ಬಗ್ಗೆ ಮಾತನಾಡುವ ಸ್ವಘೋಷಿತ ಮುಸ್ಲಿಂ ರಕ್ಷಕರು ಇಂತಹ ಸಂದರ್ಭದಲ್ಲಿ ಬಜರಂಗಿಗಳ ಕೈಗೆ ಆಯುಧ ಕೊಟ್ಟೇಬಿಟ್ಟಿದ್ದಾರೆ. ಮೊನ್ನೆ 27ನೇ ತಾರೀಕು ರಾತ್ರಿ 8.30 ರ ಸಮಯ ಏಕ ಕಾಲದಲ್ಲಿ ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಾದ ಬಿ.ಸಿ. ರೋಡ್, ಬಜ್ಪೆಗಳಲ್ಲಿ ಬಜರಂಗ ಕಾರ್ಯಕರ್ತರಾದ ಭಸ್ಕರ್ ಮತ್ತು ಅನಿಲರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಇಷ್ಟಕ್ಕೆ ಊರ ಹಬ್ಬದ ರೀತಿ ಸಂಭ್ರಮಿಸಿದ ಚಡ್ಡಿ ಪಡೆ ಕೇಕೇ ಹಾಕಿ ತಕ್ಷಣ ಬೀದಿಗಿಳಿದಿದೆ. ಬಿ.ಸಿ.ರೋಡ್‌ನಲ್ಲಿ ಅಂಗಡಿ ವಾಹನಗಳನ್ನು ಜಖಂಗೊಳಿಸಿ ದಾರಿಹೋಕ ಮುಸ್ಲಿಮರ ಮೇಲೆ ಹಲ್ಲೆ ನಡೆಸಿ, ಅಟ್ಟಹಾಸಗೈದಿದ್ದಾರೆ. ಬಜ್ಪೆಯಲ್ಲಿ ಬೆಳಗಿನ ಜಾವವೇ ಬಲವಂತದ ಬಂದ್ ನಡೆಸಿ ಗಲಭೆಗೆ ಯತ್ನಿಸಲಾಗಿದೆ. ಆದರೂ ಜನತೆ ಪ್ರಚೋದಿತರಾಗದೆ ತಮ್ಮ ಪಾಡಿಗೆ ತಾವು ದೈನಂದಿನ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ಇದರಿಂದ ಹತಾಶರಾದ ಬಜರಂಗಿಗಳು ಮರು ದಿವಸ ರಾತ್ರಿ ಮಂಗಳೂರಿನಲ್ಲಿ ಕೆಲಸ ಮುಗಿಸಿ ಬಜ್ಪೆಯ ತಮ್ಮ ಮನೆಗೆ ಹೋಗಲು ಜ್ಯೋತಿ ಸರ್ಕಲ್‌ನಲ್ಲಿ ಬಸ್ ಕಾಯುತ್ತಿದ್ದ ಅಮಾಯಕ ಮುಸ್ಲಿಂ ಯುವ ಸಹೋದರರಿಗೆ ಚೂರಿಯಿಂದ ಇರಿದು ಕೊಲೆಗೈಯ್ಯಲು ಯತ್ನಿಸಿದ್ದಾರೆ. ಸಹೋದರರು ಜೀವಪಾಯದಿಂದ ಪಾರಾಗಿದ್ದರೂ ಇರಿತದ ದುರ್ಘಟನೆಯ ನಂತರ ಜಿಲ್ಲೆ ಉದ್ರೇಕಗೊಳ್ಳತೊಡಗಿದೆ. ಗಾಳಿ ಸುದ್ದಿ, ವದಂತಿಗಳು ವೇಗವಾಗಿ ವ್ಯವಸ್ಥಿತವಾಗಿ ಹರಡತೊಡಗಿದೆ. ಜನಸಾಮಾನ್ಯರಿಗೆ ಬೇಡವಾಗಿದ್ದರೂ ಗಲಭೆಯನ್ನು ಬಲವಂತವಾಗಿ ಜಿಲ್ಲೆಯ ಮೇಲೆ ಹೇರುವ ಪ್ರಯತ್ನ ವ್ಯವಸ್ಥಿತವಾಗಿ ನಡೆಯತೊಡಗಿದೆ.

ಜನತೆಯ ಗಮನವನ್ನು ಅವರ ನಿಜವಾದ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ, ಒಗ್ಗಟ್ಟನ್ನು ಮುರಿಯುವ, ಶೋಷಣೆಯನ್ನು ತೀವ್ರಗೊಳಿಸುವ ಪ್ರಯತ್ನ ಈ ಘಟನೆಗಳ ಹಿಂದಿದೆ ಎಂಬುದನ್ನು ಕರಾವಳಿಯ ಜನತೆ ಅರ್ಥ ಮಾಡಿಕೊಳ್ಳ ಬೇಕಾಗಿದೆ. ಮತ್ತೊಮ್ಮೆ ಮತೀಯ ಶಕ್ತಿಗಳ ಕೈಗೆ ಕರಾವಳಿ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಇಲ್ಲಿನ ದುಡಿಯುವ ಜನತೆಯ ಮೇಲಿದೆ. ಯಾವುದೇ ಬೆಲೆಯನ್ನು ತೆತ್ತಾದರೂ ದುಡಿಯುವ ಜನತೆ ಇದನ್ನು ಸಾಧಿಸಬೇಕಾಗಿದೆ. ತಮ್ಮ ನೈಜ ಸಮಸ್ಯೆಗಳ ಆಧಾರದಲ್ಲಿ ನಡೆಯುತ್ತಿರುವ ಹೋರಾಟವನ್ನು ತೀವ್ರಗೊಳಿಸುವ ಮುಖಾಂತರ ಧರ್ಮದ ಮುಖವಾಡದ ರಕ್ಕಸರ ಹುನ್ನಾರಗಳನ್ನು ಸೋಲಿಸಬೇಕಾಗಿದೆ.

■ ಮುನೀರ್ ಕಾಟಿಪಳ್ಳ

ಬಸ್ ದರ ಹೆಚ್ಚಳ ಅನಿವಾರ್ಯವೇ, ಅಗತ್ಯವೇ?

ಮುಖ್ಯಮಂತ್ರಿ, ಹಲವಾರು ಸಚಿವರು ಹಾಗೂ ಶಾಸಕರ ದಂಡು 'ಅಕ್ಕ' ಸಮ್ಮೇಳನದ ಹೆಸರಿನಲ್ಲಿ ವಿದೇಶಕ್ಕೆ ತೆರಳಿರುವಾಗ ಬಡ, ಮಧ್ಯಮ ವರ್ಗದ ಮೇಲೆ ಹೊರೆ ಹೇರುವ ಬಸ್ ಪ್ರಯಾಣ ದರವನ್ನು ಹೆಚ್ಚಿಸಲಾಗಿದೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾದಾಗ, 'ಬಸ್ ದರ ಹೆಚ್ಚಿಸುವುದಿಲ್ಲ. ಬೇರೆ ಆದಾಯದ ಮೂಲಕ ವೆಚ್ಚವನ್ನು ಭರಿಸುವುದಾಗಿ' ಸಾರಿಗೆ ಮಂತ್ರಿ ಆರ್.ಅಶೋಕ್‌ರವರು ಭರವಸೆ ನೀಡಿದ್ದರು. ಈಗ ರಾತೋರಾತ್ರಿ ಬಸ್ ದರವನ್ನು ಹೆಚ್ಚಿಸಿ ಬಿಜೆಪಿ ಸರಕಾರ ಜನರಿಗೆ ವಂಚನೆ ಮಾಡಿದೆ. ಇತ್ತೀಚೆಗಷ್ಟೇ ಮಾಸಿಕ ಬಸ್ ಪಾಸ್ ದರವನ್ನು ಹೆಚ್ಚಿಸಲಾಗಿತ್ತು. ಮುಂದೆ ದೈನಂದಿನ ಬಸ್ ದರವನ್ನು ಕೂಡಾ ಸರಕಾರ ಹೆಚ್ಚಿಸಲಿದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾತೈಲದ ಬೆಲೆ ಕುಸಿಯುತ್ತಿದ್ದು ನಮ್ಮ ದೇಶದಲ್ಲೂ ಪೆಟ್ರೋಲ್, ಡೀಸೆಲ್ ಬೆಲೆ ಕಡಿಮೆ ಮಾಡಬೇಕಾದ ಸಂದರ್ಭದಲ್ಲಿ ಬಸ್ ದರ ಹೆಚ್ಚಿಸುತ್ತಿರುವುದು ಜನರಿಗೆ ಬಗೆದ ದ್ರೋಹವಾಗಿದೆ. ಕರ್ನಾಟಕದಲ್ಲಿ ಪೆಟ್ರೋಲ್, ಡೀಸೆಲ್‌ಗಳ ಮೇಲೆ ತೆರಿಗೆ ಅಧಿಕವಾಗಿದ್ದರೂ ಪಶ್ಚಿಮ ಬಂಗಾಳ ಮತ್ತಿತರ ರಾಜ್ಯಗಳಿಗೆ ಹೋಲಿಸಿದರೆ ತೆರಿಗೆ ಇಳಿಸಿದ್ದು ತೀರಾ ಕಡಿಮೆ. ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಹೆಚ್ಚಿದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಬೇಕೆಂಬ ನಿಯಮವನ್ನು ಜಾರಿಗೆ ತಂದಿತ್ತು. ಬಿಜೆಪಿಯ ಜನ ವಿರೋಧಿ ನೀತಿಗೆ ಇದು ಸಾಕ್ಷಿಯಾಗಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ಈಗಾಗಲೇ ಕಂಗಾಲಾಗಿದ್ದಾರೆ. ಅವರ ಆದಾಯ ಹೆಚ್ಚುತ್ತಿಲ್ಲ. ಆಗಸ್ಟ್ 20ರ ಸಾರ್ವತ್ರಿಕ ಮುಷ್ಕರದ ಮೂಲಕ ಕಾರ್ಮಿಕರು, ನೌಕರರು ಮತ್ತು ದುಡಿಯುವ ಜನ ತಮ್ಮ ಪ್ರತಿಭಟನೆಯನ್ನು ತೋರಿದ್ದಾರೆ. ಜನರ ಪ್ರತಿಭಟನೆಯನ್ನು ಲೆಕ್ಕಿಸದೆ ಬಿಜೆಪಿ ಸರಕಾರ ಬಸ್ ದರವನ್ನು ಹೆಚ್ಚಿಸಿದೆ. ಅದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸಿ ಪ್ರತಿಭಟನೆಗೆ ಕರೆ ನೀಡಿದೆ. ಹಲವೆಡೆ ಈಗಾಗಲೇ ಪ್ರತಿಭಟನೆ ನಡೆದಿವೆ.

ಜನಮರಳೋ.. ಜಾತ್ರೆ ಮರಳೋ....

ಪುಟ 4 ರಿಂದ

ನೋಡಿದರೆ ನಮ್ಮ ಸಮಾಜ ಯಾವ ದಿಕ್ಕಿನಲ್ಲಿ ಬೆಳವಣಿಗೆಯಾಗುತ್ತಿದೆ ಎಂದು ತಿಳಿಯುವುದಕ್ಕೆ ಕನ್ನಡಿ ಹಿಡಿಯ ಬೇಕಾಗಿಲ್ಲವೆಂದನ್ನಿಸುತ್ತದೆ. ಚಂದ್ರಗ್ರಹಣವು ಕೂಡ ಪ್ರಕೃತಿಯಲ್ಲಿ ಆಗುವ ಅನೇಕ ಸಹಜ ಕ್ರಿಯೆಯಲ್ಲಿ ಇದು ಒಂದು. ಇವತ್ತು ಯಾವುದೇ ಮಗುವನ್ನು ಕೇಳಿದರೂ ಸೂರ್ಯ ಮತ್ತು ಚಂದ್ರ ನಡುವೆ ಭೂಮಿಯು ಬಂದು, ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದಾಗ ಚಂದ್ರಗ್ರಹಣವಾಗುತ್ತದೆ ಎಂದು ಹೇಳುತ್ತದೆ. ಅದರೂ ಕೂಡ ಜನರು ಗ್ರಹಣದ ದಿನಗಳಲ್ಲಿ ಅನೇಕ ಮೂಢನಂಬಿಕೆಗಳನ್ನು ಆಚರಿಸುತ್ತಾ ಬರುತ್ತಿದ್ದಾರೆ. ಇವುಗಳಿಗೆ ಯಾವುದೇ ಅರ್ಥವಿರವುದಿಲ್ಲಾ. ಇಂದು ವಿಜ್ಞಾನ ಎಷ್ಟು ಮುಂದುವರಿದಿದೆ ಎಂದರೆ ಮುಂಬರುವ ಚಂದ್ರಗ್ರಹಣಗಳನ್ನು ಕೂಡ ಎಲ್ಲಿ, ಯಾವ ದಿನ ಮತ್ತು ಯಾವ ಸಮಯಕ್ಕೆ ಆಗುತ್ತದೆಂದು ನಿಖರವಾಗಿ ಹೇಳಬಹುದು.


ಇಂತಹ ಮೂಢನಂಬಿಕೆಗಳ ಮೂಲಕ ಜನತೆಯ ಮುಗ್ಧತೆಯನ್ನು ಬಳಸಿಕೊಂಡು ಸಮಾಜದಲ್ಲಿ ಭಯ ಮತ್ತು ಆತಂಕ ಮೂಡಿಸುವ ಮೂಲಕ ಹಣ ಗಳಿಸುವ ಕೆಲಸದಲ್ಲಿ ತೊಡಗಿರುವ ಜನರನ್ನು ಗುರುತಿಸಿ ಶಿಕ್ಷಿಸುವ ಕೆಲಸ ಸರಕಾರ ಮಾಡಬೇಕಾಗಿದೆ. ಆದರೆ, ಸರಕಾರವೇ ಈ ವಿಷಯದಲ್ಲಿ ಬಹಳಷ್ಟು ಸಲ ಎಡವುತ್ತಿರುವುದು ತುಂಬಾ ಅಪಾಯಕಾರಿ ಹಾಗೂ ಅಕ್ಷಮ್ಯ ಅಪರಾಧ. ಏಕೆಂದರೆ, ಇತ್ತೀಚಿನ ವರದಿಯ ಪ್ರಕಾರ ಮಂತ್ರಿ ಮಹೋದಯರು ತಮಗೆ ವಾಸಿಸಲು ಕೊಟ್ಟಂತಹ ಸರಕಾರಿ ಮನೆಗಳನ್ನು ವಾಸ್ತು ಹೆಸರಿನಲ್ಲಿ ಕೆಡವಿ, ಲಕ್ಷಗಟ್ಟಲೆ ಹಣ ಸುರಿದು ಐಷರಾಮಿ ಬಂಗಲೆಗಳನ್ನು ಕಟ್ಟುತಿರುವುದು ನೋಡಿದರೇ ದಿನ ಬೆಳಗಾದರೆ ಸಾಯುವ ರೈತರ ಸಮಾಧಿಗಳ ಮೇಲೆ ಕಟ್ಟಿದಂತೆಯೆ ಸರಿ.

ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಮಾಧ್ಯಮಗಳ ಪಾತ್ರ ಹಿರಿದು. ಅದರಲ್ಲೂ ವಿಶೇಷವಾಗಿ ಟಿ.ವಿ. ಮಾಧ್ಯಮಗಳ ಜವಾಬ್ದಾರಿ ಹೆಚ್ಚು, ಅದರೆ ಬೇಲಿಯೆ ಎದ್ದು ಹೊಲ ಮೇಯ್ದಿರೇ ಯಾರಿಗೆ ತಾನೆ ದೂರಬೇಕು. ಗ್ರಹಣ ಸಂಬಂಧ ವಿಜ್ಞಾನ ಎಲ್ಲಾ ರೀತಿಯ ತಿಳುವಳಿಕೆ ನೀಡಿದರೂ ಗ್ರಹಣದಿಂದ ಇಂತಿಂಥ ಅನಾಹುತಗಳು ಘಟಿಸುತ್ತವೆ ಎಂದು ಅತೀಂದ್ರಿಯವಾಗಿ ಮತ್ತು ಅತಿರಂಜಕವಾಗಿ ಸುದ್ದಿ ಬಿತ್ತರಿಸುವ ಟಿ.ವಿ ಚಾನೆಲ್‌ಗಳಿಗೆ ಏನ್ನನ್ನಬೇಕು?. ಹಿಂದೊಮ್ಮೆ ದೇಶದಾದ್ಯಂತ ಗಣಪತಿ ಹಾಲು ಕುಡಿದಂತೆ, ಮೊನ್ನೆ ಬೆಂಗಳೂರಿನಲ್ಲಿ ಸಾಯಿಬಾಬನ ಮೂರ್ತಿಗೆ ಕಣ್ಣು ಬಂದಂತೆ ಹೀಗೆ ಹಲವು ಸುದ್ದಿಗಳನ್ನು ಹರಡಿ ಜನತೆಯನ್ನು ಮತ್ತೆ ಮತ್ತೆ ಮೂರ್ಖರನ್ನಾಗಿಸುವ ಕೆಲಸ ಟಿ.ವಿ. ಮಾಧ್ಯಮಗಳ ಮೂಲಕ ಭರ್ಜರಿಯಾಗಿ ನಡೆಯುತ್ತಿದೆ. ಗಾಯದ ಮೇಲೆ ಬರೆ ಇಟ್ಟಂತೆ ಬಹಳಷ್ಟು ಟಿ.ವಿ. ಚಾನೆಲ್‌ಗಳು ಜನತೆಯನ್ನು ಮೂಢನಂಬಿಕೆ ಮತ್ತು ಅವೈಜ್ಞಾನಿಕ ಜಗತ್ತಿಗೆ ಕೊಂಡೊಯ್ಯುವಂತಹ ಕಾರ್ಯಕ್ರಮಗಳಾದ ಹೀಗೂ ಉಂಟೇ ?, ಅಗೋಚರ, ವಿಸ್ಮಯ ಲೋಕ, ಹಾಗೂ ನೀವೂ ನಂಬುತ್ತಿರಾ ಎಂಬ ಮುಂತಾದ ಕಾರ್ಯಕ್ರಮಗಳು ಪೈಪೋಟಿಗಿಳಿದಂತೆ ಅತಿರಸವತ್ತಾಗಿ ಬಿತ್ತರಿಸುತ್ತಿರುವುದು ಶೋಚನೀಯ ಸಂಗಂತಿ. ಅದರೂ ಸರಕಾರ ಇಂತಹ ಸಮೂಹ ಮಾಧ್ಯಮಗಳ ಮೇಲೆ ಯಾವುದೇ ಕ್ರಮಕೈಗೊಳ್ಳದೆ ಇರುವುದು ನೋಡಿದರೆ ಅದರ ನಿಸ್ಸಾಹಯಕತ್ತನವೊ ಅಥವಾ ದಿವ್ಯ ನಿರ್ಲಕ್ಷತನವೊ ತಿಳಿಯದಾಗಿದೆ. ನಮಗೆ ವೈಜ್ಞಾನಿಕ ಮನೋಬಾವನೆ ಬೆಳಿಸಿಕೊಳ್ಳಲು ಸಂವಿದಾನ್ಮತಕ ಕೊಟ್ಟ ಹಕ್ಕು ಸರಕಾರವೇ ಮೊಟಕುಗೊಳಿಸುತ್ತಿದೆ ಎನ್ನಿಸುತ್ತದೆ.

ಧಗಧಗಿಸುತ್ತಿರುವ ಒರಿಸ್ಸಾ


ಒಂದೆಡೆ ಜಮ್ಮು ಮತ್ತು ಕಾಶ್ಮೀರ ಮೂಲಭೂತವಾದಿಗಳ ಸ್ವಾರ್ಥ ಹಿತಾಸಕ್ತಿಗಳಿಂದಾಗಿ ಹೊತ್ತಿ ಉರಿಯುತ್ತಿದ್ದರೆ, ಮತ್ತೊಂದೆಡೆ ಒರಿಸ್ಸಾ ಧಗಧಗಿಸುತ್ತಿದೆ. ಮೂಲಭೂತವಾದಿ ನಾಯಕರಿಗೆ ಕಾಶ್ಮೀರ ಭಂಗಿಯಂತಾಗಿದ್ದರೆ, ಒರಿಸ್ಸಾ ಸೇಂದಿಯಂತಾಗಿದೆ. ಇವರು ಈ ಎರಡನ್ನೂ ಸೇವಿಸುತ್ತಾ ದೇಶದ ಐಕ್ಯತೆ ಮತ್ತು ಸಾರ್ವಭೌಮತೆಗೆ ಧಕ್ಕೆಯುಂಟು ಮಾಡುವುದರೊಂದಿಗೆ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ಒರಿಸ್ಸಾದ ಕಂದಮಲ್ ಜಿಲ್ಲೆಯ ಜಲೇಸ್‌ಪಟದಲ್ಲಿ ವಿಶ್ವಹಿಂದೂ ಪರಿಷತ್ (ವಿಎಚ್‌ಪಿ) ಮುಖಂಡ ಸ್ವಾಮಿ ಲಕ್ಷ್ಮಣಾನಂದ ಮತ್ತು ಅವರ ನಾಲ್ವರು ಅನುಯಾಯಿಗಳನ್ನು ಯಾರು ಹತ್ಯೆ ಮಾಡಿದರೆಂಬುದೇ ಗೊತ್ತಿಲ್ಲವಾದರೂ ಇದುವರೆಗೂ 14 ಮಂದಿ ಅಮಾಯಕರು ಕೋಮು ಪ್ರತೀಕಾರಕ್ಕೆ ಬಲಿಯಾಗಿದ್ದಾರೆ. ಇದು ಮಾವೋವಾದಿಗಳ ದುಷತ್ಕ ಇರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಆದರೆ ಬಲಿಯಾಗುತ್ತಿರುವುದು ಕ್ರೈಸ್ತ ಅಲ್ಪ ಸಂಖ್ಯಾತರು. ಕುಂಟಪಲ್ಲಿ ಗ್ರಾಮದ ಅನಾಥಾಶ್ರಮದಲ್ಲಿದ್ದ 20 ವರ್ಷದ ಯುವತಿಯನ್ನು ಸಜೀವವಾಗಿ ಸುಟ್ಟುಹಾಕಲಾಗಿದೆ. ಪಾರ್ಶ್ವವಾಯು ಪೀಡಿತನಾಗಿದ್ದ ರೈತ ರಾಸಾನಂದ ಅವರನ್ನು ಕೊಲ್ಲಲಾಗಿದೆ. ಹಿಂದೂ ಮೂಲಭೂತವಾದಿಗಳು ಲಕ್ಷ್ಮಣಾನಂದ ಹತ್ಯೆಗೆ ಕೋಮು ಬಣ್ಣ ಹಚ್ಚಿ ಅಟ್ಟಹಾಸ ಮೆರೆಯುತ್ತಿದ್ದಾರೆ. ಲಕ್ಷ್ಮಣಾನಂದ ಹತ್ಯೆಯ ಹಿಂದಿನ ದಿನವೇ ಅವರಿಗೆ ಬೆದರಿಕೆ ಪತ್ರ ಬಂದಿತ್ತು. ಈ ಕುರಿತು ಪೊಲೀಸರಿಗೆ ಮಾಹಿತಿ ಇದ್ದರೂ ಸುರಕ್ಷತಾ ಕ್ರಮಗಳಿಗೆ ಮುಂದಾಗದೆ ಸಂಪೂರ್ಣ ನಿರ್ಲಕ್ಷ್ಯ ಮನೋಭಾವ ತೋರಿತು. ಅದರ ಪರಿಣಾಮವೇ ಕಂದಮಾಲ್, ಬರ್ಗಾ, ಕೊರಾಪುಟ್, ರಾಯ್‌ಗಡ, ಸುಂದರ್‌ಗರ್‌ಗಳು ಹೊತ್ತಿ ಉರಿಯುತ್ತಿವೆ.

ವಿಹೆಚ್‌ಪಿ ಮುಖಂಡನ ಹತ್ಯೆಗೆ ಕ್ರಿಶ್ಚಿಯನ್ನರೇ ಹೊಣೆ ಎಂದು ಸಂಘ ಪರಿವಾರ ತೀರ್ಮಾನಿಸಿ ಬಿಟ್ಟಿದೆ. ಮತ್ತೆ ತಡೆ ಏನು? ಕ್ರಿಶ್ಚಿಯನ್ನರ ಮನೆ, ಗುಡಿಸಲು, ಚರ್ಚ್‌ಗಳ ಮೇಲೆ ಧಾಳಿ, ಬೆಂಕಿ, ಸನ್ಯಾಸಿನಿಯರ ಸಜೀವ ದಹನ.... ಎಲ್ಲವೂ ಎಗ್ಗಿಲ್ಲದೇ ನಡೆಯುತ್ತಿದೆ.



ನೂರಾರು ಚರ್ಚ್‌ಗಳು, ಪ್ರಾರ್ಥನಾ ಮಂದಿರಗಳು, ಕ್ರೈಸ್ತರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು ಧ್ವಂಸಗೊಂಡಿವೆ. ಬಹುತೇಕವುಗಳನ್ನು ಸುಟ್ಟು ಕರಕಲು ಮಾಡಲಾಗಿದೆ. ರಾಜಧಾನಿ ಭುವನೇಶ್ವರದಲ್ಲೂ ಎರಡು ಚರ್ಚ್‌ಗಳನ್ನು ಧ್ವಂಸ ಮಾಡಲಾಗಿದೆ.

ಕಂದಮಾಲ್ ಜಿಲ್ಲೆಯ ಬರ್ಕಾಮದಲ್ಲಿ ನಡೆದ ಕೋಮು ಘರ್ಷಣೆಯಲ್ಲಿ ನಾಲ್ಕು ಮಂದಿಯನ್ನು ಹತ್ಯೆ ಮಾಡಲಾಗಿದೆ. ಗಜಪತಿ ಜಿಲ್ಲೆಯಲ್ಲಿ ನಡೆದ ಘರ್ಷಣೆಗಳಲ್ಲಿ ಎರಡೂ ಗುಂಪುಗಳು ಬಾಂಬ್ ಮತ್ತು ಗನ್‌ಗಳಿಂದ ಪರಸ್ಪರ ಧಾಳಿಗಳನ್ನು ಕೈಗೊಂಡಿದ್ದಾರೆ. ಗಜಪತಿ ಜಿಲ್ಲೆಯಲ್ಲಿ ನಡೆದ ಈ ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ದಿಗ್ಭ್ರಾಂತರಾಗುತ್ತೇವೆ. ಏಕೆಂದರೆ ಇಲ್ಲಿ ಎರಡೂ ಕೋಮಿನವರು ಬಾಂಬ್‌ಗಳು ಮತ್ತು ಗನ್‌ಗಳನ್ನು ಬಳಕೆ ಮಾಡಿದ್ದಾರೆ. ಸರ್ಕಾರ, ಪೊಲೀಸ್ ವ್ಯವಸ್ಥೆ ಇದೆಯೇ ಇಲ್ಲವೇ ಎಂಬ ಅನುಮಾನ ಮೂಡುತ್ತದೆ. ಬಾಂಬ್ ಮತ್ತು ಬಂದೂಕುಗಳು ಬಳಕೆ ಮಾಡುವುದೆಂದರೆ ಪರಿಸ್ಥಿತಿ ಯಾವ ಮಟ್ಟಕ್ಕೇರಿದೆ ಎಂಬುದು ಊಹೆಗೆ ನಿಲುಕದ್ದಾಗಿದೆ.



ವಾಸ್ತವವಾಗಿ ಗುಜರಾತ್‌ನಂತರ ಒರಿಸ್ಸಾ ಸಂಘಪರಿವಾರದ ಕಾರ್ಯಾಗಾರ ವಾಗಿದೆ. 1999ರಲ್ಲಿ ಗ್ರಹಾಂ ಸ್ಟೇನ್ಸ್ ಮತ್ತು ಅವರ ಇಬ್ಬರು ಮಕ್ಕಳನ್ನು ಜೀವಂತವಾಗಿ ಸುಟ್ಟು ಹಾಕಿದ್ದರು. ಈ ಘರ್ಷಣೆಗಳು ಇಂದಿಗೂ ನಿಂತಿಲ್ಲ. ಕೋಮುವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಳೆದಿರುವ ನೀತಿಗಳನ್ನು ಅವಲೋಕಿಸಿದರೆ ನಿಲ್ಲುವ ಸೂಚನೆಗಳೂ ಕಾಣುತ್ತಿಲ್ಲ.

ಸ್ವಾಮಿ ಲಕ್ಷ್ಮಣಾನಂದರನ್ನು ಕ್ರೈಸ್ತ ಮಿಷಿನರಿಗಳು ಹತ್ಯೆ ಮಾಡಿದವು ಎಂಬುದಕ್ಕೂ ಇದುವರೆಗೂ ಎಳ್ಳಷ್ಟೂ ಆಧಾರಗಳು ಲಭ್ಯವಾಗಿಲ್ಲ. ಆದರೆ ಸಂಘಪರಿವಾರದವರು ಗುರಿ ಮಾಡಿರುವುದು ಅವರನ್ನೇ. ಮತ್ತೊಂದೆಡೆ ಮಾವೋವಾದಿಗಳಿಂದ ಪ್ರತ್ಯೇಕ ಗೊಂಡಿರುವ ಪೀಪಲ್ಸ್ ಲಿಬರೇಷನ್ ರೆವುಲ್ಯೂಷನರಿ ಗ್ರೂಪ್ ಲಕ್ಷ್ಮಣಾನಂದ ಹತ್ಯೆಗೆ

ಪುಟ 14ಕ್ಕೆ

ಇದು ಜವಾಬುದಾರಿಕೆಯಿಲ್ಲದ ಸರ್ಕಾರ

ಸ್ವಾತಂತ್ರ್ಯ ದಿನದಂದು ಪ್ರಧಾನಿಗಳು ತಮ್ಮ ಸರಕಾರ ಉತ್ತಮ ಆಡಳಿತ ಒದಗಿಸುವ ಮಾತಿನಂತೆ ಕ್ರಮಗಳನ್ನು ಕೈಗೊಂಡಿದೆ ಎಂದು ಕೆಂಪು ಕೋಟೆಯಿಂದ ಸಾರಿದರು. ಆದರೆ ಪರಮಾಣು ವ್ಯವಹಾರವನ್ನು ಕುದುರಿಸುವ ಏಕೈಕ ಗೀಳು ಹಚ್ಚಿಸಿಕೊಂಡ ಯುಪಿಎ ಸರಕಾರ ಪ್ರಧಾನಮಂತ್ರಿಗಳ ಮಾತನ್ನು ತನ್ನ ಕೃತಿಯಲ್ಲೇ ನಿರಾಕರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ಪಕ್ಕಕ್ಕೆ ಎಸೆದು ಅದು ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ.

ಬಹಳ ಮಂದಿ ನಿರೀಕ್ಷಿಸಿದಂತೆ ಯುಪಿಎ ಸರಕಾರ ಸಂಸತ್ತಿನ ಮುಂಗಾರು ಅಧಿವೇಶನವನ್ನು ಪಕ್ಕಕ್ಕೆ ಎಸೆದಿದೆ. ಅಧಿವೇಶನವನ್ನು ಈಗ ಅಕ್ಟೋಬರ್ 17 ರಿಂದ ಐದು ವಾರ ನಡೆಸಲಾಗುವುದು ಎಂದು ಪ್ರಕಟಿಸಲಾಗಿದೆ. ಹೀಗೆ ಕ್ರಿಸ್ಮಸ್ ಪೂರ್ವದಲ್ಲಿ ಮುಗಿಯಬೇಕಾಗಿದ್ದ ಚಳಿಗಾಲದ ಅಧಿವೇಶನವೂ ನಿರರ್ಥಕವಾದಂತಾಗಿದೆ. ಬಹುಶಃ ಈಗಿನ ಹಣದುಬ್ಬರದ ದರದಲ್ಲಿ ಲೋಕಸಭೆಯಲ್ಲಿ ಏನಾದರೂ ಬಹುಮತ ಸೃಷ್ಟಿಸುವ ಅಗತ್ಯ ಬಿದ್ದರೆ ಅದು ಮೊನ್ನೆ ಪಡೆದ ವಿಶ್ವಾಸಮತಕ್ಕಿಂತ ಹೆಚ್ಚು ವೆಚ್ಚದಾಯಕವಾಗಬಹುದು ಎಂಬ ಭೀತಿ ಯುಪಿಎಗೆ ಇರಬಹುದು! ಏನೇ ಆಗಲಿ, ಇದು ಬಹುಮಟ್ಟಿಗೆ 14ನೇ ಲೋಕಸಭೆಯ ಕೊನೆಯ ಅಧಿವೇಶನವಾಗಿರುವಂತೆ ಕಾಣುತ್ತದೆ. ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ಕುದುರಿಸಿ 'ಜಯಶಾಲಿ'ಯಾಗಿ ಸಂಸತ್ತನ್ನು ಪ್ರವೇಶಿಸುವ ನಿರೀಕ್ಷೆ ಸರಕಾರದ್ದು ಎಂಬುದು ಸ್ಪಷ್ಟ. ನಿಜವಾಗಿಯೂ, ನಮ್ಮ ಸಂಸತ್ತಿನ ವೇಳಾಪಟ್ಟಿಯನ್ನು ಅಮೆರಿಕನ್ ಸಂಸತ್ತಿನ ವೇಳಾಪಟ್ಟಿಯನ್ನು ನೋಡಿಕೊಂಡು ನಿರ್ಧರಿಸುವುದು ಈ ನಮ್ಮ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವದ ಮೇಲೊಂದು ಕಳಂಕ. ಭಾರತವು ಅಮೆರಿಕಾದ 'ಅಡಿಯಾಳು ಮಿತ್ರ' ಆಗುತ್ತಿದೆ ಎಂಬ ಭಯ, ದುರದೃಷ್ಟವಶಾತ್, ನಿಜವಾಗುತ್ತಿದೆ.

ಸಂಸತ್ತಿನ ಅಧಿವೇಶನಗಳ ಬಗ್ಗೆ ಹೀಗೆ ಕೈವಾಡ ನಡೆಸುವುದು ಗಂಭೀರ ಪರಿಣಾಮಗಳನ್ನು ಬೀರುವಂತದ್ದು. ಇದಕ್ಕೆ ಹಲವು ಮಹತ್ವದ ಕಾರಣಗಳಿವೆ. ಇದು ನಮ್ಮ ಆಡಳಿತ ವ್ಯವಸ್ಥೆಯ ಮೂಲ ನೀತಿಗಳನ್ನೇ ಉಲ್ಲಂಘಿಸುತ್ತದೆ. ಜನತೆಯೇ ಸಾರ್ವಭೌಮ ಎನ್ನುವುದು ಭಾರತ ಸಂವಿಧಾನ ರಚನೆಯ ಕೇಂದ್ರ ಅಂಶ. ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬುದಾರಿಯಾಗಿರುತ್ತದೆ, ಶಾಸಕಾಂಗವು ಜನಗಳಿಗೆ. ಸಂಸತ್ತಿನ ಅಧಿವೇಶನ ಇಲ್ಲ ಎಂದರೆ ಅದು ಶಾಸಕಾಂಗದ ಹಕ್ಕಿನ ನಿರಾಕರಣೆ ಮತ್ತು ಕಾರ್ಯಾಂಗದ ಬಾಧ್ಯತೆಯ ನಿರಾಕರಣೆ. ಈ ಮೂಲಕ ಸಂವಿಧಾನದಲ್ಲಿ ಪ್ರತಿಷ್ಠಾಪಿತವಾಗಿರುವ ಸಾರ್ವಭೌಮತೆಯ ಪರಿಕಲ್ಪನೆಗೆ ಭಂಗ ಬಂದಿದೆ.



ಕೋಶಿ ನದಿಯಿಂದಾದ ಅನಾಹುತ

ಎಷ್ಟೊಂದು ಗಹನ ಸಮಸ್ಯೆಗಳು

ದೇಶ ಮತ್ತು ಜನತೆಯನ್ನು ಪೀಡಿಸುತ್ತಿರುವ ಹಲವು ಘಟನೆಗಳು ಸಂಭವಿಸುತ್ತಿರುವ ಸಮಯದಲ್ಲಿ ಈ ರೀತಿಯ ಭಂಗ ಬರುತ್ತಿದೆ. ಇತ್ತ ಹಣದುಬ್ಬರದ ನಿಲ್ಲದ ನಾಗಾಲೋಟ,

ಪುಟ 13ಕ್ಕೆ


ಜಿನಿವಾ ಸಭೆಯ

ಜಿನಿವಾದಲ್ಲಿ ಇತ್ತೀಚೆಗೆ ನಡೆದ ದೋಹಾ ಸುತ್ತಿನ ಮತ್ತೊಂದು ಮಾತುಕತೆಯಲ್ಲಿ ಏನು ನಡೆಯಿತು. ಭಾರತದಂತಹ ಅಭಿವೃದ್ಧಿಶೀಲ ದೇಶಗಳ ಕೈ ತಿರುಚುವ ಮುಂದುವರಿದ ದೇಶಗಳ ಯತ್ನಕ್ಕೆ ಯಶ ಸಿಕ್ಕಿತೆ?

WTO :ದೋಹ ಸಭೆ

ದೇಶದೇಶಗಳ ಕೈ ತಿರುಚುತ್ತಿರುವ ಅಮೆರಿಕಾದ ದುಷ್ಟ ಯತ್ನ

ರಾಮಕೃಷ್ಣ .ಆರ್

ಜುಲೈ 21 ರಿಂದ 25,2008 ರವರೆಗೆ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂಟಿಒ)ಮಹಾ ನಿರ್ದೇಶಕರು ಕರೆದ ಸಚಿವರುಗಳ ಸಭೆಯು ನಡೆದಿದೆ. ನಮ್ಮ ದೇಶದ ವಾಣಿಜ್ಯ ಮಂತ್ರಿ ಈ ಸಚಿವರುಗಳು ಸಭೆ ಯಲ್ಲಿ ಭಾಗವಹಿಸಿ ಬಂದಿದ್ದಾರೆ. ಈ ದೋಹಾ ಸುತ್ತಿನ ಮಾತುಕತೆ ಎಂದು ಕರೆಯಲಾಗುವ ಮಾತುಕತೆಯನ್ನು ಹೇಗಾದರೂ ಸರಿ ಸಂಬಂಧಿಸಿದ ದೇಶಗಳನ್ನು 'ಒಪ್ಪಿಸಿ' ಮಾತುಕತೆ 'ಮುಗಿಸುವ' ಉದ್ದೇಶದಿಂದ ಈ ಸಭೆಯನ್ನು ಕರೆಯಲಾಗಿತ್ತು. ಕಳೆದ ಏಳು ವರ್ಷಗಳಿಂದ ಮಾತುಕತೆ ನಡೆಸಲಾಗುತ್ತಿದ್ದರೂ ದೋಹ ಸುತ್ತಿನ ಮಾತುಕತೆಗಳನ್ನು ಪೂರ್ಣಗೊಳಿಸಲು ಆಗಿಲ್ಲ. ಈಗಲೂ, ಕೃಷಿ ಮತ್ತು ಕೃಷಿಯೇತರ ಮಾರುಕಟ್ಟೆ ಪ್ರವೇಶಾಧಿಕಾರ (ಎನ್.ಎ.ಎಂ.ಎ) ಕುರಿತು 19ನೇ ಮೇ 2008ರಂದು ಒದಗಿಸಲಾಗಿರುವ ಎರಡು ಪಠ್ಯಗಳು ಈ ಚರ್ಚೆಗೆ ಆಧಾರವಾಗಿತ್ತು. ಈ ದಾಖಲೆಗಳನ್ನು ನೋಡಿದರೆ ಅಮೇರಿಕಾ ನೇತೃತ್ವದ ಮುಂದುವರಿದ ದೇಶಗಳು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕೈಗಳನ್ನು ತಿರುಚಿ ತಮ್ಮ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ಹವಣಿಸುತ್ತಿರುವುದು ತುಂಬಾ ಸ್ಪಷ್ಟವಾಗಿತ್ತು.

ಭಾರತ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಒಂದು ತಪ್ಪು ಮಾಡಿದವು. ವಿದೇಶದಿಂದ ಆಮದಾಗುವ ಕೃಷಿ ಉತ್ಪನ್ನಗಳ ಪ್ರಮಾಣಕ್ಕೆ ನಿರ್ಬಂಧ ಹೇರುವ ಹಕ್ಕನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಒತ್ತಾಯ ಹಾಕುವ ಬದಲಿಗೆ ಅವು ವಿಶೇಷ ರಕ್ಷಣಾ ಕ್ರಮಗಳ ವಿಚಾರದಲ್ಲಿ ಮಾತುಕತೆ ಮಾಡಲು ಒಪ್ಪಿಕೊಂಡವು. ಆದರೂ ಪೂರ್ಣ ಮಾತುಕತೆ ಯಶ ಕಾಣಲಿಲ್ಲ.

ಕೃಷಿಗೆ ಸಂಬಂಧಿಸಿದ ಪರಿಷ್ಕೃತ ಪಠ್ಯವು ಅಭಿವೃದ್ಧಿ ಹೊಂದುತ್ತಿರುವ ದೇಶಗಳು (ಅಂದರೆ ಭಾರತ, ಚೀನಾ, ಬ್ರೆಜಿಲ್ ಇತರೆ) ತಮ್ಮ ದೇಶದೊಳಕ್ಕೆ ಬರುವ ಕೃಷಿ ಉತ್ಪನ್ನಗಳ ಮೇಲೆ ಸರಾಸರಿ ಶೇ.36 ರಷ್ಟು ಸುಂಕಗಳನ್ನು ಕಡಿತಗೊಳಿಸಬೇಕೇನ್ನುತ್ತದೆ. ಹಾಗಾದರೆ ಅದು ಭಾರತದಂತಹ ದೇಶದ ಸಣ್ಣ ಮತ್ತು ಅತಿ ಸಣ್ಣ ರೈತರ ಬದುಕಿನ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರಲಿದೆ.

ಭಾರತವು ಶೇಕಡ 20 ರಷ್ಟು ಉತ್ಪನ್ನಗಳು ವಿಶೇಷ ಉತ್ಪನ್ನಗಳೆಂದು ಪರಿಗಣಿಸಬೇಕೆಂದು ಒತ್ತಾಯಿಸಿದೆ. ಆದರೆ ಪರಿಷತ ಪಠ್ಯದ ಪ್ರಕಾರ ಭಾರತದ 715 ಕೃಷಿ ಉತ್ಪನ್ನಗಳಲ್ಲಿ ಕೇವಲ ಶೇ.8 ಕೃಷಿ ಉತ್ಪನ್ನಗಳು ಮಾತ್ರ ವಿಶೇಷ ಉತ್ಪನ್ನಗಳೆಂದು ಪರಿಗಣಿಸಲು ಸಾಧ್ಯವಾಗುವಂತಹವು. ಇದರಲ್ಲಿ ಕೇವಲ ಶೇ.3.2 ಉತ್ಪನ್ನಗಳಲ್ಲಿ ಮಾತ್ರ ಸುಂಕ ಕಡಿತ ಮಾಡದೆ ಇರಲು ಅವಕಾಶವಿದೆ. ಉಳಿದ ಶೇ. 4.8 ರಷ್ಟು ಉತ್ಪನ್ನಗಳಿಗೆ ಶೇ.15 ರಷ್ಟು ಸುಂಕ ಕಡಿತಗೊಳ್ಳುತ್ತದೆ.

ಇದರ ಒಟ್ಟಾರೆ ಅರ್ಥವೆಂದರೆ ಅಭಿವೃದ್ಧಿ ಹೊಂದಿದ ದೇಶಗಳಿಂದ ಭಾರತದ ಒಳನುಗ್ಗುವ ಆ ದೇಶಗಳ ಅತ್ಯಂತ ಅಗ್ಗದ ಕೃಷಿ ಉತ್ಪನ್ನಗಳಿಂದ ಭಾರತದ ರೈತರಿಗೆ ರಕ್ಷಣೆ ಇಲ್ಲವಾಗುತ್ತದೆ. ವಿಶೇಷ ಉತ್ಪನ್ನ ಅಂತ ಗುರುತಿಸಲಾಗುವ ಉತ್ಪನ್ನಗಳಲ್ಲಿ ಆಮದು ಸುಂಕ ಕಡಿತ ಮಾಡದೇ ಹಾಗೇ ಉಳಿಸಬಹುದಾದರೂ ಅದರಲ್ಲಿ ಅಂತಹ ಉತ್ಪನ್ನಗಳೇ ಕಡಿಮೆ (ಶೇ.8) ಮೇಲೆ ಹೇಳಿದಂತೆ ಅದರೊಳಗೆ ಸಹ ಹಲವು ಉತ್ಪನ್ನಗಳಿಗೆ ಆಮದು ಸುಂಕ ಕಡಿತ ಮಾಡಬೇಕಾಗುತ್ತದೆ.


ಡಬ್ಲ್ಯುಟಿಒ ಕುರಿತ ಅಣಕು ಪ್ರದರ್ಶನ

ಭಾರತದಲ್ಲಿ ವೈವಿಧ್ಯಮಯವಾದ ಕೃಷಿ ಉತ್ಪನ್ನಗಳಿವೆ ಮತ್ತು ಇವು ಜನಸಾಮಾನ್ಯರ ಬದುಕಿನ ಆಧಾರವಾಗಿವೆ. ಆದರೆ ಇವುಗಳಲ್ಲಿ ವಿಶೇಷ ಉತ್ಪನ್ನ ಎಂಬ ಆಧಾರದಲ್ಲಿ ಸಿಗುವ ರಕ್ಷಣೆ ಕೆಲವಕ್ಕೆ ಮಾತ್ರ. ಅದೂ ಅತ್ಯಂತ ದುರ್ಬಲ.

ಇದನ್ನು ಒಪ್ಪಿಕೊಂಡಲ್ಲಿ ಹೊರ ದೇಶಗಳಿಂದ 'ಭಾರತಕ್ಕೆ ಇಷ್ಟು ಮಾತ್ರವೇ ಉತ್ಪನ್ನವನ್ನು ರಫ್ತು ಮಾಡಿ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನಗಳನ್ನು ಕಳಿಸಬೇಡಿ' ಎಂಬ ನಿರ್ಬಂಧ ಹಾಕುವಂತಿಲ್ಲ. ಇದಕ್ಕೆ ಬದಲಾಗಿ ಕೆಲವು ವಿಶೇಷ ಉತ್ಪನ್ನಗಳಿಗೆ ರಕ್ಷಣೆ ಒದಗಿಸುವ ಪ್ರಸ್ತಾಪ ಇತ್ತು. ಹೀಗೆ ಲಂಗು ಲಗಾಮಿಲ್ಲದೇ ನುಗ್ಗುವ ಉತ್ಪನ್ನಗಳ ಈ ಮುಂದುವರಿದ ದೇಶಗಳು ಯಾವ ವಿಶೇಷ ರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಭಾರತದಂತಹ ದೇಶಗಳಿಗೆ ಅವಕಾಶ ನೀಡುತ್ತದೆ ಎಂಬುದು ಚರ್ಚಾಸ್ಪದವಾದ ಹಾಗೂ ಸಂದೇಹಾಸ್ಪದವಾದ ವಿಚಾರವಾಗಿದೆ.

ಅಮೇರಿಕಾ ಮತ್ತು ಮುಂದುವರಿದ ರಾಷ್ಟ್ರಗಳು ಎಷ್ಟು ಬಲಾಢ್ಯರೆಂದರೆ ವಿಶೇಷ ರಕ್ಷಣಾ ಕ್ರಮಗಳು, ವಿಶೇಷ ಉತ್ಪನ್ನ ಎಂಬ ಹೆಸರುಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇರುವ ಕೆಲವು ರಕ್ಷಣಾತ್ಮಕ ಹಕ್ಕುಗಳೇ ಅರ್ಥಹೀನ ಎಂಬಂತೆ ಅವು ಮಾಡಿವೆ. ಆದರೆ ಮತ್ತೊಂದೆಡೆ ತಮ್ಮ ತಮ್ಮ ದೇಶಗಳಲ್ಲಿ ಅವು ರೈತರಿಗೆ ಭಾರಿ ಕೃಷಿ ಸಹಾಯ ಧನ ನೀಡಿ ಅವನ್ನು ಅತ್ಯಂತ ಅಗ್ಗದ ದರದಲ್ಲಿ ಇತರ ದೇಶಗಳೊಳಕ್ಕೆ ನುಗ್ಗುವಂತೆ ಮಾಡುತ್ತವೆ. ಈ ದೇಶಗಳಿಗೆ ಈ ಬಗ್ಗೆ ನಿರ್ಬಂಧವೇ ಇಲ್ಲವಾಗಿದೆ.

ಭಾರತ ಸರ್ಕಾರಕ್ಕೆ ಮನಸ್ಸಿದೆಯೋ ಇಲ್ಲವೋ ಅಂತೂ ಭಾರತ ಪ್ರತಿನಿಧಿಗಳು ದೇಶದ ಒಳಗಿನ

ಅಲ್ಲಿ ಇನ್ನಷ್ಟು ಸಬ್ಸಿಡಿ

ಬಲಾಢ್ಯ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ದೇಶದ ಕೃಷಿ ಉತ್ಪನ್ನಗಳಿಗೆ ನೀಡುವ ಭಾರಿ. ಸಹಾಯಧನವನ್ನು ಕಡಿತ ಮಾಡಬೇಕೆಂಬ ಒತ್ತಡ, ಹೋರಾಟ, ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದರೆ, ಇತ್ತ ಅಮೇರಿಕಾದಲ್ಲಿ ಏನು ನಡೆದಿದೆ ಗೊತ್ತೆ. ಇದೇ ಮೇ 2008ರಲ್ಲಿ ಅಮೇರಿಕಾ ಕಾಂಗ್ರೆಸ್(ಸಂಸತ್) ಕೃಷಿಗೆ ಮತ್ತಷ್ಟು ಸಹಾಯಧನ ಹೆಚ್ಚಿಸಲು ಸಾಧ್ಯವಾಗುವಂತಹ, ಕೃಷಿ ಮಸೂದೆಗೆ ಅಂಗೀಕಾರ ನೀಡಿದೆ.!!

ಅಕ್ಟೋಬರ್ 1, 2008 ರಿಂದ ಮುಂದಿನ ಐದು ವರ್ಷಗಳಲ್ಲಿ ಅಮೆರಿಕವು ತನ್ನ ದೇಶದ ಕೃಷಿಗೆ 307 ಬಿಲಿಯನ್ ಡಾಲರ್ ಬೆಂಬಲ ನೀಡಲು ಈ ಕಾಯ್ದೆ ಅಮೇರಿಕ ಸರ್ಕಾರಕ್ಕೆ ಅವಕಾಶ ನೀಡುತ್ತದೆ. ಈ ಮೊತ್ತದಲ್ಲಿ ಪ್ರಧಾನ ಭಾಗವು ಕೃಷಿ ಸಬ್ಸಿಡಿಯಾಗಿರುತ್ತದೆ.

ಈ ದೈತ್ಯರ ಕಣ್ಣು ಕೇವಲ ಕೃಷಿಯ ಮೇಲೆ ಮಾತ್ರ ಬಿದ್ದಿಲ್ಲ. ನಾಮ (NAMA) ಪಠ್ಯದಲ್ಲಿ ಕೈಗಾರಿಕಾ ಉತ್ಪನ್ನಗಳಿಗೆ ಸಂಬಂಧಿಸಿದ ಹಲವು ಸೂಚನೆಗಳು ಇದ್ದವು. ಅದೇನೆಂದರೆ ವಿದೇಶಗಳಿಂದ ಭಾರತಕ್ಕೆ ಬರುವ ಕೈಗಾರಿಕಾ ಉತ್ಪನ್ನಗಳಿಗೆ ಹಾಕಲಾಗುವ ಸುಂಕಗಳನ್ನು ಅಭಿವೃದ್ಧಿಶೀಲ ದೇಶಗಳು ಕಡಿತ ಮಾಡಬೇಕೆಂಬ ಶಿಫಾರಸ್ಸು (ಒತ್ತಡ) ಇದೆ. ಈಗ ಭಾರತದಲ್ಲಿ ಈ ವಾಸ್ತವಿಕ ಸುಂಕ ಸರಾಸರಿ ಶೇ.10 ರಷ್ಟು ಇದೆ. ಸುಂಕ ನಿಗದಿಗೊಳಿಸಲು ಇರುವ ಅವಕಾಶದ ಮಿತಿ ಶೇ.34 ರವರೆಗೆ ಇದೆ. ಇದನ್ನು ತೀವ್ರವಾಗಿ ಕಡಿತ ಮಾಡಬೇಕೆಂಬ ಒತ್ತಡ ಇದೆ.

ಹಾಗಾದಲ್ಲಿ ಭಾರತದ ಕೈಗಾರಿಕಾ ಉತ್ಪನ್ನಗಳಿಗೆ ಭವಿಷ್ಯದಲ್ಲಿ ರಕ್ಷಣೆಯೇ ಇಲ್ಲದಂತಾಗುತ್ತದೆ. ಇದು ಗ್ಯಾಟ್ಸ್ (General Agreement on Trade in Services) ಒಪ್ಪಂದದನ್ವಯ ಅಭಿವೃದ್ಧಿಶೀಲ ದೇಶಗಳಲ್ಲಿ ಉದಾರೀಕರಣ ನೀತಿಯನ್ನು ತೀವ್ರಗೊಳಿಸುವ ಪ್ರಯತ್ನದ ಭಾಗವೇ ಆಗಿದೆ.

ಉಷ್ಣ ವಲಯದ ಉತ್ಪನ್ನಗಳ ಆಮದಿನ ಮೇಲೆ ಏರಿಸಲಾಗಿರುವ ನಿರ್ಬಂಧಗಳನ್ನು ಸಡಲಿಸಬೇಕೆಂಬ ಒತ್ತಡವೂ ಸಹ ತೀವ್ರವಾಗಿದ್ದು, ಇದು ಸಹ ಭಾರತದ ರೈತರನ್ನು ಕಟುಕಷ್ಟಗಳಿಗೆ ನೂಕುವ ತಂತ್ರವಾಗಿದೆ.

ಉರುಗ್ವೆ ಸುತ್ತಿನ ಒಪ್ಪಂದದಿಂದಾಗಿ ನಮ್ಮ ಮೇಲೆ ಹೇರಿರುವ ನವ ಉದಾರೀಕರಣ ನೀತಿಗಳಿಂದ ಭಾರತದ ರೈತರು, ಕಾರ್ಮಿಕರು ದುಡಿಯುವ ಜನ ಬೆಂದು ಬಸವಳಿದಿದ್ದಾರೆ. ಇನ್ನು ಈ ಉದ್ದೇಶಿತ ದೋಹ ಒಪ್ಪಂದದಲ್ಲಿಡಲಾದ ಸೂಚನೆಗಳೂ ಜಾರಿಗೆ ಬರುವಂತಾದರೆ ಪರಿಸ್ಥಿತಿ ಮತ್ತಷ್ಟು ಭೀಕರವಾಗಿ ಹೋಗುತ್ತದೆ.

ಆಂತರಿಕ ಒತ್ತಡ, ರೈತ ಚಳುವಳಿಯ ಒತ್ತಡಕ್ಕೆ ಒಳಗಾಗಿ ಸ್ವಲ್ಪವಾದರೂ ದೃಢ ನಿಲುವು ತೆಗೆದುಕೊಳ್ಳಬೇಕಾಗಿ ಬಂತು. ಭಾರತದೊಂದಿಗೆ ಚೀನಾ ಮುಂತಾದ ದೇಶಗಳೂ ಕೈ ಜೋಡಿದವು. ಸುಮಾರು 100 ದೇಶಗಳು ಭಾರತ ಚೀನಾಗಳ ಬೆನ್ನಿಗೆ ನಿಂತವು. ಹೀಗಾಗಿ ಈ ಪ್ರಯತ್ನಕ್ಕೆ ಇನ್ನಷ್ಟು ಬಲ ಬಂತು. 9 ದಿನಗಳ ಜಗ್ಗಾಟ ನಡೆಯಿತು.

ಅಭಿವೃದ್ಧಿಶೀಲ ದೇಶಗಳ ಮೇಲೆ ಮುಂದುವರಿದ ದೇಶಗಳ ಸವಾರಿ

ವಿಶ್ವ ವ್ಯಾಪಾರ ಸಂಘಟನೆ (ಡಬ್ಳ್ಯುಟಿಒ) ನ 153 ಸದಸ್ಯ ದೇಶಗಳಲ್ಲಿ 30 ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳಾದರೆ ಇನ್ನುಳಿದವು ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ಬಡ ದೇಶಗಳ ಸಾಲಿನಲ್ಲಿ ಬರುವಂತಹವು. ಈ ಮಾತುಕತೆಗಳಲ್ಲಿ ಪ್ರಧಾನವಾಗಿ ತಿಕ್ಕಾಟವಾಗಿದ್ದು ಅಭಿವೃದ್ಧಿಶೀಲ ಅಂದರೆ ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ನಡುವೆ.



ಹತ್ತಿ ಮತ್ತು ಬಾಳೆಹಣ್ಣಿನ ವಿಚಾರ ಪ್ರಧಾನವಾಗಿ ಚರ್ಚೆಗೊಂಡ ವಿಷಯಗಳು. ಇಲ್ಲೂ ಅಮೇರಿಕ ಭಂಡತನವನ್ನೇ ಮೆರೆಯಿತು. ಹತ್ತಿ ಬೆಳೆಗೆ ಅಮೇರಿಕ ದೇಶವು ಭಾರಿ ಪ್ರಮಾಣದ ಸಹಾಯಧನ ನೀಡುತ್ತದೆ. ಅದನ್ನು ಕಡಿತ ಮಾಡಬೇಕೆಂಬ ಬೇಡಿಕೆಯನ್ನು ಅಮೇರಿಕ ತಿರಸ್ಕರಿಸಿತು. ಆದರೆ ಅದೇ ಸಮಯದಲ್ಲಿ ಬಡ ಮತ್ತು ಅಭಿವೃದ್ಧಿಶೀಲಗಳು ತನ್ನ ಹತ್ತಿ ಮೇಲೆ ವಿಧಿಸುವ ಆಮದು ಸುಂಕವನ್ನು ತೀವ್ರವಾಗಿ ಕಡಿತ ಮಾಡಬೇಕೆಂದು ಒತ್ತಾಯಿಸಿತು. ಅಮೇರಿಕವು ಪ್ರತಿವರ್ಷ ತನ್ನ 25,000 ಹತ್ತಿ ಬೆಳೆಗಾರರಿಗೆ 3 ರಿಂದ 4 ಮಿಲಿಯನ್ ಡಾಲರ್‌ವರೆಗೆ ಸಹಾಯಧನ ನೀಡುತ್ತದೆ.

ಆದರೆ ಬಡ ಆಫ್ರಿಕಾ ದೇಶಗಳಲ್ಲಿನ ಮಿಲಿಯಗಟ್ಟಲೆ ಹತ್ತಿ ಬೆಳೆಗಾರರಿಗೆ ಯಾವುದೇ ರೀತಿಯ ಸಹಾಯಧನ ದೊರೆಯುವುದಿಲ್ಲ. ಅಮೇರಿಕದ ಇಂತಹ ಅಕ್ರಮವು ಅಂತರರಾಷ್ಟ್ರೀಯವಾಗಿ ಹತ್ತಿ ವ್ಯಾಪಾರವನ್ನೇ ಹಾಳು ಮಾಡಿದೆ. ಅಮೇರಿಕ ಮತ್ತು ಯುರೋಪಿನ ದೇಶಗಳು ಸುಮಾರು 4 ದಶಕಗಳ ಕಾಲ ಒಂದು ತಂತ್ರ ಅನುಸರಿಸಿದವು. ಅವು ಟೆಕ್ಸ್‌ಟೈಲ್ ಕ್ಷೇತ್ರವನ್ನು ಡಬ್ಲ್ಯುಟಿಒ ವ್ಯಾಪ್ತಿಯಿಂದ ಹೊರಗಿರುವಂತೆ ನೋಡಿಕೊಂಡವು ಮತ್ತು ತಮ್ಮ ದೇಶದೊಳಕ್ಕೆ ಬರುವ ಟೆಕ್ಸ್‌ಟೈಲ್ ಉತ್ಪನ್ನಗಳಿಗೆ ಕೋಟಾ ನಿಗದಿ ಮಾಡಿ ತಮ್ಮ ಹಿತಾಸಕ್ತಿ ಕಾಪಾಡಿಕೊಂಡವು. ಅಭಿವೃದ್ಧಿಶೀಲ ದೇಶಗಳ ಸತತ ಹೋರಾಟದಿಂದಾಗಿ 2005 ಜನವರಿ 1 ಈ ಕೋಟಾ ರದ್ದಾಗಿ ಟೆಕ್ಸ್‌ಟೈಲ್ ಕ್ಷೇತ್ರವು ಮುಕ್ತ ವ್ಯಾಪಾರ ವ್ಯಾಪ್ತಿಗೆ ಬಂತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪೂರ್ಣ ವಿಫಲವೇನಲ್ಲ

ಜಿನಿವಾ ಮಾತುಕತೆ ಪೂರ್ಣ ವಿಫಲವೇನಲ್ಲ. ಎಷ್ಟೋ ಬಾರಿ ಇಂತಹ ಮಾತುಕತೆಗಳು ವಿಫಲ ಎನಿಸಿದರೂ ಚರ್ಚೆಯ ಹಂತದಲ್ಲಿ ಎಷ್ಟೋ ವಿಚಾರಗಳಲ್ಲಿ ಸಮ್ಮತಿ, ಸಹಮತಕ್ಕೆ ಬರಲು ಸಾಧ್ಯವಾಗಿರುತ್ತದೆ. ಅಷ್ಟರಮಟ್ಟಿಗೆ ಅದು ಪ್ರಗತಿಯೇ. ಈಗಿನ ಮಾತುಕತೆಗಳಲ್ಲಿ ಬಾಳೆಹಣ್ಣು ಮತ್ತು ಬಡ ದೇಶಗಳ ಕೈಗಾರಿಕಾ ಉತ್ಪನ್ನಗಳಿಗೆ ತೆರಿಗೆರಹಿತ ಪ್ರವೇಶಾವಕಾಶ ನೀಡುವ ವಿಷಯದಲ್ಲಿ ಮಾತುಕತೆಗಳಲ್ಲಿ ಸ್ವಲ್ಪ ಪ್ರಗತಿಯಾಗಿದೆ ಎಂದು ಹೇಳಲಾಗಿದೆ.

ಒಟ್ಟಾರೆ ಮಾತುಕತೆ ವಿಫಲವಾದರೂ ಸಮ್ಮತಿ ಒಪ್ಪಿಗೆಯಾದ ವಿಚಾರಗಳು ಜಾರಿಗೆ ಬರುವುದು ಹಿಂದಿನಿಂದಲೂ ನಡೆದುಬಂದಿದೆ. ಬಾಕಿ ಉಳಿದ ವಿಷಯಗಳಿಗಾಗಿ ಮತ್ತೆ ಚರ್ಚೆ ಮುಂದುವರಿಯುತ್ತದೆ.

ಸಹಾಯಧನದ ಪ್ರಮಾಣ, ತೆರಿಗೆ, ಸುಂಕಗಳ ಮಿತಿ, ಇತ್ಯಾದಿ ವಿಷಯಗಳಲ್ಲಿ ಎಷ್ಟೋ ಬಗೆಯ ಜಗ್ಗಾಟಗಳು ಇಲ್ಲಿ ನಡೆಯುತ್ತಿದ್ದರೂ, ಅವೆಲ್ಲಾ ಈಗ ಜಾರಿಗೆ ಬಂದೇಬಿಡುತ್ತವೆ ಅಥವಾ ಜಾರಿಯಲ್ಲಿದೆ ಎಂದೇನೂ ನಾವು ಭಾವಿಸಬೇಕಿಲ್ಲ. ಸಹಾಯಧನ ನೀಡುವ ವಿಚಾರದಲ್ಲಿ ಕಾನೂನುಬದ್ಧವಾಗಿ ಸಾಧ್ಯವಾದಷ್ಟು ಹೆಚ್ಚು ಪ್ರಮಾಣದ ಅವಕಾಶವನ್ನು ಉಳಿಸಿಕೊಳ್ಳಲು ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು, ಹೊರಗಿನ ಉತ್ಪನ್ನಗಳಿಗೆ ತೆರಿಗೆ ಹಾಕುವ ಸುಂಕ ವಿಧಿಸುವ ಹೆಚ್ಚಿನ ಅವಕಾಶಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ತಿಕ್ಕಾಟ ನಡೆಸಿದರೂ ಈಗ ವಾಸ್ತವಿಕವಾಗಿ ಜಾರಿಯಲ್ಲಿರುವ ತೆರಿಗೆ ಮತ್ತು ಸುಂಕ, ಸಹಾಯಧನದ ಪ್ರಮಾಣಗಳು ಭಿನ್ನವಾಗಿವೆ. ಈಗ ನಡೆದಿರುವುದು ಕಾನೂನಿನ ಅವಕಾಶಕ್ಕಾಗಿ ತಿಕ್ಕಾಟ. ಮತ್ತೆ ಈ ವಿಷಯದಲ್ಲಿ ಬಲಾಢ್ಯರಲ್ಲಿ ಮೇಲುಗೈರದೇ ಎಂಬುದು ವಾಸ್ತವ.

ವ್ಯಾಪಾರಕ್ಕೆ ಹಾನಿ ಮಾಡುವ ಆಂತರಿಕ ಬೆಂಬಲ

ದೇಶ ದೇಶಗಳ ನಡುವೆ ಆಗುವ ದ್ವಿಪಕ್ಷೀಯ ಒಪ್ಪಂದಗಳು ಅಥವಾ ಪ್ರಾದೇಶಿಕವಾಗಿ ಮಾಡಿಕೊಳ್ಳಲಾಗುವ ಒಪ್ಪಂದಗಳಲ್ಲಿ ಜಾರಿಯಾಗಿರುವುದನ್ನು ನೋಡಿದರೆ ಈ ಮಾತುಕತೆಗಳಲ್ಲಿ ಪ್ರತಿಪಾದಿಸುತ್ತಿರುವುದಕ್ಕಿಂತ ಸಹಾಯಧನ ಪ್ರಮಾಣ ಭಿನ್ನವಾಗಿವೆ ಎಂಬುದು ಗೊತ್ತಾಗುತ್ತದೆ. ತಮ್ಮ ಉತ್ಪನ್ನಗಳಿಗೆ ಮುಂದುವರಿದ ದೇಶಗಳು ನೀಡುವ ಬಾರಿ ಸಹಾಯಧನವು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಹಾನಿ ಮಾಡುವುದರಿಂದ ಅದನ್ನು 'ಒಟ್ಟಾರೆ ವ್ಯಾಪಾರಕ್ಕೆ ಹಾನಿ ಮಾಡುವ ಆಂತರಿಕ ಬೆಂಬಲ' (OTDS) ಎಂದು ಕರೆಯಲಾಗಿದೆ. ಪ್ರಸಕ್ತ ಮಾತುಕತೆಗಳಲ್ಲಿ ಅಮೇರಿಕ ಮತ್ತು ಯುರೋಪಿಯನ್ ಒಕ್ಕೂಟ ತಾವು ನೀಡುತ್ತಿರುವ ಇಂತಹ ಆಂತರಿಕ ಬೆಂಬಲದಲ್ಲಿ ಶೇ.70 (ಅಮೇರಿಕ) ಶೇ.80 ರಷ್ಟು (ಯುರೋಪ್ ಒಕ್ಕೂಟ) ಕಡಿತ ಮಾಡುವುದಾಗಿ ಹೇಳಿದವು.

ಈಗ ಅಮೇರಿಕ ನಿಯಮಬದ್ಧವಾಗಿಯೇ ತನ್ನ ಉತ್ಪನ್ನಗಳಿಗೆ 48 ಬಿಲಿಯನ್ ಡಾಲರ್ ಬೆಂಬಲ ನೀಡಲು ಅವಕಾಶವಿದೆ. ಅದರಲ್ಲಿ ಶೇ.70ರಷ್ಟು ಕಡಿತ ಎಂದರೆ ಆಗ ಮೊತ್ತವು 14.5 ಬಿಲಿಯನ್ ಡಾಲರ್‌ಗೆ ಇಳಿಯುತ್ತದೆ. ಆದರೆ ವಾಸ್ತವಿಕವಾಗಿ ಅಮೇರಿಕ ನೀಡುತ್ತಿರುವ ಮೊತ್ತ ಅಷ್ಟಲ್ಲ. ಅದು 96-97 ರಲ್ಲಿ 7 ಬಿಲಿಯನ್ ಡಾಲರ್ ಇತ್ತು. 2007 ರಲ್ಲಿ 8 ಬಿಲಿಯನ್ ಡಾಲರ್ ಇತ್ತು. ಇದರ ಅರ್ಥವೇನೆಂದರೆ ಅಮೇರಿಕವು ನಿಯಮಬದ್ಧವಾದ ಬೆಂಬಲ ಮೊತ್ತದ ಪ್ರಮಾಣವನ್ನು 48 ಬಿಲಿಯನ್ ಡಾಲರ್‌ಗಿಂತಲೂ ತುಂಬಾ ಕಡಿತ ಮಾಡಲು ಸಾಧ್ಯವಿದೆ.

ಅದೇ ರೀತಿ ಯುರೋಪಿಯನ್ ಒಕ್ಕೂಟ ತನ್ನ ಉತ್ಪನ್ನಗಳಿಗೆ ಬೆಂಬಲದ ಮೊತ್ತ ನೀಡುವ ಸಂಬಂಧ ಇರುವ ನಿಯಮಬದ್ಧ ಅವಕಾಶದ ಪ್ರಮಾಣ 110 ಬಿಲಿಯನ್ ಡಾಲರ್, ಅದರಲ್ಲಿ ಶೇ.80 ಕಡಿತ ಎಂದರೆ ಆಗ ಆ ಮೊತ್ತವು 22 ಬಿಲಿಯನ್ ಡಾಲರ್‌ಗೆ ಇಳಿಯುತ್ತದೆ. ಯುರೋಪಿಯನ್ ಒಕ್ಕೂಟದಲ್ಲೂ ಅಮೇರಿಕದಂತೆಯೇ. 2008 ರಲ್ಲಿ ಯುರೋಪಿಯನ್ ಒಕ್ಕೂಟವು ತನ್ನ ಉತ್ಪನ್ನಗಳಿಗೆ ನೀಡಿರುವ ಬೆಂಬಲದ ವಾಸ್ತವಿಕ ಮೊತ್ತ 28 ಬಿಲಿಯನ್ ಡಾಲರ್. ಸಾಮಾನ್ಯ ಕೃಷಿ ನೀತಿಯ ಒಪ್ಪಂದದಂತೆ 2014ರಲ್ಲಿ ಈ ಪ್ರಮಾಣ 12 ಬಿಲಿಯನ್ ಡಾಲರ್‌ಗಿಳಿಯುತ್ತದೆ.

ಇದರ ಅರ್ಥ ಇಷ್ಟೆ. ಅಮೇರಿಕಾ ಮತ್ತು ಯುರೋಪಿನ ಒಕ್ಕೂಟಗಳು ಈ ಹಿಂದಿನ ಮಾತುಕತೆಗಳಲ್ಲಿ ತಾವು ನೀಡುವುದಕ್ಕಿಂತಲೂ ಎಷ್ಟೋ ದೊಡ್ಡ ಪ್ರಮಾಣದ ಬೆಂಬಲವನ್ನು ನೀಡಲು ಸಾಧ್ಯವಾಗುವಂತಹ ನಿಯಮಗಳನ್ನು ಮಾಡಿಕೊಂಡಿದ್ದಾರೆ ಮತ್ತು ಈಗಲೂ ಅವುಗಳನ್ನು ಸಾಧ್ಯವಾದಷ್ಟು ಗರಿಷ್ಟ ಮಟ್ಟದಲ್ಲೇ (ಶೇ.70, ಶೇ.80ರಷ್ಟು ಕಡಿತ ಮಾಡಿದ ಮೇಲೂ) ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

ಇದಲ್ಲದೆ ಈ ರಾಷ್ಟ್ರಗಳು ಸಹಾಯಧನ ನೀಡುವ ಸ್ವರೂಪದಲ್ಲಿಯೂ ಬದಲಾವಣೆಯಾಗಿದೆ. 'ಹಸಿರುಡಬ್ಬ ಪಾವತಿ (ಗ್ರೀನ್ ಬಾಕ್ಸ್ ಪೇಮೆಂಟ್ಸ್) ಹೆಸರಿನಲ್ಲಿ ಈ ದೇಶಗಳು ನೀಡುತ್ತಿರುವ ಸಹಾಯಧನ ಬಗೆಗೆ ಸರಿಯಾದ ತನಿಖೆಯಾಗಬೇಕಾಗಿದೆ ಮತ್ತು ಈ 'ಹಸಿರು ಡಬ್ಬಿ ಪಾವತಿ, ಇತ್ಯಾದಿ ಏನೇ ಇದ್ದರೂ ಅದು ಪಾರದರ್ಶಕವಾಗಿರುವಂತೆ ಆಗಬೇಕಿದೆ.

ಇಲ್ಲಿ ಈ ಹಸಿರು ಡಬ್ಬಿ (Green Box) ಎಂದರೇನು ಎಂಬ ಪ್ರಶ್ನೆ ಬರುವುದು ಸಹಜ. ಅಮೆರಿಕವು ತನ್ನ ರೈತರಿಗೆ ಈ 'ಹಸಿರು ಡಬ್ಬಿ' ಎಂಬ ವರ್ಗೀಕರಣದಡಿ ರಕ್ಷಣೆ ಕೇಳುತ್ತಿದೆ. ಅಮೆರಿಕಾದ ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿರುವ ಉತ್ಪನ್ನಗಳು ಎನ್ನುವ ನಿಟ್ಟಿನಲ್ಲಿ ಅವುಗಳಿಗೆ ವಿಶೇಷ ರಕ್ಷಣೆ ಬಯಸಿದೆ. ಇದಕ್ಕೆ ಪ್ರತಿಯಾಗಿ ಭಾರತವು ದೇಶದ ಆಹಾರ ಭದ್ರತೆ ಹಾಗೂ ರೈತರ ಜೀವನಾಧಾರಕ್ಕೆ ಸಂಬಂಧಿಸಿದ ಉತ್ಪನ್ನಗಳಿಗೆ ವಿಶೇಷ ರಕ್ಷಣಾ ಕ್ರಮಗಳನ್ನು ಒತ್ತಾಯಿಸಿತು.

ವಿಶೇಷ ಕೃಷಿ ರಕ್ಷಣಾ ವ್ಯವಸ್ಥೆ (SSMs) ಪ್ರಶ್ನೆ

ಜಿನಿವಾದ ಈ ಮಾತುಕತೆಯಲ್ಲಿ ಒಪ್ಪಂದಕ್ಕೆ ಬರಲಾಗದೇ ಹೋದ ಒಂದು ಪ್ರಮುಖ ವಿಷಯ ಎಂದರೆ ಈ ವಿಶೇಷ ಕೃಷಿ ರಕ್ಷಣಾ ವ್ಯವಸ್ಥೆ (SSMs)ಪ್ರಶ್ನೆ. ಭಾರತ ಮತ್ತು ಅಭಿವೃದ್ಧಿಶೀಲ ದೇಶಗಳು ಏನು ಕೇಳಿದವು. ಅಭಿವೃದ್ಧಿ ಶೀಲ ದೇಶಗಳ ಕೃಷಿ ಉತ್ಪನ್ನಗಳ ಆಮದು, ಅಂದರೆ ಮುಂದುವರಿದ ದೇಶಗಳಿಂದ ಉತ್ಪನ್ನಗಳನ್ನು ತರಿಸಿಕೊಳ್ಳುವುದು ಸತತವಾಗಿ ಮೂರು ವರ್ಷಗಳ ಕಾಲ ಶೇ. 15 ರಷ್ಟು ಹೆಚ್ಚಳವಾದರೆ ಆಗ ಅಭಿವೃದ್ಧಿ ದೇಶಗಳು ತನ್ನ ಕೃಷಿಕರ ಹಿತಾಸಕ್ತಿ ರಕ್ಷಿಸುವ ಸಲುವಾಗಿ ಆಮದು ಸುಂಕಗಳನ್ನು ಏರಿಸುವ ಅವಕಾಶ ಇರಬೇಕೆಂದು ಭಾರತ ಪ್ರತಿಪಾದಿಸಿತು. ಆದರೆ ಡಬ್ಲ್ಯುಟಿಓ ಮಹಾ ನಿರ್ದೇಶಕ ಫಾಸ್ಕಲಲ್ಯಾಮಿ ಅವರು ಸತತ ಮೂರು ವರ್ಷಗಳ ಕಾಲ ಆಮದು ಶೇ. 40 ರಷ್ಟು ಏರಿದರೆ ಆಗ ವಿಶೇಷ ಕೃಷಿ ರಕ್ಷಣಾ ವ್ಯವಸ್ಥೆ (SSMs) ಅವಕಾಶವನ್ನು ಬಳಸಿ ಅಭಿವೃದ್ಧಿಶೀಲ ದೇಶಗಳು ಆಮದು ಸುಂಕ ಹೆಚ್ಚಿಸಬಹುದು ಎಂಬ ಸೂಚನೆ ಮಂಡಿಸಿದರು. ಇದರ ಆಧಾರದಲ್ಲಿ ಚರ್ಚೆಗಳು ನಡೆದರೂ ಸಹ ಈ ಭಾರತದ ಸೂಚನೆಯನ್ನು ಅಮೆರಿಕ ತೀವ್ರವಾಗಿ ವಿರೋಧಿಸಿದ್ದರಿಂದ ಈ ವಿಷಯದಲ್ಲಿ ಮಾತುಕತೆ ಮುರಿದುಬಿತ್ತು.

ಹಠಮಾರಿತನ ಮಾತ್ರವಲ್ಲ ಇಲ್ಲಿ ಇನ್ನೂ ಏನೇನೋ ತಂತ್ರಗಳ ಪ್ರಯೋಗ ನಡೆದಿದೆ. ದಿನೇದಿನೇ ಹತ್ತಿರುವಾಗುತ್ತಾ, ಐಕ್ಯತೆ ಪ್ರದರ್ಶಿಸುತ್ತಿರುವ ಮುಂದುವರಿಯುತ್ತಿರುವ ದೇಶಗಳ ಒಗ್ಗಟ್ಟು ಮುರಿದು ಪರಸ್ಪರ ಎತ್ತಿ ಕಟ್ಟುವಪ್ರಯತ್ನವೂ ನಡೆದಿದೆ. ಆದರೆ ಅದು ಅಷ್ಟು ಯಶಸ್ವಿಯಾದಂತೆ ಕಾಣಲಿಲ್ಲ.

ಈ ಮಾತುಕತೆಗಳಲ್ಲಿ ಹಿಂದಿನ ಉರುಗ್ವೆ ಸುತ್ತಿನ ಮಾತುಕತೆ ಒಪ್ಪಂದ ಪರಿಣಾಮಗಳು ಏನಾಗಿವೆ ಎಂದು ಪರಿಶೀಲಿಸಬೇಕೆಂಬ ಬೇಡಿಕೆಗಳೂ ಎದ್ದು ಬಂದಿವೆ. ಈ ಸಂದರ್ಭದಲ್ಲಿ ಮುಂದುವರಿದ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆ ನೀಡಿದ ಭರವಸೆಗಳು ಜಾರಿಯಾಗದೇ ಬರೀ ಭರವಸೆಗಳಾಗಿಯೇ ಉಳಿದಿರುವ ಬಗೆಗೆ ಸಹ ಅಭಿವೃದ್ಧಿಶೀಲ ದೇಶಗಳು ತಕರಾರನ್ನು ಎತ್ತಿವೆ.



■ ಡಾ. ಮೀನಾಕ್ಷಿ ಬಾಳಿ

ಉದ್ದಕ್ಕೂ ಮುಖ್ಯಮಂತ್ರಿಯವರ ವರ್ತನೆ ನೋಡಿದರೆ ಅವರು ಯಾವುದಾದರೂ ಮಾಮೂಲಿ ಮಂದಿರವೊಂದರ ಅರ್ಚಕ ಪದವಿ ಅಲಂಕರಿಸಿದ್ದರೆ ನ್ಯಾಯ ದೊರಕಿಸಿದಂತೆ ಆಗುತ್ತಿತ್ತೇನೋ? ಆದರೆ ಅಂಥ ಧರ್ಮಭ್ರಮಿಷ್ಠ ವ್ಯಕ್ತಿಯೊರ್ವ ವಿಶಾಲ ರಾಜ್ಯವೊಂದರ ಮುಖ್ಯಮಂತ್ರಿಯಾದದ್ದು ಕರ್ನಾಟಕದ ಜನತೆಯ ದುರಂತವಲ್ಲದೆ ಮತ್ತೇನೂ ಅಲ್ಲ.

ಮೌಢ್ಯದ ಈ ಪರಿ

ಧರಣಿ ಮಂಡಲ ಮಧ್ಯದೊಳಗೆ ಮೆರೆವ ಕರ್ನಾಟಕ ದೇಶವೆಂಬ ಸೀಮೆಯಲ್ಲಿ ಯಡ್ಯೂರಪ್ಪನೆಂಬ ದಡ್ಡಗೌಡನೊಬ್ಬ ಆಳುತ್ತಿರಲು ಪುಟಗೋಸಿ ಪುರೋಹಿತರಿಗೆ ಪರ್ವಕಾಲ ಬಂದಂತಾಗಿದೆ. ಬಹು ದೀರ್ಘ ಕಾಲದ ಸಂಘರ್ಷದ ಫಲವಾಗಿ ಪ್ರಜಾಸತ್ತಾತ್ಮಕ, ಜಾತ್ಯಾತೀತ, ಧರ್ಮ ನಿರಪೇಕ್ಷ ಸಂವಿಧಾನವೊಂದನ್ನು ರಚಿಸಿಕೊಂಡಿದ್ದ ನಾವು ಈ ಹೊತ್ತು ದಿಗ್ಭ್ರಾಂತರಾಗಬೇಕಾದ ಸ್ಥಿತಿಗೆ ಬಂದು ತಲುಪಿದ್ದೇವೆ. ಏಕೆಂದರೆ ದೇವರು, ಧರ್ಮದ ಹೆಸರಿನಲ್ಲಿ ಸಾರ್ವಜನಿಕ ಹಣವನ್ನು ಪೋಲು ಮಾಡುತ್ತಿದ್ದರೂ ನಾವ್ಯಾರೂ ರೊಚ್ಚಿಗೇಳದೆ ಸುಮ್ಮನೇ ಕುಳಿತ್ತಿದ್ದೇವೆ. ಜನತೆಯ ಹಿತಾಸಕ್ತಿಯನ್ನು ಗಮನಿಸಬೇಕಾದ ಜವಾಬ್ದಾರಿಯುತ ಸರ್ಕಾರವು ಎಲ್ಲ ಭಾರವನ್ನು ದೇವರ ಮೇಲೆ ವರ್ಗಾಯಿಸುತ್ತಿರುವುದು ಇದೆಯಲ್ಲ ಇದು ಧರ್ಮಲಂಡತನದ ಪರಮಾವಧಿಯಾಗಿದೆ. ಗ್ರಹಣ ಶಾಂತಿಗಾಗಿ ಮಾಡಿದ ಯಾಗದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರೇಷ್ಮೆ ಸೀರೆಯೊಂದನ್ನು ಬೆಂಕಿಯಲ್ಲಿ ಹಾಕಿ ಸುಟ್ಟಿದ್ದು ಕಾನೂನು ರೀತಿ ಅಪರಾಧವಲ್ಲವೇ? ಸಾರ್ವಜನಿಕ ಸ್ವತ್ತಿನ ದುಂದು ಬಳಕೆ ಅಲ್ಲವೇ? ಒಂದೇ ಒಂದು ರೇಷ್ಮೆ ಸೀರೆ... ಹೋಗಲಿ ಒಂದು ನೂಲಿನ ಸೀರೆಕೊಳ್ಳಲು ಸಾಧ್ಯವಿರದಂಥ ಬಡ, ನಿರ್ಗತಿಕ ಮಹಿಳೆಯರಿಂದ ತುಂಬಿದ ಈ ನಾಡಲ್ಲಿ ಹೊಚ್ಚ ಹೊಸ ಸೀರೆಯೊಂದನ್ನು ಬೆಂಕಿಗೆ ಅಹುತಿ ನೀಡುವುದೆಂದರೆ ಇದಕ್ಕಿಂತ ಅಮಾನವೀಯ ಸ್ಥಿತಿ ಇನ್ನೊಂದು ಇರಲಾರದು.

ಸಾರ್ವಜನಿಕ ಆಗಬಾರದ್ದು

ದೇವರು, ಧರ್ಮ, ಮತಾಚರಣೆ ಮುಂತಾದವುಗಳೆಲ್ಲ ನಮ್ಮ ಖಾಸಗಿ ಹಕ್ಕು ಮತ್ತು ಸೌಲಭ್ಯಗಳು. ಯಾವುದೇ ಮತಾಚರಣೆಗಳನ್ನು ಸಾರ್ವತ್ರಿಕ ಗೊಳಿಸುವುದಾಗಲೀ, ಪ್ರದರ್ಶನಕ್ಕಿಡುವುದಾಗಲಿ ಸಲ್ಲದು. ಪ್ರಜೆಗಳ ಮೇಲೆ ತಮ್ಮ ವೈಯಕ್ತಿಕ ನಂಬಿಕೆಗಳನ್ನು ಒತ್ತಾಯದಿಂದ ಹೇರುವುದಂತೂ ಸರ್ವಥಾ ನಿಷಿದ್ಧ. ಹೀಗಿರುವಾಗಲೂ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಚಿಳ್ಳೆ-ಪಿಳ್ಳೆ ಶಾಸಕರು, ಮರಿ, ಕಿರಿ ನಗರಸಭೆ, ನಗರಪಾಲಿಕೆ ಪುಡಾರಿಗಳವರೆಗೆ ಎಲ್ಲರೂ ಸರ್ಕಾರಿ ಖರ್ಚಿನಲ್ಲಿ ಹೋಮ, ಹವನ, ಪೂಜೆ -ಪುನಸ್ಕಾರ ನಡೆಸುತ್ತಿರುವುದು ಹೇಸಿಗೆ ಹುಟ್ಟಿಸುತ್ತಿದೆ. ಉದ್ದಕ್ಕೂ ಮುಖ್ಯಮಂತ್ರಿಯವರ ವರ್ತನೆ ನೋಡಿದರೆ ಅವರು ಯಾವುದಾದರೂ ಮಾಮೂಲಿ ಮಂದಿರವೊಂದರ ಅರ್ಚಕ ಪದವಿ ಅಲಂಕರಿಸಿದ್ದರೆ ನ್ಯಾಯ ದೊರಕಿಸಿದಂತೆ ಆಗುತ್ತಿತ್ತೇನೋ? ಆದರೆ ಅಂಥ ಧರ್ಮಭ್ರಮಿಷ್ಠ ವ್ಯಕ್ತಿಯೊರ್ವ ವಿಶಾಲ ರಾಜ್ಯವೊಂದರ ಮುಖ್ಯಮಂತ್ರಿಯಾದದ್ದು ಕರ್ನಾಟಕದ ಜನತೆಯ ದುರಂತವಲ್ಲದೆ ಮತ್ತೇನೂ ಅಲ್ಲ.

ಮೌಢ್ಯದ ಪರಮಾವಧಿಯಂತಿರುವ 'ವಾಸ್ತು' ವಿನ ಹೆಸರಿನಲ್ಲಿ ವಿಧಾನಸೌಧದ ಕೋಣೆಗಳನ್ನು ಸರ್ಕಾರಿ ವೆಚ್ಚದಲ್ಲಿ ಒಡೆದಿರುವುದಿದೆಯಲ್ಲ, ಇದು ಅ ಸಂವಿಧಾನಿಕ ಮತ್ತು ಮತಿಭ್ರಷ್ಟತೆಯ ಪರಮೋಚ್ಛ ಸ್ಥಿತಿಯಾಗಿದೆ. ಇಂದು ಆಯ್ಕೆಯಾಗಿರುವ ಒಟ್ಟು ಶಾಸಕರಲ್ಲಿ ಬೆರಳೆಣಿಕೆಯಷ್ಟು ವಿಚಾರವಂತರನ್ನು ಬಿಟ್ಟರೆ ಉದವರೆಲ್ಲ; ವಿರೋಧ ಪಕ್ಷ, ಮರಿ-ಕಿರಿ ಪಕ್ಷದ ಸದಸ್ಯರೆಲ್ಲರೂ ಮೌಢ್ಯದ ಪರಾಕಾಷ್ಠೆಯಲ್ಲಿ ತೇಲುತ್ತಿದ್ದಾರೆ. ಹೀಗಿರುವುದರಿಂದಲೇ ದೇವರು, ಧರ್ಮದ ಹೆಸರಿನ ತಮ್ಮ ವೈಯಕ್ತಿಕ ತೆವಲುಗಳಿಗೆ ಸಾರ್ವಜನಿಕ ಹಣವನ್ನು ಲೂಟಿ ಮಾಡುತ್ತಿರುವಾಗಲೂ ಪ್ರತಿಭಟನೆ ಎದ್ದು ಬರುತ್ತಿಲ್ಲ. ಈ ಹಿಂದಿನ ಶಾಸನಸಭೆಗಳಲ್ಲಾದರೆ ಇಂಥ ಅವೈಜ್ಞಾನಿಕ, ಧರ್ಮಾಂಧ ವರ್ತನೆಗಳು ಕಂಡುಬಂದರೆ ದೊಡ್ಡ ಮಟ್ಟದಲ್ಲಿ ವಿರೋಧ, ಖಂಡನೆಗಳು ಅನುರಣಿಸುತ್ತಿದ್ದವು. ಪ್ರಸಕ್ತ ವಿಧಾನಸಭೆಯಲ್ಲಿ ಅಲ್ಲೊಬ್ಬ, ಇಲ್ಲೊಬ್ಬ ವಿಚಾರವಂತರು ಧರ್ಮಭಂಡರ ಈ ಹುಚ್ಚಾಟಗಳನ್ನು ಕುರಿತು ಪ್ರಶ್ನೆ ಎತ್ತಿದಾಗಲೂ ಅದು ಗಂಭೀರ ಚರ್ಚೆಗೆ ಗ್ರಾಸವಾಗುತ್ತಿಲ್ಲ. ಇಂಥ ಪ್ರಶ್ನೆಗಳನ್ನು ಪಾಸಿಂಗ್ ರಿಮಾರ್ಕ್‌ಗಳಾಗಿ ತೇಲಿಸಿಕೊಂಡು ಹೋಗಲಾಗುತ್ತಿದೆ.

> ವಿಚಾರ ಮಾಡುವ ತಲೆಗಳಿಗಿಂತ ಭಜನೆ ಮಾಡುವ ಬಾಯಿಗಳನ್ನು ಅಭಿವೃದ್ಧಿಪಡಿಸಲೆಂದೆ ಹತ್ತಾರು ಎನ್.ಜಿ.ಓ.ಗಳು ಹುಟ್ಟಿಕೊಂಡವು.

ಜಾತಿ ಗುಂಪುಗಾರಿಕೆಯ ದಾರಿ


ಸ್ವಾತಂತ್ರ್ಯೋತ್ತರ ಭಾರತದ ಕರ್ನಾಟಕದಲ್ಲಿ ಈ ಹಿಂದೆ ಎಂದೂ ಇಂಥ ಅವೈಜ್ಞಾನಿಕ, ಅವೈಚಾರಿಕ ಶಾಸನಸಭೆಯನ್ನು ಕಂಡದ್ದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಪ್ರಮಾಣದ ಭ್ರಷ್ಟಾಚಾರಿಗಳು, ಕ್ರಿಮಿನಲ್‌ಗಳು, ಅಡ್ಡಕಸುಬಿಗಳು, ನೈತಿಕ ಅಧಃಪತನಿಗಳು ಪ್ರಜಾಪ್ರತಿನಿಧಿ ಸಭೆಗಳಲ್ಲಿ ನುಸುಳಿರಲಿಲ್ಲ. ಏಕೆಂದರೆ ವಿಶಾಲ ಭೂ ಪ್ರದೇಶದ ಮತ್ತು ಅಪಾರ ಜನಸಂಖ್ಯೆ ಹೊಂದಿರುವ ಭಾರತದ ಪ್ರಜಾಪ್ರಭುತ್ವಕ್ಕೊಂದು ಘನತೆ-ಗೌರವ, ಸ್ವಾಯತ್ತತೆ ಎಂಬುವದಿತ್ತು. ಆದರೆ ಎಂದಿನಿಂದ ಭಾರತದ ರಾಜಕೀಯ ರಂಗದಲ್ಲಿ ಸಂಘಪರಿವಾರಿ ಪಕ್ಷವಾದ ಬಿಜೆಪಿಯು ಕಾಣಿಸಿಕೊಳ್ಳಲು ಪ್ರಾರಂಭಿಸಿತೋ ಅಂದಿನಿಂದ ಭಾರತದ ಬಹುಮುಖಿ ಸಂಸ್ಕೃತಿಗೆ ಕುತ್ತು ಬಂದೀತು. ಜಾತಿ ಗುಂಪುಗಾರಿಕೆಯ ಎಲ್ಲ ಕುತಂತ್ರದಾರಿಗಳು ತೆರೆದುಕೊಂಡವು. 1990 ರ ದಶಕದಲ್ಲಿ ಜಾಗತಿಕ ಮಟ್ಟದ ಹೊಸ ಆರ್ಥಿಕ ನೀತಿಗಳನ್ನು ತನಗೆ ಪುರಕವಾಗಿ ಬಳಸಿಕೊಂಡ ಕೋಮುವಾದಿಗಳು ಭಾರತದಲ್ಲಿ ಕಾಂಗ್ರೆಸ್ ಎಂಬ ರಾಷ್ಟ್ರೀಯ ಪಕ್ಷವನ್ನು ದುರ್ಬಲ ಮಾಡಿದವು. ಕೊಳ್ಳೆ ಹೊಡೆದ ಮನೆಯ ಹಿತ್ತಿಲು ಬಾಗಿಲನ್ನು ಮುಚ್ಚಿಕೊಳ್ಳುತ್ತಿರುವ ಮೂರ್ಖ ಯಜಮಾನನಂತೆ ವರ್ತಿಸುತ್ತಿರುವ ಕಾಂಗ್ರೆಸ್ಸಿಗೆ ತನ್ನ ವಿನಾಶದ ಬೀಜ ತನ್ನೊಡಲಿನಲ್ಲಿಯೇ ಇದೆ ಎಂಬುದು ಗೊತ್ತಾಗಲೇ ಇಲ್ಲ. ಪಿ.ವಿ.ನರಸಿಂಹರಾವ್ ಎಂಬ ಕಾಂಗ್ರೆಸ್ಸಿನ ಪ್ರಧಾನ ಮಂತ್ರಿಯ ಹಿಂಬಾಗಿಲಿನ ಉಸ್ತುವಾರಿಯಲ್ಲಿಯೇ ಬಾಬರಿ ಮಸೀದಿಯ ಪತನವಾದರೂ ಕಾಂಗ್ರೆಸ್ಸಿಗರು ಆತ್ಮ ವಿಮರ್ಶೆ ಮಾಡಿಕೊಳ್ಳಲೇ ಇಲ್ಲ. ಜಾಗತೀಕರಣದ ಮೂಲಕ ದೇಶದಲ್ಲಿ ಆರ್ಥಿಕ ಉತ್ಕ್ರಾಂತಿಯನ್ನೇ ಉಂಟು ಮಾಡುತ್ತೇನೆಂದು ಹೊರಟ ಇವರು ಅಪಾರ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಕಳೆದರು. ನೂರಾರು ಕಾರ್ಖಾನೆಗಳನ್ನು ಮುಚ್ಚಿದರು. ಕೃಷಿ ಕ್ಷೇತ್ರದ, ಶೈಕ್ಷಣಿಕ ಕ್ಷೇತ್ರದ ಮೇಲೆ ಮಾಡುವ ವೆಚ್ಚವನ್ನು ಕಡಿತಗೊಳಿಸಿದರು. ಅಕ್ಷರಶಃ, ಅಮೇರಿಕಾ ಮತ್ತು ಜಿ ಎಂಟು ದೇಶಗಳ ಕೈಗೊಂಬೆಯಂತಾದ ಸರ್ಕಾರ ಸಂಪೂರ್ಣ ಖಾಸಗೀಕರಣಕ್ಕೆ ಚಾಲನೆ ನೀಡಿತು. ಪರಿಣಾಮತಃ ಒಂದಷ್ಟು ಐಟಿಐ, ಬಿಟಿ, ಸಾಫ್ಟ್‌ವೇರ್ ಕಂಪನಿಗಳು ನಾಯಿಕೊಡೆಗಳಂತೆ ಹಬ್ಬಿಕೊಂಡವು. ಸ್ಕಿಲ್, ಕ್ವಾಲಿಟಿ ಎಂಬ ತೋರಿಕೆಯ ಪರಿಭಾಷೆಗಳಡಿಯಲ್ಲಿ ಕಾರ್ಪೋರೇಟ್ ವರ್ಗ ತನ್ನ ಬಂಡವಾಳದ ಅಭಿವೃದ್ಧಿಯನ್ನು ದೇಶದ ಅಭಿವೃದ್ಧಿ ಎಂದು ಬಿಂಬಿಸಿತು. ಹೊಸ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನಗಳೇ ಆತ್ಯಂತಿಕ ಜ್ಞಾನ ಶಾಖೆಗಳು ಇವುಗಳನ್ನು ಬಿಟ್ಟರೇ ದೇಶದ ಪ್ರಗತಿ ಸಾಧ್ಯವಿಲ್ಲ ಎಂಬ ಭ್ರಮೆ ಹುಟ್ಟಿಸಿ ಮಧ್ಯಮ, ಮೇಲ್ಮಧ್ಯಮ ವರ್ಗದ ಜನತೆಗೆ ಅಪಾರ ಅವಕಾಶ ತೆರೆದಂತೆ ಬಿಂಬಿಸಿದವು. ಇನ್ನೊಂದೆಡೆ ಸಾಮಾನ್ಯ ವಿಜ್ಞಾನ, ಮಾನವಿಕ ವಿಜ್ಞಾನ, ಭಾಷೆ, ಕಲೆ ಮುಂತಾದ ನೆಟಿವಿಟಿ ಬಿಂಬಿಸುವ ಜ್ಞಾನಶಾಖೆಗಳನ್ನು ಮೂಲೆ ಗುಂಪು ಮಾಡುವಲ್ಲಿಯೇ ಸಾಮಾನ್ಯ, ಕೆಳವರ್ಗದ ಜನತೆಯ ಸಾಧ್ಯತೆಯನ್ನು ಮೊಟಕುಗೊಳಿಸಿದವು. ದೇಶಿಯ ಉತ್ಪಾದನಾ ಮಾಧ್ಯಮ ಮತ್ತು ದೇಶಿಯ ಮಾರುಕಟ್ಟೆ ಸಂಪೂರ್ಣ ಕುಸಿಯಿತು. ಪರಿಣಾಮವಾಗಿ ಅಪಾರ ಜನತೆ ಬದುಕುವ ಪರ್ಯಾಯ ಮಾರ್ಗಗಳನ್ನು ಕಾಣದೇ ಅಕ್ಷರಶಃ ಹತಾಶೆಯ ಸ್ಥಿತಿಗೆ ತಲುಪಿತು. ಆರ್ಥಿಕ ಅಭದ್ರತೆ ಅವರನ್ನು ಅಸಹಾಯಕರನ್ನಾಗಿ, ಹೇಡಿಗಳನ್ನಾಗಿ ಪರಿವರ್ತಿಸಿತು. ಇಂಥ ಸ್ಥಿತಿಯಲ್ಲಿಯೇ ದೇವರು, ಧರ್ಮದ ಮೊರೆ ಹೋಗುವ ಅನಿವಾರ್ಯತೆ ಎದುರಾಗುತ್ತದೆ. ಅಂತರಂಗದಲ್ಲಿ ಶುದ್ಧ ಧರ್ಮಲಂಡರಾದ ಸಂಘ ಪರಿವಾರಿಗಳು ಇದೇ ಅವಕಾಶಕ್ಕಾಗಿ ಕಾಯುತ್ತಿದ್ದರೇನೋ ಎಂಬಂತೆ ಜನರ ದೌರ್ಬಲ್ಯವನ್ನು ಬಂಡವಾಳ ಮಾಡಿಕೊಂಡರು. ಆದ್ದರಿಂದಲೇ ಗುಡಿಮಠ, ಮಂದಿಗಳನ್ನು ಗುತ್ತಿಗೆ ಹಿಡಿದವರಂತೆ ಬಿಜೆಪಿ ಸರ್ಕಾರ ಅನುತ್ಪಾದಕ ಕ್ಷೇತ್ರಗಳಿಗೆ ಹಣವನ್ನು ಮಂಜೂರು ಮಾಡುತ್ತಲೇ ಬಂದಿತು. ಮುಸ್ಲಿಂ ಮತ್ತು ಕ್ರೈಸ್ತೇತರ ಇತರೆಲ್ಲ ಧರ್ಮ, ಜಾತಿ, ಉಪಜಾತಿಗಳ ಧಾರ್ಮಿಕ ಕೇಂದ್ರಗಳಿಗೆ ಬೇಡಿದಷ್ಟು ಹಣ ನೀಡುವುದನ್ನು ತನ್ನ ಆದ್ಯತೆಯಾಗಿಸಿಕೊಂಡಿತು. ವಿಚಾರ ಮಾಡುವ ತಲೆಗಳಿಗಿಂತ ಭಜನೆ ಮಾಡುವ ಬಾಯಿಗಳನ್ನು ಅಭಿವೃದ್ಧಿಪಡಿಸಲೆಂದೆ ಹತ್ತಾರು ಎನ್.ಜಿ.ಓ.ಗಳು ಹುಟ್ಟಿಕೊಂಡವು. ಗುರುವಂದನೆ, ಸರಸ್ವತಿ ಪೂಜೆ, ಮಾತೃಮಿಲನ, ಸಂಸ್ಕೃತ ಅಭ್ಯಾಸ, ಋಷಿ ಸಂಸ್ಕೃತಿ, ಸಂಸ್ಕೃತ ವಿಶ್ವವಿದ್ಯಾಲಯ, ಜ್ಯೋತಿಷ್ಯ ಶಾಸ್ತ್ರ ಅಧ್ಯಯನ ಹೀಗೆ ಅಸಂಖ್ಯ ಆಕರ್ಷಕ ಕಾರ್ಯಕ್ರಮಗಳು ಜನರನ್ನು ಧಾರ್ಮಿಕವಾಗಿ ಕೋಮಾ ಸ್ಥಿತಿಗೆ ಒಯ್ದವು. ಮಳೆ ಬರದಿದ್ದರೆ ಜನತೆ ಮಾಡುತ್ತಿರುವ ಕತ್ತೆ ಮದುವೆ, ಕಪ್ಪೆ ಮದುವೆ, ಶಾಸಕ ಮಂತ್ರಿ ಮಹೋದಯರು ತಮ್ಮ ಅಧಿಕಾರ ಪ್ರಾಪ್ತಿಗಾಗಿ ಮಾಡುತ್ತಿರುವ ಯಾಗ, ಯಜ್ಞ, ಇವೆಲ್ಲ ವೈಚಾರಿಕವಾಗಿ ಕರ್ನಾಟಕದ ಜನತೆ ತಲುಪುತ್ತಿರುವ ದಿವಾಳಿಖೋರತನವನ್ನು ಸಂಕೇತಿಸುತ್ತಿವೆ.

ಹಾಗಾದರೆ ಇಂಥ ವಿಷಮ ಪರಿಸ್ಥಿತಿಯಲ್ಲಿ ನಾಡಿನ ಬುದ್ಧಿಜೀವಿಗಳು ಏನಾದರೂ ಮಾಡಬೇಕಲ್ಲವೇ? ಹೌದು, ನಮ್ಮ ನಮ್ಮ ನೆಲೆಯಲ್ಲಿ ಪ್ರಜ್ಞಾವಂತ ಎನಿಸಿಕೊಂಡಿರುವವರು ಈ ಕೋಮುವಾದಿ ಸಂಚಾಲಿತ ಮೌಢ್ಯದ ವಿರುದ್ಧ ಸೆಟೆದು ನಿಲ್ಲಲೇಬೇಕಿದೆ. ಅವರ ಆಸ್ತಿಕ ನೆಲೆ, ದುರ್ಮಾಗಗಳ ಕುತಂತ್ರಗಳನ್ನು ಬಯಲಿಗೆಳೆಯಬೇಕಿದೆ. ಜನತೆಯನ್ನು ಹಿಂದೆಂದಿಗಿಂತಲೂ ಹೆಚ್ಚು ಪ್ರಖರವಾಗಿ ವಿಚಾರವಾದದತ್ತ ಎಳೆದು ತರಬೇಕಿದೆ. ಕುವೆಂಪು, ಹೆಚ್.ನರಸಿಂಹಯ್ಯರಂತಹ ವಿಚಾರವಾದಿಗಳ ಅಭಾವ ಇಂದು ಕರ್ನಾಟಕವನ್ನು ಅಪಾರವಾಗಿ ಕಾಡುತ್ತಿದೆ ಅನಿಸುತ್ತಿಲ್ಲವೇ?

○

ಜನಶಕ್ತಿ
ಕನ್ನಡ ವಾರಪತ್ರಿಕೆ

ಕುಟುಂಬದ ಕಣ್ಣಲ್ಲಿ 'ಸೂರಿ' ನೆನಪುಗಳು



ಆಗಸ್ಟ್ 24, ದುಡಿಯುವ ವರ್ಗದ ಸಿಂಹಧ್ವನಿ ಎಂದೇ ಖ್ಯಾತರಾಗಿದ್ದ ಕಾಂ.ಸೂರಿಯವರ ಜನ್ಮದಿನ. ಮೊನ್ನೆ ಅವರ 84ನೇ ಹುಟ್ಟುಹಬ್ಬವನ್ನು ರಕ್ತದಾನ ಶಿಬಿರ ದುಡಿಯುವ ವರ್ಗದ ಚಳುವಳಿಗೆ ಸಮರ್ಪಿತವಾದ ಭವನದ ಉದ್ಘಾಟನೆ ಮುಂತಾದವುಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗಿದೆ. 2002 ಜುಲೈ 1 ರಂದು ಕಾಂ. ಸೂರಿ ಇಲ್ಲವಾದ ಸಂದರ್ಭದಲ್ಲಿ ಸೂರಿಯವರ ಕುಟುಂಬವರ್ಗದವರ ನೆನಪಿನ ಮೂಲಕ ಸೂರಿಯವರ ಬದುಕು, ವ್ಯಕ್ತಿತ್ವ, ಹೋರಾಟವನ್ನು ಕಟ್ಟಿಕೊಡುವ ಯತ್ನವಾಗಿ ಈ ಲೇಖನ ಸಿದ್ಧವಾಗಿತ್ತು. 'ಕೆಂಪು ಸೂರಿ'ಯ ವಿಶೇಷ ಸಂಚಿಕೆಯಿಂದ ನಿಮಗಾಗಿ ಈ ಲೇಖನ.

ಎನ್.ಪ್ರಭಾ

"ನಾನು ಹೋರಾಟಗಾರ. ಊರೂರು ಸುತ್ತಾಡ್ಬೇಕು. ಪೋಲೀಸ್ನೋರು ಕರ್ಕೊಂಡೋದ್ರೆ ಜೈಲಿಗೂ ಹೋಗ್ಬೇಕು. ದಿನಾ ಮನೆಗೆ ಬರೋಕೆ ಆಗಲ್ಲ. ನನ್ನದು ಕಷ್ಟದ ಜೀವನ, ಯೋಚನೆ ಮಾಡು..... ನನ್ನ ಗಂಡ ಸಂಬಳ ತರ್ತಾನೆ, ಒಳ್ಳೊಳ್ಳೆ ಸೀರೆ-ಬಟ್ಟೆ ಕೊಡಿಸ್ತಾನೆ, ಸಿನಿಮಾ-ಟೂರು ಅಂತ ಸುತ್ತಾಡಿಸ್ತಾನೆ ಅಂದ್ಕೊಂಡು ನನ್ನನ್ನು ಮದುವೆ ಆಗೋಕೆ ಒಪ್ಪಿದ್ರೆ ಈಗ್ಲೆ ತಿಳಿಸ್ಬಿಡು. ಮದುವೆ ಆದ್ಮೇಲೆ ಜಾಗಟೆ ಬಾರ್ಸಿದ್ರೆ ನಾನ್ ಕೇಳೋನಲ್ಲ. ಮೊದ್ಲೆ ಹೇಳ್ತಿದ್ದೀನಿ".

ಶರತ್ತುಗಳೊಂದಿಗೆ ವಿವಾಹ

ಕುಟುಂಬದವರಿಂದ ಮದುವೆಗೆ ಒತ್ತಾಯ ವಿಪರೀತವಾದಾಗ ಇಂತಹ ಷರತ್ತುಗಳನ್ನು ಮದುಮಗಳಿಗೆ ವಿಧಿಸಿ ವಿವಾಹಕ್ಕೆ ಒಪ್ಪಿಗೆ ಕೊಟ್ಟವರು ನಮ್ಮೆಲ್ಲರ ನೆಚ್ಚಿನ ಹೋರಾಟಗಾರ ಕಾಮ್ರೇಡ್ ಸೂರಿ.

ಶರತ್ತುಗಳನ್ನು ಅಂಗೀಕರಿಸಿಯೇ ಸೂರಿಯವರ ಬದುಕನ್ನು ಪ್ರವೇಶಿಸಿದವರು ಶ್ರೀಮತಿ ಯಶೋಧಾ.

"ಹುಡುಗನಿಗೆ ಛಾತಿ ಇದೆ. ಯೋಗ್ಯತೆ ಇರುವಂಥ ವರ. ಇಂದಲ್ಲ ನಾಳೆ ಸರಿ ಹೋಗ್ತಾನೆ. ದುಡಿಮೆ ಮಾಡುವ ಅರ್ಹತೆಯೂ ಇದೆ. ಮದುವೆಗೆ ಮನಸ್ಸು ಮಾಡಮ್ಮಾ" ಎಂದು ಅಕ್ಕ-ಭಾವನವರೆಲ್ಲ ಮನ ಒಲಿಸಿದ್ದನ್ನು ನೆನೆಯುವ ಯಶೋಧಾರವರು, "ಎಂದೂ ನಡೆದದ್ದು ಸೂರಿಯವರು ಹೇಳಿದ ರೀತಿಯೇ... ಅಕ್ಕ-ಭಾವನವರ ನಿರೀಕ್ಷೆಯೇ ಹುಸಿಯಾದದ್ದು" ಎನ್ನುತ್ತಾರೆ.

ಅಂತಿಮ ಕ್ಷಣದವರೆಗೆ ದುಡಿಯುವವರ ಪರವಾಗಿಯೇ ಅವರ ಹೋರಾಟವೆಂದು ಹೆಮ್ಮೆಯಿಂದ ಬಾಳ ಸಂಗಾತಿಯನ್ನು ನೆನಪಿಸಿಕೊಂಡಾಗ ಯಶೋಧಾರವರ ಕಣ್ಣಾಲಿಗಳು ನೀರಿನೊಂದಿಗೆ ಮುಳುಗಿದ್ದವು.

ಎಲ್ಲೆಂದರಲ್ಲಿ ಬಂಧನ

ಹೌದೌದು, ಅಪ್ಪನನ್ನು ಬಂಧಿಸಿ ಆ ನಂತರ ಜೀಪಿನಲ್ಲಿ ಬರುತ್ತಿದ್ದ ಪೋಲೀಸರು ಅಪ್ಪನ ಲುಂಗಿ-ಅಂಗಿ ಬಟ್ಟೆ ಬರೆಗಳನ್ನು ಕೇಳುತ್ತಿದ್ದರು. ಅಪ್ಪ ಹೇಳಿದ ರೀತಿಯಲ್ಲೇ ಪೋಲೀಸರು ಎಲ್ಲೆಂದರಲ್ಲಿ ಬಂಧಿಸುತ್ತಿದ್ದರು ಎಂದು ಮಾತು ಜೋಡಿಸಿದವರು ಸೂರಿಯವರ ಕಿರಿಯ ಮಗಳು ರೇಖಾ.

ನೆನಪಿನಂಗಳಕ್ಕೆ ಲಗ್ಗೆ ಇಟ್ಟ ರೇಖಾ, ನೆನೆದದ್ದು ದಾವಣಗೆರೆಯ ಬಂಧೀಖಾನೆಯನ್ನು.

ರೇಖಾ ಇನ್ನೂ ಪುಟ್ಟ ಹುಡುಗಿ. ಆಟವಾಡಿಕೊಂಡು ಅಂಗಳದಲ್ಲಿರುವಾಗ ಅಮ್ಮ ಶಾಲೆಯಿಂದ ಹರಿಬರಿಯಲ್ಲಿ ಬಂದವರೆ, ರೇಖಾ ಕುರ್ಗಿ ದಾವಣಗೆರೆಗೆ ಹೋಗಬೇಕು ರೆಡಿಯಾಗು ಎಂದರಂತೆ. ಏಕೆ? ಯಾರನ್ನು ನೋಡಲು? ಒಂದೂ ತಿಳಿಯದ ರೇಖಾ ಅಮ್ಮನೊಂದಿಗೆ ಪ್ರಯಾಣ ಬೆಳಸಿ ಎಲ್ಲವನ್ನೂ ಕುತೂಹಲದಿಂದ ಎದುರ್ಗಾಣುತ್ತಿದ್ದಾಗ ಒಂದು ಸಂದರ್ಭಕ್ಕೆ ಚಿಕ್ಕದಾದ ಕಬ್ಬಿಣದ ಸರಳುಗಳ ಕಿಟಕಿಯ ನಡುವೆ ಅಪ್ಪ ಇಣುಕಿದ್ದರಂತೆ. 'ಬಂಧಿತ' ಜಗತ್ತಿನ ಪರಿವೇ ಇಲ್ಲದ ಪುಟ್ಟ ಹುಡುಗಿ ಅಮ್ಮನನ್ನು ಹಿಂಬಾಲಿಸಿದ್ದಳಂತೆ.

ದಾವಣಗೆರೆಯಿಂದ ಬಂದ ಕೂಡಲೆ ಅಕ್ಕ ಮೀರಾಗೆ ಸುದ್ದಿ ರವಾನಿಸಿದ್ದಳಂತೆ. ಮೀರಾ ಇದೇ ಗುಂಗಿನಲ್ಲಿರುವಾಗ ಸೂರಿಯವರ ಅಕ್ಕನ ಮಗ ನವ ವಿವಾಹಿತ ನಾಗರಾಜು ತನ್ನ ಪತ್ನಿಯನ್ನು ಮಾವನಿಗೆ ಪರಿಚಯಿಸಲು ದಾವಣಗೆರೆಗೆ ಹೊರಟರಂತೆ. ಅಪ್ಪನನ್ನು ನೋಡಲು ಮೀರಾ ಸಹ ಜೊತೆಗೆ ಹೊರಟಿದ್ದಳಂತೆ.

ಸರಿ ದಾವಣಗೆರೆಗೆ ಬಂದಾಯಿತು. ಜೈಲಿನ ಬಳಿಯೂ ಬಂದಾಯಿತು ಆದರೆ ಅಪ್ಪ ಕಾಣಲಿಲ್ಲ. ಹೀಗೆ ಕಾಯುತ್ತಾ ನಿಂತಿದ್ದಾಗ ಸರಳುಗಳ ನಡುವಿನಿಂದ ಅಪ್ಪ ಬಂದು ಸ್ವಲ್ಪ ದೊಡ್ಡವಳಾಗಿದ್ದ ಮೀರಾಳನ್ನು ಮಾತಿಗೆ ಎಳೆಯುತ್ತಿದ್ದಂತೆ, ಮೀರಾದ್ದು ಒಂದೇ ಬೇಡಿಕೆ "ಅಪ್ಪ ಇಲ್ಲಿ ಯಾಕಿದ್ದೀಯಾ ಇಲ್ಲಿ ಬೇಡಾ, ಮನೆಗೆ ಬಾ...ಮನೆಗೆ ಬಾ ಇಲ್ಲಾಂದ್ರೆ ನಾನೂ ಹೋಗಲ್ಲ".

ಹಠ ಮಾಡುತ್ತಾ, ಅಳುತ್ತಾ ದುಃಖಿಸುತ್ತಿದ್ದ ಮಗಳನ್ನು ಹೇಗೊ ಸಮಾಧಾನಪಡಿಸಿ ನಾಳೆ ಬರುವುದಾಗಿ ತಿಳಿಸಿ ಹಿಂತಿರುಗಿಸಿದ್ದರು. ಮೀರಾಗೂ ಎಲ್ಲ ಅಸ್ಪಷ್ಟ. ಪೋಲೀಸು, ಜೈಲು, ಸರ್ಕಾರ, ಅಧಿಕಾರ ಏನೊಂದು ತಿಳಿಯದು ಆದರೆ ತಿಳಿದದ್ದು ಒಂದೇ ಅಪ್ಪ ಬೇಕು - ಮನೆಗೆ ಬರಬೇಕು.

ಆದರೆ ಹೆಂಡತಿ, ಮಕ್ಕಳು, ಮನೆ, ಕುಟುಂಬ, ಬಾಂಧವ್ಯಗಳನ್ನು ಮೀರಿದ್ದ ಅಪ್ಪನ ಬದ್ಧತೆ ದೇಶಕ್ಕಾಗಿ, ದೇಶದ ದುಡಿಯುವ ಜನತೆಗಾಗಿ. ಹೀಗಿದ್ದಾಗ ಮನೆಗೆ ಸಾಗುವುದು ಹೇಗೆ?

ಅಪ್ಪನ ಬಳಿ ಬಾರದ ಮಗು

ಯಶೋದಾರವರ ಅಣ್ಣ ರೈಲ್ವೆ ಉದ್ಯೋಗಿ. ಬಾಂಬೆಯಲ್ಲಿ ವಾಸವಿದ್ದರು. ತಾಯಿ ಸಹ ಅಲ್ಲಿಯೇ ನೆಲಸಿದ್ದರು. ಬಾಣಂತನಕ್ಕೆಂದು ಬಾಂಬೆಗೆ ಹೋಗಿದ್ದ ಯಶೋದಾರವರು ಹತ್ತು ತಿಂಗಳ ಚೊಚ್ಚಲ ಮಗು ಸಮೇತ ಬೆಂಗಳೂರಿನ ಅಕ್ಕನ ಮನೆಗೆ ಬಂದಿಳಿದರು. ಮಗುವಿನ ಆರೈಕೆಯನ್ನು ಅಕ್ಕನಿಗೊಪ್ಪಿಸಿ ಯಥಾ ಪ್ರಕಾರ ಶಾಲೆಗೆ ತೆರಳಿದ್ದರು. ಅದೇ ದಿನ ಮಧ್ಯಾಹ್ನ ಸೂರಿಯವರು ಸಭೆಯೊಂದರ ಪ್ರಯುಕ್ತ ಕಲ್ಕತ್ತಾಗೆ ಹೊರಟಿದ್ದರು. ಈ ನಡುವೆ ಮಗುವನ್ನು ನೋಡುವ ಆಸೆಯಿಂದ ಅಕ್ಕನ ಮಗ ನಾಗರಾಜುರವರ ಜೊತೆ ಮಗುವಿದ್ದ ಮನೆಗೆ ಹೋದರು.

ಎತ್ತಿಕೊಳ್ಳಲು ಮುಂದಾದ ಅಪ್ಪನನ್ನ ನಿರಾಕರಿಸಿದ ಮಗು ಅಳುತ್ತಾ ನಾಗರಾಜುರವರ ಬಳಿ ಸಲೀಸಾಗಿ ಸೇರಿತು. ಅಪ್ಪನ ಬಳಿ ಹೋಗಲು ಪ್ರತಿಭಟಿಸಿದ ಮಗು ಪುಟ್ಟದಾದ ಪೆಟ್ಟೊಂದನ್ನು ಅಪ್ಪನಿಂದ ತಿಂದಿತು.

"ಅವಳು ಹುಟ್ಟಿದಾಗಿನಿಂದ ನಿನ್ನ ಮುಖ ತೋರ್ಸಿಲ್ಲ ಅಪ್ಪಾ ಅಂತಾ ಹೇಗಪ್ಪಾ ನಿನ್ನ ಬಳಿ ಬಂದಾಳು" ಎಂದು ನಾಗರಾಜುರವರು ಸೂರಿಯವರನ್ನು ರೇಗಿಸುತ್ತಾ ಮಗುವನ್ನು ಓಲೈಸಿದ್ದರಂತೆ.

ಜೈಲಿನ ಮುಂದೆ ನಿಂತು, ಅಪ್ಪ ನೀನು ಬರದೆ ನಾನೂ ಹೋಗೋಲ್ಲವೆಂದು ಹಠಾ ಹಿಡಿದದ್ದು ಇದೇ ಮೀರಾ.

ದಾವಣಗೆರೆಯಲ್ಲಿ 3 ತಿಂಗಳು, ಚಿತ್ರದುರ್ಗ ಜೈಲಿನಲ್ಲಿ 6 ತಿಂಗಳ ಸೆರೆವಾಸ ಮುಗಿಸಿಯೇ ಅಪ್ಪ ಹಿಂದಿರುಗಿದ್ದು ಎಂದು ನೆನೆದಾಗ ಮೀರಾಗೆ ತಂದೆಯ ಬಗ್ಗೆ ಅವ್ಯಕ್ತ ಅಭಿಮಾನ.



ಪತ್ನಿ ಯಶೋಧಾ, ಮಕ್ಕಳಾದ ಮೀರಾ ಮತ್ತು ರೇಖಾರವರೊಂದಿಗೆ ಸೂರಿ

ಪ್ರಾಣ ಭಯ ಒಡ್ಡಿದ ಮೈಕೋ ಹೋರಾಟ

ಮಾತಿನ ನಡುವೆ ಮಕ್ಕಳ ಬಾಲ್ಯದಲ್ಲಿ ನಡೆದ ಮೈಕೋ ಹೋರಾಟವನ್ನು ಯಶೋದಾರವರು ಪ್ರಸ್ತಾಪಿಸುತ್ತಿದ್ದಂತೆಯೇ ಪಕ್ಕದಲ್ಲೇ ಇದ್ದ ಮೀರಾ ಮತ್ತು ರೇಖಾ ಇಬ್ಬರೂ ಭಾವುಕರಾದರು. ಏಕೆಂದರೆ ಗೂಂಡಾಗಳ ದಾಳಿ ದಬ್ಬಾಳಿಕೆ ಅಟ್ಟಹಾಸ ಸೂರಿಯವರ ಮನೆಯನ್ನೂ ಪ್ರವೇಶಿಸಿತ್ತು.

ಎದುರು ಸಿಕ್ಕ ಮಕ್ಕಳನ್ನು ಹೆದರಿಸುವುದು, ಕೊಲೆ ಬೆದರಿಕೆ ಹಾಕುವುದು, ದೊಣ್ಣೆ ತಿರುಗಿಸುವುದು, ಅಪ್ಪನನ್ನ ಮುಗಿಸುವುದಾಗಿ ಮನೆಯ ಬಳಿಯೇ ಬಂದು ಕಾಯುವುದು. ಅದಂತೂ ಮರೆಯಲಾರದ ಹೋರಾಟ, ಪ್ರತಿ ಕ್ಷಣವೂ, ದಿನವೂ ಆತಂಕವೋ ಆತಂಕ. ಯಾವಾಗ ಏನೋ? ಎಲ್ಲಿ ಏನೋ ಎನ್ನುವ ಭಯ. ಮಕ್ಕಳೇ ಇರುತ್ತಿದ್ದ ಮನೆಯಲ್ಲಿ ಏನಾಯಿತೋ ಎನ್ನುವ ಚಿಂತೆ. ಆದದ್ದಾಗಲಿ ಬಂದದ್ದನ್ನು ಧೈರ್ಯದಿಂದ ಎದುರಿಸೋಣ ಎನ್ನುವ ಛಲವೂ ಜೊತೆಗಿದ್ದ ನಮ್ಮನ್ನ ಮೈಕೋ ಕಾರ್ಮಿಕರು ಕಾವಲು ಕಾಯ್ದು ರಕ್ಷಣೆ ಕೊಟ್ಟಿದ್ದನ್ನು ಸಹ ಮರೆಯುವಂತಿಲ್ಲವೆಂದು ಒಮ್ಮೆಲೆ ಎಲ್ಲರೂ ನೆನೆದರು.

ಓಟ ಕಿತ್ತ ಅಧಿಕಾರಿ

ಮೈಕೋ ಹೋರಾಟ ಪರಾಕಾಷ್ಠೆ ಮುಟ್ಟಿದ್ದ ದಿನಗಳು. ಸೂರಿಯವರ ಬೇಟೆಗಾಗಿ ಎಲ್ಲೆಂದರಲ್ಲಿ ಕಾಯುತ್ತಿದ್ದ ಆಡಳಿತ ವರ್ಗದ ಬೇಟೆ ನಾಯಿಗಳು ಸರ್ಕಾರಿ ಪ್ರಾಯೋಜಿತ ಗೂಂಡಾಗಿರಿ, ಪೊಲೀಸರ ಅಸಹನೀಯವಾದ ಕಿರುಕುಳ, ಇವುಗಳ ನಡುವೆ ಸೂರಿಯವರು ಮುಕ್ತವಾಗಿ ವ್ಯವಹರಿಸುವ ಅವಕಾಶವೇ ಸಂಪೂರ್ಣ ಇಲ್ಲವಾಗಿತ್ತು.

ಹೀಗಿದ್ದಾಗ ಒಂದು ದಿನ ಸೂರಿಯವರು ಮಲ್ಲೇಶ್ವರಂನಲ್ಲಿ ನೆಲೆಸಿದ್ದ ಪರಿಚಯಸ್ಥ ವಕೀಲರೊಬ್ಬರನ್ನು ಭೇಟಿ ಮಾಡಲು ಹೋದರು. ಜೊತೆಗೆ ಸೂರಿಯವರ ರಕ್ಷಣೆಗೆ ದೊಣ್ಣೆ ಹಿಡಿದೇ ಹೋಗಿದ್ದ ಕಾರ್ಮಿಕರ ಚಿಕ್ಕದೊಂದು ದಂಡು.

ಇದೇ ವಕೀಲರ, ಪಕ್ಕದ ಮನೆಯಲ್ಲಿಯೇ ನೆಲೆಸಿದ್ದ ಅಧಿಕಾರಿಯೊಬ್ಬರು ಇವರನ್ನೆಲ್ಲಾ ಕಂಡು ಕಿಟಕಿ ಬಾಗಿಲುಗಳ ವ್ಯತ್ಯಾಸ ನೋಡದೆ ಓಟ ಕಿತ್ತರು. ಇದನ್ನು ಗಮನಿಸಿದ ಸೂರಿಯವರು ವಕೀಲರ ಮಗಳನ್ನು ಕರೆದು ನಾವು ಯಾರಿಗೂ ತೊಂದರೆ ಕೊಡಲು ಬಂದವರಲ್ಲ ವಕೀಲರನ್ನ ಕಾಣಲು ಮಾತ್ರ ಬಂದಿರುವುದಾಗಿ ತಿಳಿಸಿ ಬಾ ಎಂದು ಕಳಿಸಿದರು. ಹುಡುಗಿ ವಿಷಯ ಮುಟ್ಟಿಸಿದ ಬಳಿಕ ಸಮಾಧಾನಗೊಂಡ ಅಧಿಕಾರಿಯ ಮನೆಯವರು, "ಇವರ್‍ಯಾರು ಯಾರಿಗೂ ತೊಂದರೆ ಕೊಡುವ ಜನ ಅಲ್ಲ, ಎಲ್ಲ ಕಿತಾಪತಿ ಆಡಳಿತ ವರ್ಗದವರದ್ದೇ ಎಂದು" ಒಮ್ಮೆ ಹೇಳಿದ್ದರಂತೆ.

ಸೂರಿಯವರ ಹೋರಾಟಗಳಲ್ಲಿ ನಾವು ನೇರವಾಗಿ ಹೆಜ್ಜೆ ಹಾಕಲಿಲ್ಲವಾದರೂ ಹೋರಾಟಗಳ ಅನುಭವ, ಬಿಸಿ, ನೋವು- ನಲಿವುಗಳನ್ನು ಹೀಗೆ ಹಲವಾರು ರೀತಿಗಳಲ್ಲಿ ಉಂಡವರು ಎಂದು ನೆನೆಯುತ್ತಾರೆ ಕುಟುಂಬದ ಸದಸ್ಯರು. ಕೆಣಕುತ್ತಾ ಹೋದಂತೆಲ್ಲಾ ಹತ್ತಾರು ರೋಮಾಂಚನಕಾರಿ ಘಟನೆಗಳು ಕುಟುಂಬದವರಿಂದಲೂ ಬಿಚ್ಚಿಕೊಳ್ಳುತ್ತವೆ. ನೆನಪಿನ ಸುರುಳಿಯಲ್ಲೆಲ್ಲಾ

ಪುಟ 12ಕ್ಕೆ

ಕುಟುಂಬದ ಕಣ್ಣಲ್ಲಿ 'ಸೂರಿ'...

ಪುಟ 11 ರಿಂದ

ಹೋರಾಟಗಳೆ. ಬೆಚ್ಚಿ ಬೀಳಿಸುವ ಘಟನೆಗಳೆ ದುಡಿಯುವ ಜನರ ಹಿತಾಸಕ್ತಿಗಾಗಿನ ಪಯಣಗಳೆ.

ಆಸ್ಪತ್ರೆಗೆ ಸೇರಿಸಿ ಔಷಧಿ ಕೊಡಿಸಿ

ಸೂರಿಯವರು ಸಭೆಯ ಮೇರೆಗೆ ದೂರದ ಊರಿಗೆ ಹೋಗಿದ್ದರು. ಇದೇ ಸಂದರ್ಭಕ್ಕೆ ಅಪಘಾತವೊಂದರಲ್ಲಿ ಯಶೋದಾರವರ ಕಾಲಿನ ಮೂಳೆ ಮುರಿದಿತ್ತು. ಹೇಗೋ ಸೂರಿಯವರನ್ನು ಸಂಪರ್ಕಿಸಿ ವಿಷಯ ಮುಟ್ಟಿಸಲಾಗಿ ಸೂರಿ ಹೇಳಿದರಂತೆ. "ನಾನು ಮುಖ್ಯವಾದ ಕೆಲಸದ ಮೇಲೆ ಬಂದಿದ್ದೇನೆ. ಅರ್ಧಕ್ಕೆ ಹೋಗುವಂತಿಲ್ಲ. ಇಷ್ಟಕ್ಕೂ ನಾನೇನು ವೈದ್ಯನಲ್ಲ. ಆಸ್ಪತ್ರೆಗೆ ಸೇರಿಸಿ ಉಪಚಾರ ಮಾಡಿಸಿ. ಆಕೆಯ ಅಕ್ಕ ಮತ್ತು ಶಾಲೆಯವರು ನೋಡಿಕೊಳ್ಳುತ್ತಾರೆ ಎಂದಿದ್ದರಂತೆ. ಮೂರು ದಿನ ಬಿಟ್ಟು ಮನೆಗೆ ಬಂದು ವಿಚಾರಿಸಿದ್ದರಂತೆ.

ಹಿರಿಯ ಮಗಳು ಮೀರಾಗೆ ಮದುವೆ ನಿಶ್ಚಯವಾಗಿತ್ತು. ಮದುವೆ ಕೇವಲ ವಾರವಿದ್ದಾಗ ಬೆಂಗಳೂರಿನ ಬಿ.ಇ.ಎಲ್. ಕಛೇರಿಯ ಮುಂದೆ ಸೂರಿಯವರು ಉಪವಾಸ ಸತ್ಯಾಗ್ರಹ ಹೂಡಿದ್ದರು.

ಛತ್ರದ ಸ್ಥಳ ವಿಳಾಸಗಳನ್ನು ಮಕ್ಕಳಿಗೆ ತಿಳಿಸಿ, ದಿನಾಂಕ ಕಾಯ್ದಿರಿಸಲು ಸೂಚಿಸುತ್ತಿದ್ದರು. ಮದುಮಗಳು ಮೀರಾ ಕಿರಿಮಗಳು ರೇಖಾ ತಾವೇ ಛತ್ರ ಗೊತ್ತು ಮಾಡಿ ಅಪ್ಪನಿಗೆ ತಿಳಿಸಿದ್ದರು. ಬಂಧು ಬಳಗದವರನ್ನೆಲ್ಲಾ ಹೆಚ್ಚು ಕಡಿಮೆ ಅವರೇ ಆಮಂತ್ರಿಸಿದ್ದರು. ಚಿಕ್ಕಪ್ಪ ದೊಡ್ಡಪ್ಪ ಬಂಧುಗಳು ನೆರವಾಗಿದ್ದರು.

ಮಕ್ಕಳ ಆರೈಕೆ ಅಮ್ಮನದ್ದು, ವಿದ್ಯಾಭ್ಯಾಸ ಅಮ್ಮನ ರಿಸ್ಕು, ಬೇಕು - ಬೇಡಗಳ ವಿಚಾರಣೆ ಅಮ್ಮನಿಂದ, ಕುಟುಂಬಕ್ಕೆ ದುಡಿಮೆ ಅಮ್ಮ ಮಾಡಿದ್ದು, ವಾಸಕ್ಕೊಂದು ಮನೆಯೂ ಅಮ್ಮನಿಂದಲೆ. ಹಾಗೆಂದ ಮಾತ್ರಕ್ಕೆ ಮಕ್ಕಳಿಗೆ ಅಪ್ಪ ಬೇಡವಾಗಿದ್ದರೆ? ಪತ್ನಿಗೆ ಪತಿ ಅಸಹನೀಯವಾಗಿದ್ದರೆ. ಒಂದೂ ಅಲ್ಲ. ಒಬ್ಬರಿಗೊಬ್ಬರು ಬದ್ಧರಾಗಿದ್ದರು. ಆದರ್ಶವೊಂದನ್ನು ಅನುಕರಿಸಿದ್ದರು. ಮಾನವೀಯ ಮೌಲ್ಯಗಳನ್ನು ಬೆಸೆದುಕೊಂಡಿದ್ದರು. ಹಾಗಾಗಿಯೆ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳ ಸಲುವಾಗಿ ಕೋಟ್ಯಾಂತರ ರೂಪಾಯಿಗಳ ಹಣ; ಆಸ್ತಿ ಮಾಡುವ ಕುಟುಂಬದಲ್ಲೂ ಇಲ್ಲದಷ್ಟು ಬಾಂಧವ್ಯ, ಮಿಡಿತ, ಆಸೆ, ಪ್ರೀತಿ, ಅಪ್ಪನ ಬಗೆಗಿನ ಅಭಿಮಾನ, ಬಾಳಸಂಗಾತಿಯ ಬಗೆಗಿನ ಹೆಮ್ಮೆ ಈ ಕುಟುಂಬದಲ್ಲಿದೆ.

ಎಷ್ಟು ಜನಕ್ಕೆ ಮನೆ ಇದೆ, ನಿನಗೆ ದುರಾಸೆ ಬಂದಿದೆ

ಯಶೋದಾರವರ ತಾಯಿ ಒಡವೆ, ವಸ್ತ್ರ ಹಣ ಏನಾದರೊಂದು ಸಹಾಯ ಮಾಡುವ ಕುರಿತಾಗಿ ಮಗಳ ಬಳಿ ಪ್ರಸ್ತಾಪಿಸಿದರಂತೆ. ಬಾಡಿಗೆ ಮನೆಯಲ್ಲಿ ವಾಸವಿದ್ದ ಯಶೋದಾ ಸಹಾಯ ಮಾಡುವಂತಿದ್ದರೆ ಸೈಟು ಕೊಡಿಸುವ ಮೂಲಕ ಎಂದರಂತೆ. ಯಶೋದಾರವರ ತಾಯಿ ಒಪ್ಪಿಗೆ ಸೂಚಿಸಿ ಜಾಗ ಹುಡುಕಲು ಹೇಳಿದರಂತೆ. ಜಾಗದ ಬಗ್ಗೆ ಹೆದರಿಕೆಯಿಂದಲೆ ಸೂರಿಯವರ ಮುಂದೆ ವಿಚಾರಿಸಿದಾಗ ಸೂರಿಯವರು ತಕ್ಷಣವೇ ಸಿಟ್ಟಾಗಿ ಮಡದಿಯನ್ನು ದೂರಿದ್ದು, ನಿನಗೆ ದುರಾಸೆ ಬಂದಿದೆ, ನಮ್ಮಲ್ಲಿ ಎಷ್ಟು ಜನರಿಗೆ ತಾನೆ ಮನೆ ಇದೆ ಎಂದು. ಹಾಗೂ ಹೀಗೂ ಮಾಡಿ ಯಶೋದಾರವರ ಪ್ರಯತ್ನದಿಂದಲೆ ಒಂದು ಜಾಗ ಸಿಕ್ಕಿತು. (ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾದ್ದಕ್ಕೆ ಪ್ರತಿಯಾಗಿ ಅಂದಿನ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದ ಹೆಚ್.ಕೆ. ಕುಮಾರಸ್ವಾಮಿ ಎಂಬುವವರು ಜಾಗ ಮಾಡಿ ಕೊಟ್ಟಿದ್ದರು). ಆದರೆ ಜಾಗ ನೋಡಲೂ ಹೋಗದ ಸೂರಿಯವರು ಅಗತ್ಯವಿದ್ದ ಸಹಿಯೊಂದನ್ನು ಹಾಕಲು ನಿರಾಕರಿಸಿದಾಗ ಸಂಧಾನಕ್ಕೆ ತೆರಳಿದವರು ಕಾಂ। ರಾಮಚಂದ್ರರಾವ್. ಹಾಗೆಯೇ ಸೂರಿಯವರ ತಾಯಿ. ವಾಸಕ್ಕೊಂದು ಸ್ವಂತ ಮನೆಯಾದರೆ ನಿನಗೂ ಸಲೀಸು, ಮಕ್ಕಳು ಮರಿ ಎಳ್ಕೊಂಡು ನಿನ್ಹೆಂಡ್ತಿ ಎಲ್ಲಿ ಸುತ್ತಾಡ್ತಾಳೆ. ಇಷ್ಟಕ್ಕು ಆಕೆಯ ತಾಯಿ ಆಸೆ ಪಟ್ಟು ಕೊಡ್ತಾ ಇದ್ದಾರೆ. ನೀನು ಅಡ್ಡಿ ಆಗ್ಬೇಡಾ ಮುಂತಾಗಿ ಮನವೊಲಿಸಲಾಗಿ ಸೂರಿಯವರು ಸಹಿ ಹಾಕಿದ್ದಂತೆ. ಮನೆ ಕಟ್ಟುವ ಸಲುವಾಗಿ ಸಾಲ ಮಾಡಿದ್ದು, ಸಾಲಕ್ಕೆ ಓಡಾಡಿದ್ದು, ಸಾಲ ತೀರಿಸಿದ್ದು ಹೆಂಡತಿ ಮಕ್ಕಳೆ. ಆದ್ದರಿಂದಲೇ ಯಶೋಧಾರವರು ಈ ರೀತಿ ಹೇಳಿದ್ದು "ಮನೆ ಕಟ್ಟೋ ಆಸಕ್ತಿ ನನ್ನದಾಗಿದ್ದರೆ ಪಕ್ಷ ಕಟ್ಟೋ ಆಸಕ್ತಿ ಅವರದಾಗಿತ್ತು."

ಉಳುವವನಿಗೂ ಮಹಿಳೆಗೂ ವಾರಸುದಾರಿಕೆ

ಮೂಲತಃ ಸೂರಿಯವರು ಹಾಸನ ಜಿಲ್ಲೆಯ ಅರಕಲಗೂಡಿ ನವರು. ಆನಂತರ ಬಂದು ಸೇರಿದ್ದು ಬೆಂಗಳೂರನ್ನು. ಬೆಂಗಳೂರಿಗೆ ಬಂದು ನೆಲೆಸಿದಾಗ ಸೂರಿಯವರ ಹಿರಿಯರು ಅಲ್ಲಿನ ಜಮೀನನ್ನು 'ಪಾಲಿಗೆ ಕೊಟ್ಟು ಬಂದಿದ್ದರು. ವರ್ಷಕ್ಕೊಮ್ಮೆ ಭತ್ತ ಕಾಳು ಕಡಿ ತರುತ್ತಿದ್ದರು. ಮುಂದೆ ಸೂರಿಯವರೆ ಮುತುವರ್ಜಿ ವಹಿಸಿ "ಉಳುವವನನೆ ಭೂಮಿಗೆ ಒಡೆಯ ನನ್ನಾಗಿಸಿದರು". ಇದಕ್ಕಾಗಿ ಸರ್ಕಾರ ಪರಿಹಾರ ಹಣ ನೀಡಲಾಗಿ ಆಸ್ತಿಯಿಂದ ಬಂದ ಹಣ ಹೆಣ್ಣುಮಗಳಿಗೆ ಸೇರಲಿ ಎಂದು ತೀರ್ಮಾನಿಸಿ ತಂಗಿಗೆ ಕೊಡಿಸಿದ್ದರು.

ಇಬ್ಬರು ಹೆಣ್ಣು ಮಕ್ಕಳ ತಂದೆಯಾಗಿದ್ದ ಸೂರಿಯವರು ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನ ದೂರವಿಟ್ಟವರು. ದುಡಿಯುವ ಮಹಿಳೆಯನ್ನ ಸಂಗಾತಿಯಾಗಿ ಪಡೆದಿದ್ದ ಸೂರಿಯವರು ಮಹಿಳೆಯರ ಔದ್ಯೋಗಿಕ ಅವಕಾಶಗಳಿಗಾಗಿ, ಆರ್ಥಿಕ ಸ್ವಾತಂತ್ರ್ಯ, ಆಸ್ತಿಯ ಒಡೆತನಕ್ಕಾಗಿ ಪ್ರತಿಪಾದಿಸಿದರು. ಮಹಿಳೆಯರು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳ ಅರಿವನ್ನು ಹೊಂದಿದವರಾಗಿದ್ದರು. ಮಹಿಳೆಯರ ವಿಮೋಚನಾ ಚಿಂತನೆ, ಹೋರಾಟಗಳಲ್ಲಿ ಸದಾ ಭಾಗಿಯಾಗಿರುತ್ತಿದ್ದರು.

ಜಾತಿ, ಧರ್ಮ, ಕೋಮುವಾದಗಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಸೂರಿಯವರು ತಮ್ಮ ಎರಡನೆಯ ಪುತ್ರಿ ಮುಸ್ಲಿಂ ಯುವಕನನ್ನು ಬಾಳ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡಾಗ ವಿವಾಹಕ್ಕೆ ಒಪ್ಪಿಗೆ ನೀಡಿದ್ದರು. ಜಾತಿ-ಧರ್ಮಗಳ ಎಲ್ಲೆಗಳನ್ನ ಮೀರಿ ಬದುಕನ್ನ ನಡೆಸಿದರು.

ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದ ದಿನ ಸೂರಿಯವರು ಬೇಗನೆ ಮನೆಗೆ ಬಂದರಂತೆ. ಮಡದಿಗೆ ಅಚ್ಚರಿಯೋ ಅಚ್ಚರಿ. ಹಸಿವಾಗಿದೆ ಊಟ ಬಡಿಸು ಎಂದ ಸೂರಿಯವರು ಕೈ-ಕಾಲು ತೊಳೆದು ಬರುವಷ್ಟರಲ್ಲಿ ಅವರನ್ನು ಬಂಧಿಸುವ ಸಲುವಾಗಿ ಪೋಲೀಸರು ಹಾಜರಾಗಿದ್ದರಂತೆ. ಅಯ್ಯೋ ಅವರಿನ್ನು ಊಟವೇ ಮಾಡಿಲ್ಲಾ ಎಂದು ಯಶೋದಾರವರು ದುಃಖಿಸಿದಾಗ ಪೋಲೀಸ್ ಇನ್ಸ್‌ಪೆಕ್ಟರ್ ಊಟಕ್ಕೆ ಅವಕಾಶ ನೀಡಿ ಕೂಡಲೇ ಬಂಧಿಸಿದ್ದರಂತೆ.

ಕಷ್ಟದಲ್ಲಿರುವ ಕಾರ್ಮಿಕರು, ಅಸಹಾಯಕರಾದ ಸಾಮಾನ್ಯರು, ಕ್ರಾಂತಿಕಾರಿ ಚಳುವಳಿಯ ಮುಂಚೂಣಿಯಲ್ಲಿದ್ದ ಎಕೆಜಿ, ಸುಶೀಲಾ ಗೋಪಾಲನ್, ಬಿ.ಟಿ.ರಣದಿವೆ, ಪಿ.ರಾಮಮೂರ್ತಿ, ಬಾಲನಂದನ್, ಮುಂತಾದ ಅಗ್ರಗಣ್ಯ ನಾಯಕರು ಸೂರಿಯವರ ಮನೆಗೆ ಭೇಟಿ ನೀಡುತ್ತಿದ್ದರು. ಒಂದು ಕಡೆ ಕಷ್ಟ ತೋಡಿಕೊಳ್ಳುವ ದುಡಿಯುವ ಜನ - ಮತ್ತೊಂದು ಕಡೆ ದುಡಿಯುವ ವರ್ಗದ ನೇತಾರರ ಪರಿಶ್ರಮ ಇದರಿಂದ ಪ್ರಭಾವಿತರಾದ ಕುಟುಂಬದವರು ಸೂರಿಯವರನ್ನು ಎಂದೂ ಅಡ್ಡಿಪಡಿಸದೆ ಬೆಂಗಾವಲಾಗಿಯೇ ಮುನ್ನಡೆಸಿದ್ದಾರೆ. ಮಾತ್ರವಲ್ಲ ಸೂರಿಯವರ ಕೆಲಸವನ್ನು ಮತ್ತೂ ಮುನ್ನಡೆಸುವ, ಆ ಮೂಲಕ ಸೂರಿಯವರಿಗೆ ಗೌರವ ಸಲ್ಲಿಸುವ ನಿರ್ಧಾರ ಕೈಗೊಂಡಿದ್ದಾರೆ.



ಅಪರೂಪದ ಹುಟ್ಟುಹಬ್ಬದ ಆಚರಣೆ - ಕುಟುಂಬ ವರ್ಗದವರೊಂದಿಗೆ 'ಸೂರಿ'

ಅಪಾಯಿಂಟ್‌ಮೆಂಟ್ ಕೇಳಿದ ಮಕ್ಕಳು – ಮೊಮ್ಮಕ್ಕಳು!

ಕಾರ್ಮಿಕ ಸಂಘಟನೆ, ಸಭೆ, ಕೇಸು, ಪಕ್ಷ ಹೀಗೆ ಯಾವಾಗಲೂ ಒತ್ತಡದಲ್ಲಿರುತ್ತಿದ್ದ ಸೂರಿಯವರನ್ನು ನೋಡಲು ಮಕ್ಕಳು - ಮೊಮ್ಮಕ್ಕಳಿಗೆ ಸಾಧ್ಯವಾಗುತ್ತಿರಲಿಲ್ಲ.

ಹುಡುಕಿಕೊಂಡು ಮನೆಗೆ ಬಂದರೂ ಯಾವುದಾದರೊಂದು ಸಭೆಯನ್ನು ಮನೆಯಲ್ಲಿಯೇ ಏರ್ಪಡಿಸಿಕೊಂಡಿರುತ್ತಿದ್ದ ಸೂರಿಯವರು ಕೆಲವೊಮ್ಮೆ ಹಾಯ್-ಬಾಯ್ ಮಾತ್ರಕ್ಕೆ ಸಿಗುತ್ತಿದ್ದರೆಂದು ಹೇಳಿಕೊಂಡ ಮಕ್ಕಳು, ಮೊಮ್ಮಕ್ಕಳು, appointment ಕೊಡಿ ನಮಗೂ ನಿಮ್ಮನ್ನು ಭೇಟಿ ಮಾಡುವ ಹಕ್ಕಿದೆಯೆಂದು ಕೋಪ ಮಾಡುತ್ತಿದ್ದುದನ್ನು ನೆನೆಪಿಸಿದರು.

ಮೀರಾ ಮತ್ತು ರೇಖಾರಿಗಿರುವ ಸಮಾಧಾನವೆಂದರೆ ನಮ್ಮಪ್ಪ ನಮಗೆ ದುಬಾರಿಯಾಗಿದ್ದರಾದರೂ ಅವರ ಮೊಮ್ಮಕ್ಕಳಿಗೆ ಸ್ವಲ್ಪ ಲಭ್ಯವಿದ್ದರೆಂಬುದು. ಇತ್ತೀಚಿನ ದಿನಗಳಲ್ಲಿ ತಾತ ಮೊಮ್ಮಕ್ಕಳಿಗಾಗಿ ಕೆಲವೊಂದು ಶನಿವಾರ ಅಥವಾ ಭಾನುವಾರಗಳನ್ನು ಕಾಯ್ದಿರಿಸುತ್ತಿದ್ದರಂತೆ. ದೂರದ ಊರುಗಳಿಗೆ ಹೋದಾಗ ಪುಟ್ಟ ಮಕ್ಕಳಿಗಾಗಿ ಏನಾದರೂ ತರುತ್ತಿದ್ದರಂತೆ. ಹೀಗೆ ನೆನಪಿಸಿಕೊಳ್ಳುತ್ತಾ ಹಿರಿಯ ಮೊಮ್ಮಗಳು ಸಿಂಧು ಒಮ್ಮೆ ವಿದೇಶಕ್ಕೆ ಹೋಗಿದ್ದಾಗ ತಾತ ತಂದಿದ್ದ ಫ್ರಾಕಿನ ಬಗ್ಗೆ ಹೇಳಿದಳು. "ತಾತ ಒಮ್ಮೆ USA ಗೆ ಹೋಗಿದ್ದರು. ಪ್ರವಾಸ ಮುಗಿಸಿ ಹಿಂದಿರುಗುವಾಗ ನಮಗೆಲ್ಲಾ ಫ್ರಾಕುಗಳನ್ನು ಖರೀದಿಸಿದ್ದರು. ಬೆಂಗಳೂರಿಗೆ ಬಂದವರೆ ನಮ್ಮನ್ನೆಲ್ಲ ಮನೆಗೆ ಕರೆಸಿಕೊಂಡರು. ನಿಮಗೆಲ್ಲರಿಗೂ ಫ್ರಾಕ್ಸ್ ತಂದಿದ್ದೀನಿ. ತಗೊಳ್ಳಿ ಎಂದರು ನಾವು USA ಫ್ರಾಕ್ಸು ಅಂತ ಖುಷಿಯಿಂದ ಬಿಚ್ಚಿದೆವು. 'ಆದರೆ ಅವೆಲ್ಲಾ ನೈಟಿಗಳು' ಪಾಪ ತಾತಂಗೆ ಗೊತ್ತಾಗೇ ಇರಲಿಲ್ಲವೆಂದು ಛೇಡಿಸಿದಳು ಮೊಮ್ಮಗಳು.

ಹಾಗೆ ಇನ್ನೊಂದು ಘಟನೆಯನ್ನು ಮೆಲುಕು ಹಾಕಿ ನಮ್ಮ ತಾತ ಯಾರಿಗೂ ಹೆದರುತ್ತಿರಲಿಲ್ಲವೆಂದಳು.

ಸಿಂಧೂ ಹುಟ್ಟುಹಬ್ಬದ ಸಲುವಾಗಿ ಸಿಂಧೂ ಅಮ್ಮ ಮೀರಾ ಜಯನಗರದ ಮನೆಯ ಹತ್ತಿರವೇ ಇದ್ದ ಸಾಧಾರಣ ಹೋಟೆಲೊಂದಕ್ಕೆ ಮನೆಯವರನ್ನೆಲ್ಲಾ ಕರೆದುಕೊಂಡು ಊಟಕ್ಕೆ ಹೋಗಿದ್ದರಂತೆ. ಒತ್ತಾಯ ಮಾಡಿ ಸೂರಿಯವರನ್ನು ಪಾಲ್ಗೊಳಿಸಿದ್ದರಂತೆ. ಸರಿ ಬೇಕಾದ್ದನ್ನು ಆರ್ಡರ್ ಮಾಡಿ ಊಟ ಮುಗಿಸಿ ಟೇಬಲ್ಲಿನ ಮೇಲಿದ್ದ ಬಿಲ್ಲಿನ ಕಡೆಗೆ ನೋಡಿದವರೆ ಹೌಹಾರಿದರಂತೆ ಸೂರಿಯವರು. ಸಪ್ಲೆಯರ್ ಕರೆದು "ಏನಯ್ಯಾ ಇದು? ಯಾವ ಸೀಮೆ ಊಟ ಯಾವ ಸೀಮೆ ಬಿಲ್ಲು. ಏನು ಮಹಾ ಕೊಟ್ಟಿದ್ದು ನೀನು. ಲೆಕ್ಕ-ಗಿಕ್ಕ ಏನೂ ಬೇಡವಾ, ಅವ್ನು ಯಾವನಯ್ಯಾ ಮಾಲೀಕ ಕರೀ ಇಲ್ಲಿ" ಎಂದು ಗುಡುಗುತ್ತಿದ್ದಂತೆ, ಹೋಟೇಲಿನ ಗಿರಾಕಿಗಳೆಲ್ಲ ಇವರ ಕಡೆಗೆ ಗಮನ ನೆಟ್ಟರಂತೆ. ಅಪ್ಪನನ್ನ ಸಮಾಧಾನಪಡಿಸುವ ಸಲುವಾಗಿ ಮೀರಾ "ಬಿಡಿ ಅಣ್ಣ ಮನೆಯವರೆಲ್ಲಾ ಊಟ ಮಾಡಿದೆವಲ್ಲಾ" ಎಂದಾಗ "ನೀನು ಸುಮ್ಮನಿರಮ್ಮ ಏನ್ ನೂರು ಜನ ಊಟ ಮಾಡಿದ್ವ, ಐದಾರು ಜನ ತಾನೆ. ಅದಕ್ಕೆ ಇಷ್ಟೊಂದು ಬೆಲೆಯಾ. ನಿನಗೆ ದುಡ್ಡು ಜಾಸ್ತಿಯಿದ್ದರೆ ನಮ್ ಪಾರ್ಟಿಗೆ ಕೊಡು ಹೀಗೆಲ್ಲಾ ಖರ್ಚು ಮಾಡಬೇಡ" ಎಂದು ಸುಮ್ಮನಿರಿಸಿದ್ದರಂತೆ.

ಸಪ್ಲೆಯರ್‌ನನ್ನು ಕರೆದು ಎಷ್ಟು ಸಂಬಳ? ಅಂತ ಕೇಳಿದರಂತೆ. ಅವ ಎರಡು ಸಾವಿರ ಎನ್ನುತ್ತಿದ್ದಂತೆ ನೋಡು ಸುಲಿಗೆ ಅಂದ್ರ ಹೇಗಿರುತ್ತೆ ಅಂತ. ಮತ್ತೂ ಕೂಗಾಡಿದ್ದರಂತೆ.

ಸುಲಿಗೆಯನ್ನೇ ಆಡಂಬರವೆಂದು ಮೌನದಿಂದ ಸ್ವೀಕರಿಸುವ ಡಂಭಾಚಾರಕ್ಕೆ, ಅನವಶ್ಯಕ ಗಾಂಭೀರ್ಯಕ್ಕೆ ಸೂರಿಯವರು ಒಗ್ಗಲೇ ಇಲ್ಲ. ವರ್ಗಗುಣವನ್ನು ಹೋಟೇಲಿನಲ್ಲೂ ಪ್ರದರ್ಶಿಸಿ ಬಂದಿದ್ದರು. ಹೊರಗೆ ಬಂದಾಗ ಕದ್ದು ಹೊರಗೆ ಬಂದಿದ್ದ ಸಪ್ಲೈಯರ್ ಹೇಳಿದನಂತೆ, ಸರ್ ಇಷ್ಟು ದಿನಕ್ಕೆ ಇವತ್ತು ನನಗೆ ಖುಷಿಯಾಯಿತೆಂದು.


ಈ ಘಟನೆಯನ್ನು ನೆನೆದು ಸಿಂಧೂ ಉದ್ಧರಿಸಿದ್ದು ನಮ್ಮ ತಾತ ಯಾರಿಗೂ ಹೆದರುತ್ತಿರಲಿಲ್ಲವೆಂದು.

ಒಬ್ಬ ಅಣ್ಣ, ಒಬ್ಬ ಅಕ್ಕ, ಒಬ್ಬ ತಮ್ಮ, ಒಬ್ಬಳು ತಂಗಿಯನ್ನು ಹೊಂದಿದ್ದ ಸೂರಿಯವರು ಅಗಲಿದಾಗ ಉಳಿದಿದ್ದವರು ತಮ್ಮ ಮಾತ್ರ. ಪತ್ನಿ ಇಬ್ಬರು ಹೆಣ್ಣುಮಕ್ಕಳು ಅಳಿಯಂದಿರು, ನಾಲ್ಕು ಜನ ಮೊಮ್ಮಕ್ಕಳನ್ನು ಅಗಲಿರುವ ಸೂರಿಯವರ ಸ್ಫೂರ್ತಿ, ಪ್ರಭಾವ ಎಲ್ಲರ ಮೇಲೂ ಇದೆ. ಸೂರಿಯವರ ಹೆಸರನ್ನು ಉಳಿಸುವ ಆಸೆಯೂ ಇದೆ.

○

ಮತ್ತೆ ಕೇಸರಿ ಪಡೆಗಳ ನಿಜ 'ಸಂಸ್ಕೃತಿ'ಯ ಪ್ರದರ್ಶನ

ಆಗಸ್ಟ್ 22, 23 ಮತ್ತು 24ರಂದು ದಿಲ್ಲಿಯ ಪ್ರಗತಿ ಮೈದಾನದಲ್ಲಿ ಭಾರತೀಯ ಕಲಾಶ್ರಂಗದಲ್ಲಿ ಕಲಾಮೇಳ ನಡೆಯಿತು. ಇದರಲ್ಲಿ ಭಾರತದ ಪ್ರಖ್ಯಾತ ಕಲಾವಿದ ಎಂ.ಎಫ್. ಹುಸೇನ್ ರವರ ಕಲಾಕೃತಿಗಳ ಪ್ರದರ್ಶನ ಮಾಡಬಾರದು ಎಂದು ಎಲ್ಲಾ ಗ್ಯಾಲರಿಗಳಿಗೆ ತಾಕೀತು ಮಾಡಲಾಗಿತ್ತಂತೆ. ಇದನ್ನು ಪ್ರತಿಭಟಿಸಿ ಅದೇ ಸಮಯದಲ್ಲಿ 'ಸಹಮತ್' ಈ ಕಲಾವಿದರ ಚಿತ್ರಗಳ ಪ್ರತಿಕೃತಿಗಳ ಒಂದು ಪ್ರದರ್ಶನವನ್ನು ಸಂಘಟಿಸಿತು. ಇದರಲ್ಲಿ ಹುಸೇನ್ ಪೈಂಟಿಂಗ್ ಗಳ ಪ್ರತಿಕೃತಿಗಳಲ್ಲದೆ, ಪಾರ್ಥಿವ್ ಶಹಾರವರು ತೆಗೆದ ಹುಸೇನರ ಎಂಟು ಛಾಯಾಚಿತ್ರಗಳು, ದಿಲ್ಲಿಯ ವಿಲೆಜ್ ಆರ್ಟ್ ಗ್ಯಾಲರಿಯಲ್ಲಿ ಇರುವ ಹುಸೇನರ 'ಮುಘಲ್-ಎ-ಆಜಂ' ಸರಣಿಯ ಚಿತ್ರಗಳ ಮೂರು ಫೋಟೋಗಳು ಇತ್ಯಾದಿ ಕೂಡಾ ಇದ್ದವು. ಸಹಮತ್ ಕಚೇರಿಯ ಹೊರಗೆ ಶಾಮಿಯಾನಾ ಹಾಕಿ ಈ ಪ್ರರ್ಶನವನ್ನು ಏರ್ಪಡಿಸಲಾಗಿತ್ತು.



ಭಾನುವಾರ, ಆಗಸ್ಟ್ 24ರಂದು ಮಧ್ಯಾಹ್ನದ ಮೇಲೆ ಸುಮಾರು 3.30ರ ಹೊತ್ತಿಗೆ 8-10 ದುಷ್ಕರ್ಮಿಗಳು ಪ್ರದರ್ಶನದ ಶಾಮಿಯನಾದೊಳಕ್ಕೆ ನುಗ್ಗಿ ಅಲ್ಲಿದ್ದವುಗಳನ್ನೆಲ್ಲಾ ಧ್ವಂಸ ಮಾಡಲಾರಂಭಿಸಿದರು. ಆಗ ಅಲ್ಲಿದ್ದ ಈಟಿವಿ ವಾಹಿನಿಯ ಮಂದಿ ಈ ಇಡೀ ಪ್ರಕರಣವನ್ನು ರೆಕಾರ್ಡ್ ಮಾಡಿಕೊಂಡಿದ್ದಾರೆ. ಚೌಕಟ್ಟು ಹಾಕಿದ್ದ ಪ್ರಿಂಟ್‌ಗಳನ್ನು, ಫೋಟೋಗಳನ್ನು ಹಾಳುಗೆಡವಿ, ಒಂದು ಟಿವಿ ಸೆಟ್, ಡಿವಿಡಿ ಪ್ಲೆಯರ್ ಹಾಗೂ ಪೀಠೋಪಕರಣಗಳನ್ನು ಧ್ವಂಸ ಮಾಡಿ, ನಂತರ ಆ ದುಷ್ಕರ್ಮಿಗಳು ಓಡಿಹೋದರು. ಆಗ ಅಲ್ಲಿದ್ದ ಸಹಮತ್ ಸದಸ್ಯರು ಹಾಗೂ ಕಲಾವಿದರಾದ ಅರ್ಪಣಾ ಕೌರ್, ಅನಿಲ್ ಚಂದ್ರ ಮತ್ತು ಸಂತೋಷ ಶರ್ಮ ಈ ಧ್ವಂಸ ಪ್ರಕರಣವನ್ನು ಕಣ್ಣಾರೆ ಕಂಡವರು.

ಈ ಗೂಂಡಾಗಿರಿಯನ್ನು ಪ್ರತಿಭಟಿಸಿ ದುಷ್ಕರ್ಮಿಗಳು ಧ್ವಂಸ ಮಾಡಿ ಹೋದ ಸ್ಥಿತಿಯಲ್ಲಿಯೆ ಅದನ್ನು ಇನ್ನೂ ಒಂದು ದಿನ ವಿಸ್ತರಿಸಲಾಯಿತು. ಆಗಸ್ಟ್ 25 ರ ಸಂಜೆಯ ವರೆಗೆ ಪ್ರದರ್ಶನ ಮುಂದುವರೆಯಿತು.

ಅಲ್ಲಿಯೇ ಒಂದು ಪ್ರತಿಭಟನಾ ಸಭೆಯೂ ನಡೆಯಿತು. ಅದರಲ್ಲಿ ಸಮಾಜದ ವಿವಿಧ ವಿಭಾಗಗಳಿಂದ ಬಂದಿದ್ದ ಜನಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅವರೆಲ್ಲಾ ಸಹಮತ್ ನೊಂದಿಗೆ ಸೌಹಾರ್ದ ವ್ಯಕ್ತಪಡಿಸುತ್ತಾ ಸಂಸತಿಯ ಬಗ್ಗೆ ಒಂದು ಸಂಕುಚಿತ ದೃಷ್ಟಿಕೋನವನ್ನು ಎಲ್ಲರ ಮೇಲೆ ಹೇರುವ ಬಲಪಂಥೀಯ ಶಕ್ತಿಗಳ ಈ ಹೇಡಿತನದ ಕೃತ್ಯಗಳನ್ನು ಖಂಡಿಸಿದರು. ಪ್ರಸಿದ್ದ ಚಲನಚಿತ್ರ ನಿರ್ದೇಶಕ ಸಯ್ಯದ್ ಅಖ್ತರ್ ಮಿರ್ಜಾ, ಚಿತ್ರ ಕಲಾವಿದ ವಿವಾನ್ ಸುಂದರಂ, ರಾವ್ ರಹಮನ್, ಪಾರ್ಥಿವ್ ಶಹಾ, ಎಂ.ಕೆ.ರೈನ, ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಮತ್ತು ಬೃಂದಾ ಕಾರಟ್, ಪ್ರಖ್ಯಾತ ಗಾಯಕಿ ಶುಭ ಮುದ್ಗಲ್ ಮತ್ತು ಮದನ ಗೋಪಾಲ ಸಿಂಗ್ ಮುಂತಾದವರು ಆಗಮಿಸಿದ್ದರು. ಇನ್ನೂ ಹಲವು ಪ್ರಮುಖರು ಸೌಹಾರ್ದವನ್ನು ವ್ಯಕ್ತಪಡಿಸುತ್ತ ಸಂದೇಶಗಳನ್ನು ಕಳಿಸಿದರು.

ದೇಶಾದ್ಯಂತ ಸಂಕುಚಿತವಾದೀ ಶಕ್ತಿಗಳ ಈ ಕುಕೃತ್ಯದ ವಿರುದ್ಧ ಪ್ರತಿಭಟನೆಗಳು ವ್ಯಕ್ತವಾಗಿವೆ.

ಇದು ಜವಾಬುದಾರಿಕೆಯಿಲ್ಲದ ಸರ್ಕಾರ....

ಪುಟ 7 ರಿಂದ

ಅದನ್ನು ಹತೋಟಿಗೆ ತರುವಲ್ಲಿ ಸರಕಾರ ಶೋಚನೀಯವಾಗಿ ಸೋತಿದೆ. ಅತ್ತ ಜಮ್ಮು-ಕಾಶ್ಮೀರದಲ್ಲಿ ಚಳುವಳಿಗಳ ಬೆಂಕಿ ಉರಿಯುತ್ತಲೇ ಇದೆ. ಆ ರಾಜ್ಯ ಈಗ ರಾಷ್ಟ್ರಪತಿ ಆಳ್ವಿಕೆಯಲ್ಲಿದೆ. ಹೀಗಿರುವಾಗ ಆ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲು ಸಂಸತ್ತು ಏಕೈಕ ವೇದಿಕೆ.

ಕೋಸಿ ನದಿ ಮೂರು ಶತಮಾನಗಳ ನಂತರ ತನ್ನ ಪಾತ್ರ ಬದಲಿಸಿ ಹಲವಾರು ಪ್ರದೇಶಗಳನ್ನು ಅಳಿಸಿ ಹಾಕಿದೆ, ಲಕ್ಷಾಂತರ ಜನಗಳು ಮನೆಮಾರು ಕಳಕೊಂಡಿದ್ದಾರೆ. ನೇಪಾಳದಲ್ಲಿರುವ ಕೋಸಿ ಅಣೆಕಟ್ಟಿನ ಒಡ್ಡುಗಳಲ್ಲಿ ಆದ ಬಿರುಕುಗಳಿಂದಾಗಿ ಈ ಅನಾಹುತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ. ಅಲ್ಲಿ ಪ್ರಚಂಡರವರು ನೇಪಾಳದ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿರುವ ಸಂದರ್ಭದಲ್ಲೇ ಇದು ಸಂಭವಿಸಿದೆ. ಭಾರತಕ್ಕೆ ಈ ಅಣೆಕಟ್ಟನ್ನು ನೋಡಿಕೊಳ್ಳುವ 199 ವರ್ಷಗಳ ಗುತ್ತಿಗೆಯಿದೆ. ಎಲ್ಲಿ, ಏನು ತಪ್ಪಾಗಿದೆ ಎಂಬ ಬಗ್ಗೆ ದೇಶಕ್ಕೆ ತಿಳೀಯಬೇಕಾಗಿದೆ. ಆದರೆ ಜನಗಳಿಗೆ ಈ ಹಕ್ಕನ್ನು ವಂಚಿಸಲಾಗಿದೆ.

ಕೋಮುವಾದಿ ಜ್ವಾಲೆಯನ್ನು ಈಗ ಜಮ್ಮುವಿನಿಂದ ಒರಿಸ್ಸಾಕ್ಕೆ ಒಯ್ಯಲಾಗಿದೆ. ಅಲ್ಲಿ ಮುಗ್ಧ ಕ್ರೈಸ್ತರನ್ನು ಅಮಾನವೀಯ ಅತ್ಯಾಚಾರಗಳಿಗೆ ಗುರಿ ಮಾಡಲಾಗುತ್ತಿದೆ. 'ಹಿಂದೂ ವೋಟ್ ಬ್ಯಾಂಕ್' ನ್ನು ಕ್ರೋಢೀಕರಿಸಿ ಚುನಾವಣಾ ಲಾಭ ಗಿಟ್ಟಿಸಲು ಈ ಮಾರಣ ಹೋಮ ನಡೆಯುತ್ತಿದೆ. ಈಶಾನ್ಯ ಪ್ರದೇಶದಲ್ಲಿ ಜನಾಂಗೀಯ ಗಲಭೆಗಳು, ಡಾರ್ಜಿಲಿಂಗ್, ತೆಲಂಗಾಣ ಮುಂತಾದೆಡೆಗಳಲ್ಲಿ ಪ್ರತ್ಯೇಕತಾವಾದದ ಕೂಗು, ಮಾವೋವಾದಿಗಳ ಬಂಡುಕೋರ ಕೃತ್ಯಗಳು ಹಲವು ಭಾಗಗಳಲ್ಲಿ ಮುಂದುವರೆಯುತ್ತಿವೆ.



ಟಾಟಾ ನ್ಯಾನೋ ಘಟಕಕ್ಕೆ ವಿರೋಧದ ಹೆಸರಿನ ಪುಂಡಾಟಿಕೆ

ಬೇರೆಲ್ಲಿ ಚರ್ಚಿಸಲು ಸಾಧ್ಯ?

ಸಿಂಗೂರಿನಲ್ಲಿ ನಡೆಯುತ್ತಿರುವ ಚಳವಳಿಯಿಂದ ಭೂಸ್ವಾಧೀನಕ್ಕೆ ಒಂದು ಹೊಸ ಕೇಂದ್ರೀಯ ಕಾನೂನಿನ ಅಗತ್ಯ ಮತ್ತೆ ಮುಂಚೂಣಿಗೆ ಬಂದಿದೆ. ದೇಶದ ಭವಿಷ್ಯವನ್ನು ನಿರ್ಧರಿಸುವ ಈ ಎಲ್ಲಾ ಪ್ರಶ್ನೆಗಳನ್ನು ಸಂಸತ್ತಿನಲ್ಲಿ ಅಲ್ಲವಾದರೆ ಬೇರೆಲ್ಲಿ ಚರ್ಚಿಸಲು ಸಾಧ್ಯ?

ಎಲ್ಲಕ್ಕೂ ಮಿಗಿಲಾಗಿ ಈ ವಾರ ಜಾಗತಿಕ ಬಡತನ ಕುರಿತಂತೆ ವಿಶ್ವ ಬ್ಯಾಂಕಿನ ಅಂದಾಜುಗಳು ಬಿಡುಗಡೆಯಾಗಿವೆ. ನವ-ಉದಾರವಾದಿ ಸುಧಾರಣೆಗಳ ಆಳ್ವಿಕೆಯಲ್ಲಿ 'ಹೊಳೆಯುತ್ತಿರುವ' ಮತ್ತು 'ನರಳುತ್ತಿರುವ' ಭಾರತಗಳ ನಡುವಿನ ಕಂದರ ಹೆಚ್ಚುತ್ತಿದೆ ಎಂದು ಮತ್ತೊಮ್ಮೆ ಇದರಿಂದ ಖಚಿತವಾಗಿದೆ. 1990-2005 ಅವಧಿಯಲ್ಲಿ ಬಡತನದ ಇಳಿಕೆ 1980-1990ರ ಅವಧಿಯಲ್ಲಿ ಆದ ಇಳಿಕೆಗಿಂತಲೂ ಕಡಿಮೆ ಎಂದು ಈ ಅಂದಾಜುಗಳು ತಿಳಿಸುತ್ತವೆ. ಕೊಳ್ಳುವ ಶಕ್ತಿಯ ಆಧಾರದಲ್ಲಿ 75.6 ಶೇ. ಅಂದರೆ 82.8 ಕೋಟಿ ಭಾರತೀಯರು ದಿನಕ್ಕೆ 2 ಡಾಲರಿಗಿಂತ ಕಡಿಮೆ ಖರ್ಚಿನಲ್ಲಿ ಬದುಕುತ್ತಿದ್ದಾರೆ. ಇದು 78 ಶೇ. ಭಾರತೀಯರು ದಿನಕ್ಕೆ 20ರೂ.ಗಿಂತಲೂ ಕಡಿಮೆಯಲ್ಲಿ ಜೀವನ ಸಾಗಿಸಬೇಕಾಗಿದೆ ಎಂಬ ಸರಕಾರದ ಅಧ್ಯಯನಗಳು ತೋರಿಸಿದ್ದನ್ನು ಖಚಿತ ಪಡಿಸಿವೆ. ಇನ್ನೊಂದೆಡೆ ಸ್ವಿಸ್ ಬ್ಯಾಂಕ್‌ಗಳಲ್ಲಿ ಠೇವಣಿ ಹೊಂದಿರುವವರಲ್ಲಿ ಭಾರತೀಯರೇ ಎಲ್ಲರಿಗಿಂತ ಮುಂದು ಎಂದು ಸ್ವಿಸ್ ಬ್ಯಾಂಕ್ ಅಸೋಸಿಯೇಶನ್ ವರದಿಯಿಂದ ಈಗ ಬಹಿರಂಗಕ್ಕೆ ಬಂದಿದೆ. ಭಾರತೀಯರ ಠೇವಣಿಗಳ ಮೊತ್ತ 1,45,600 ಕೋಟಿ ಡಾಲರುಗಳು! ವಿಶ್ವದ ಇತರೆಲ್ಲರಿಗಿಂತಲೂ ಹೆಚ್ಚು!

ಅಲ್ಲದೆ ಸರಕಾರ ಈಗಿನ ಹಣದುಬ್ಬರಕ್ಕೆ ಕೊಟ್ಟ ತಪ್ಪು ಪಥ್ಯದಿಂದಾಗಿ ಆರ್ಥಿಕ ನಿಧನಗೊಂಡಿದೆ. ಬಡ್ಡಿ ದರ ಏರಿಕೆ ಮತ್ತು ಸಾಲ ನಿರ್ಬಂಧಗಳಿಂದಾಗಿ ಜೂನ್ 2008ರಲ್ಲಿ ಕೈಗಾರಿಕಾ ಬೆಳವಣಿಗೆ ದರ 5.4 ಶೇ,ಕ್ಕೆ ಇಳಿದಿದೆ. ಕಳೆದ ವರ್ಷ ಇದು 8.9ಶೇ. ಇತ್ತು. ರಿಸರ್ವ್ ಬ್ಯಾಂಕ್ ಪ್ರಕಾರ ಖಾಸಗೀ ಹೂಡಿಕೆಗಳೂ ಇಳಿಮುಖ ವಾಗಿವೆ. 2007-08ರಲ್ಲಿ 258 ಪ್ರಾಜೆಕ್ಟ್ ಗಳಲ್ಲಿ 26,000ಕೋಟಿ ರೂ. ಹೂಡಿಕೆಯಿತ್ತು. ಈಗ ಅದು 128 ಪ್ರಾಜೆಕ್ಟ್‌ಗಳಲ್ಲಿ 10,700 ಕೋಟಿ ರೂ.ಗಳಿಗೆ ಇಳಿದಿದೆ. ಸಹಜವಾಗಿ ಉದ್ಯೋಗಾವಕಾಶಗಳೂ ತೀವ್ರವಾಗಿ ಕಡಿತಗೊಳ್ಳುತ್ತವೆ. ಜನಗಳಿಗೆ ಅತ್ತ ನಿರಂತರ ಬೆಲೆಯೇರಿಕೆ, ಇತ್ತ ಹೆಚ್ಚುತ್ತಿರುವ ನಿರುದ್ಯೋಗ.

ಗಂಭೀರ ಅಪಚಾರ

ಇವಕ್ಕೆಲ್ಲಾ ಜನಗಳು ಸಂಸತ್ತಿನಲ್ಲಿ ಮಾತ್ರವೇ ಸರಕಾರದಿಂದ ಉತ್ತರ ಕೇಳಲು ಸಾಧ್ಯ, ತಾವು ಚುನಾಯಿಸಿದ ಪ್ರತಿನಿಧಿಗಳ ಮೂಲಕ. ಈ ಮೂಲಕ ಮಾತ್ರವೇ ಅವರು ತಮ್ಮ ಸಾರ್ವಭೌಮ ಹಕ್ಕನ್ನು ಚಲಾಯಿಸಲು ಸಾಧ್ಯ. ಯುಪಿಎ ಸರಕಾರ ಮಳೆಗಾಲದ ಅಧಿವೇಶನವನ್ನು ಪಕ್ಕಕ್ಕೆ ಎಸೆದು ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ.

ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯಿಂದ ದೇಶವನ್ನು ಉದ್ದೇಶಿಸಿ ಮಾತಾಡುತ್ತ 'ನಾಲ್ಕು ವರ್ಷಗಳ ಹಿಂದೆ, ನಾವು ಎದುರಿಸುತ್ತಿರುವ ಒಂದು ಮಹತ್ವದ ಸವಾಲೆಂದರೆ ಉತ್ತಮ ಆಡಳಿತ ಒದಗಿಸುವ ಸವಾಲು ಎಂದು ನಾನು ನಿಮಗೆ ಹೇಳಿದ್ದೆ. ಸರಕಾರವನ್ನು ಪಾರದರ್ಶಕ, ದಕ್ಷ ಮತ್ತು ಸ್ಪಂದನಶೀಲಗೊಳಿಸಲು ನಾವು ಕ್ರಮಗಳನ್ನು ಕೈಗೊಂಡಿದ್ದೇವೆ' ಎಂದರು. ದುರದೃಷ್ಟವಶಾತ್, ಅದೇ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿಯೇ ಇವೆಲ್ಲ ನಡೆಯುತ್ತಿವೆ.

ನಿಜವಾಗಿಯೂ, ಭಾರತ- ಅಮೆರಿಕಾ ಪರಮಾಣು ವ್ಯವಹಾರವನ್ನು ಕುದುರಿಸುವ ಏಕೈಕ ಗೀಳು ಹಚ್ಚಿಸಿಕೊಂಡ ಯುಪಿಎ ಸರಕಾರ ಪ್ರಧಾನಮಂತ್ರಿಗಳ ಮಾತನ್ನು ತನ್ನ ಕೃತಿಯಲ್ಲೇ ನಿರಾಕರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಇದರಿಂದಾಗಿ ಇಲ್ಲಿ ಎತ್ತಿದ ಮಹತ್ವದ ಪ್ರಶ್ನೆಗಳನ್ನು ಗಂಭೀರವಾಗಿ, ಏಕಾಗ್ರತೆಯಿಂದ ಪರಿಶೀಲಿಸಲಾಗುತ್ತಿಲ್ಲ. ಇದು ದೇಶಕ್ಕೆ, ಜನತೆಗೆ ಮಾಡುತ್ತಿರುವ ಅಪಚಾರ. ಇದು ಈಗಾಗಲೇ ತಮ್ಮ ಕತ್ತಿಗಳನ್ನು ಹರಿತಗೊಳಿಸಿಕೊಳ್ಳುತ್ತಿರುವ ಕೋಮುವಾದಿ ಶಕ್ತಿಗಳಿಗೆ ನೆರವಾಗುತ್ತದಷ್ಟೇ. ಇದು ಯುಪಿಎ ರಚನೆಯ ಉದ್ದೇಶವನ್ನೇ ಈ ಮೂಲಕ ಹಾಳುಗೆಡವುತ್ತಿದೆ.

○


ಜಗದಗಲ

ಶರತ್‌ಚಂದ್ರ

'ಬದಲಾವಣೆ ವಾಶಿಂಗ್‌ಟನ್‌ನಿಂದ ಬರುವುದಿಲ್ಲ. ವಾಶಿಂಗ್‌ಟನ್‌ಗೆ ಬದಲಾವಣೆ ಬರುತ್ತಿದೆ' - ಒಬಾಮಾ

ಬರಾಕ್ ಒಬಾಮಾ ಡೆಮೊಕ್ರಾಟಿಕ್ ಪಕ್ಷದ ಅಧ್ಯಕೀಯ ಅಭ್ಯರ್ಥಿಯಾಗಿ ಅಧಿಕೃತವಾಗಿ ನಾಮಕರಣ ಆಗುವುದರೊಂದಿಗೆ ಅಮೆರಿಕದ ಅಧ್ಯಕ್ಷೀಯ ಸೆಣಸಾಟ ಆರಂಭವಾಗಿದೆ. ಜಾನ್ ಮೆಕೈನ್ ಈಗಾಗಲೇ ರಿಪಬ್ಲಿಕನ್ ಪಕ್ಷದ ಅಧ್ಯಕೀಯ ಅಭ್ಯರ್ಥಿಯಾಗಿ ನಾಮಕರಣಗೊಂಡಿದ್ದಾರೆ. ಒಬಾಮಾ ಜೊ ಬಿಡೆನ್ ಅವರನ್ನು ಉಪಾಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಕಾರ್ಮಿಕ ವರ್ಗದಿಂದ ಬಂದ 61 ವರ್ಷದ ಜೊ ಬಿಡೆನ್ ಸೆನೆಟರ್ ಆಗಿದ್ದು ವಿದೇಶ ನೀತಿಯಲ್ಲಿ ತಜ್ಞರಾಗಿದ್ದಾರೆ. ಮೆಕೈನ್ 44 ವರ್ಷದ ಸಾರಾ ಪಾಲಿನ್ ಅವರನ್ನು ಉಪಾಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಸಾರಾ ಪಾಲಿನ್ ಅಲಾಸ್ಕಾ ಪ್ರಾಂತ್ಯದ ಮೊದಲ ಮಹಿಳಾ ಗವರ್ನರ್ ಆಗಿದ್ದಾರೆ. ಸಾರಾ ಅವರ ಆಶ್ಚರ್ಯಕರ ಆಯ್ಕೆ ಹಿಲೇರಿ ಕ್ಲಿಂಟನ್ ಬೆಂಬಲಿಗರನ್ನು, ಮಹಿಳಾ ಮತದಾರರನ್ನು ಆಕರ್ಷಿಸುವ ಮತ್ತು 72 ವರ್ಷದ ಮೆಕೈನ್ ಪ್ರಾಯದ ಬಗ್ಗೆ ಇರುವ ಟೀಕೆ ಎದುರಿಸಲು ಎಂದು ಹೇಳಲಾಗಿದೆ.

ಡೆಮೊಕ್ರಾಟಿಕ್ ಪಕ್ಷದ ಸಮಾವೇಶದಲ್ಲಿ ಕೆನೆಡಿ, ಕ್ಲಿಂಟನ್ ದಂಪತಿಗಳು ಸೇರಿದಂತೆ ಹಲವು ಪ್ರಮುಖರ ಪ್ರಬಲ ಬೆಂಬಲದೊಂದಿಗೆ, ಒಬಾಮಾ 8-ವರ್ಷಗಳ ಬುಶ್ ರಿಪಬ್ಲಿಕನ್ ಆಡಳಿತಕ್ಕೆ ಸವಾಲು ಹಾಕುವ ಚುನಾವಣಾ ಪ್ರಚಾರಕ್ಕೆ ನಾಂದಿ ಹಾಕಿದ್ದಾರೆ. 75 ಸಾವಿರ ಜನ ಸೇರಿದ್ದ ಭಾರೀ ಸುದ್ದಿ ಮಾಡಿದ ಡೆಮೊಕ್ರಾಟಿಕ್ ಅಧ್ಯಕೀಯ ಅಭ್ಯರ್ಥಿ ನಾಮಕರಣ ಸ್ವೀಕಾರ ಸಮಾರಂಭದಲ್ಲಿ ಭಾಷಣ ಅಮೆರಿಕನ್ ಜನತೆಗೆ 'ಬದಲಾವಣೆ' ಯ ಕರೆ ಕೊಟ್ಟಿದ್ದಾರೆ. 'ಬದಲಾವಣೆ' ಯ ಭರವಸೆ ನೀಡಿದ್ದಾರೆ. 'ಬದಲಾವಣೆ ವಾಶಿಂಗ್ ಟನ್ ನಿಂದ ಬರುವುದಿಲ್ಲ. ವಾಶಿಂಗ್‌ಟನ್‌ಗೆ ಬದಲಾವಣೆ ಬರುತ್ತಿದೆ'. ಎಂಬುದು ಅವರ ಭಾಷಣದ ಪ್ರಭಾವಶಾಲಿ ಮಾತಿಗೆ ಉದಾಹರಣೆ. 45 ವರ್ಷದ ಹಿಂದೆ ಕರಿಯರ ಹಕ್ಕುಗಳಿಗೆ ಚಾರಿತ್ರಿಕ ಹೋರಾಟ ಆರಂಭಿಸಿದ ಮಾರ್ಟಿನ್ ಲೂಥರ್ ಕಿಂಗ್ ರ 'ನಾನೊಂದು ಕನಸ ಕಂಡೆ' ಭಾಷಣದ ದಿನವೇ ಒಬಾಮಾ ಭಾಷಣ ಇದ್ದಿದ್ದು ಮಹತ್ವದ ಘಟನೆ.



ಒಬಾಮಾ ತಮ್ಮ ಭಾಷಣದಲ್ಲಿ ದೇಶದ ಆರ್ಥಿಕತೆಯನ್ನು ಮತ್ತು ಜಗತ್ತಿನಲ್ಲಿ ಅಮೆರಿಕದ ಪ್ರತಿಷ್ಠೆಯನ್ನು ಅಧೋಗತಿಗೆ ಒಯ್ದ ರಿಪಬ್ಲಿಕನ್ ನೀತಿಗಳನ್ನು ಬದಲಾಯಿಸಲು ಅವರು ಕರೆ ಕೊಟ್ಟರು. ಸರ್ಕಾರ ಜನಸಮೂಹಗಳ ಪರವಾಗಿ ಕೆಲಸ ಮಾಡಬೇಕು. ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಅಲ್ಲ. ಎಂದು ಪ್ರತಿಪಾದಿಸಿದರು. ಶಿಕ್ಷಣ-ಆರೋಗ್ಯ ನೀತಿಯಿಂದ ಹಿಡಿದು ಪರಿಸರ-ಶಕ್ತಿ ವರೆಗೆ ಬದಲಿ ನೀತಿಗಳ ಬಗ್ಗೆ ಮಾತನಾಡಿದ್ದಾರೆ. ಇರಾಕ್ ಯುದ್ಧ ಜವಾಬ್ದಾರಿಯುತವಾಗಿ ಕೊನೆಗೊಳಿಸುವ, ಶೀಘ್ರ ಸೈನ್ಯ ವಾಪಸು ಕರೆಸುವ ಭರವಸೆ ನೀಡಿದ್ದಾರೆ. ಆ ಮೂಲಕ ಅವರು ಬರಿಯ ಜನಪ್ರಿಯ ಭಾಷಣಕಾರ ಮಾತ್ರವಲ್ಲ. ಗಂಭೀರ ನೀತಿಗಳನ್ನು ಜನತೆಗೆ ಒಯ್ಯಬಲ್ಲ ನಾಯಕರಾಗಿ ಮುಂದೆ ಬಂದಿದ್ದಾರೆ. ಬುಶ್ ರ ದುರಂತಕಾರಿ ನೀತಿಗಳಲ್ಲಿ ಶೇ.90 ಸರಿಯಾದ್ದು ಎಂದು ಹೇಳುವ ಮೆಕೈನ್ ತಪ್ಪು 'ಅನುಭವ' ದಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದ್ದಾರೆ. ಆ ಮೂಲಕ ಒಬಾಮಾ 'ಅನುಭವ' ದ ಕೊರತೆಯ ಮೆಕೈನ್ ಟೀಕೆಗೆ ತಕ್ಕ ಉತ್ತರ ನೀಡಿದ್ದಾರೆ. ಮೆಕೈನ್ ಜನತೆಯ ದೈನಂದಿನ ಕಾಳಜಿ ಗೊತ್ತಾಗದಷ್ಟು ಜನತೆಯಿಂದ ದೂರ ಇದ್ದಾರೆ ಎಂದು ಅವರ ಕಟು ಟೀಕೆ ಮಾಡಿದ್ದಾರೆ.

ಅಮೆರಿಕದ ಅಧ್ಯಕೀಯ ಚುನಾವಣೆಗಳು ಯಾವತ್ತೂ ಜಗತ್ತಿನಾದ್ಯಂತ ಕುತೂಹಲ ಕೆರಳಿಸಿವೆ. ಯಾಕೆಂದರೆ ಅಮೆರಿಕದ ಅಧ್ಯಕ್ಷರ ನೀತಿಗಳು ಇಡೀ ಜಗತ್ತಿನ ಮೇಲೆ ಪರಿಣಾಮ ಬೀರುತ್ತವೆ. ಮೊದಲ ಬಾರಿ ಕರಿಯ ವ್ಯಕ್ತಿ ಪ್ರಮುಖ ಪಕ್ಷವೊಂದರ ಅಧ್ಯಕೀಯ ಅಭ್ಯರ್ಥಿಯಾದದ್ದು ಸ್ವಾಬಾವಿಕವಾಗಿ ಇದು ಇನ್ನಷ್ಟು ಹೆಚ್ಚು ಕುತೂಹಲ ಕೆರಳಿಸಿದೆ. ಯುರೋಪು ಆಫ್ರಿಕ ಮತ್ತು ಅರಬ್ ದೇಶಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಅವರಿಗೆ ಶೇ.65 ಕ್ಕಿಂತ ಹೆಚ್ಚು ಬೆಂಬಲ ವ್ಯಕ್ತವಾಗಿದೆ. ಇದಕ್ಕೆ ಒಬಾಮಾ ಕರಿಯ, ಮುಸ್ಲಿಂ, ಆಫ್ರಿಕನ್ ಮೂಲದವರು, ಏಶ್ಯಾದಲ್ಲಿ ವಾಸಿಸುವ ಮೂಲಕ ಜಾಗತಿಕ 'ಅನಭವ'ವಿರುವವ ಎಂಬುದು ಮಾತ್ರವಲ್ಲ.

ಕಳೆದ 8 ವರ್ಷಗಳಲ್ಲಿ ಬುಶ್ ದೇಶ ಮತ್ತು ಜಗತ್ತಿಗೆ ಮಾಡಿದ ಅನಾಹುತ ಮತ್ತು ಸೃಷ್ಟಿಸಿದ 'ಭಯಭೀತ' ವಾತಾವರಣದಿಂದ ಬೇಸತ್ತವರಿಗೆ ಒಬಾಮಾ 'ಬದಲಾವಣೆ'ಯ ಮಾತೇ ಆಕರ್ಷಕ ಎನಿಸಿದೆ. ಒಬಾಮಾ 'ಬದಲಾವಣೆ' ಯ ಪ್ರಸ್ತಾಪ ಬಹಳ ಸೀಮಿತ. ಅಧ್ಯಕ್ಷರಾಗಿ ಗೆದ್ದರೆ ಆ ಸೀಮಿತ ಬದಲಾವಣೆಯನ್ನು ಮಾಡಲೂ ಅಮೆರಿಕದ ಪ್ರಬಲ ಆಳುವ ವರ್ಗದ ಶಕ್ತಿಗಳು ಬಿಡದೆ ಹೋಗಬಹುದು. ಆದರೆ ಬಲಪಂಥೀಯ ಅತಿವಾದಕ್ಕೆ ದೊಡ್ಡ ಹೊಡೆತ ಕೊಡಲಿದೆ. ಜಗತ್ತಿನಾದ್ಯಂತ 'ಬದಲಾವಣೆ' ಯತ್ತ ಪ್ರಮುಖ ಚಾಲನೆ ಕೊಡಲಿದೆ. ಹೊಸ ಸಾಧ್ಯತೆಗಳತ್ತ ತೆರೆದುಕೊಳ್ಳಬಹುದು.

ಒಬಾಮಾ ಪ್ರಚಾರ ಅಮೆರಿಕನ್ ಅಧ್ಯಕ್ಷೀಯ ಚುನಾವಣೆಯ ಮಾಮೂಲಿ ಮಾಧ್ಯಮ ಸರ್ಕಸ್ ಮತ್ತು ವೈಯಕ್ತಿಕ ವರ್ಚಸ್ಸಿನ ಮಾರಾಮಾರಿಯನ್ನು ಮೀರಿ, ಗಮನಾರ್ಹ ಚರ್ಚೆಗಳಿಗೆ ಆಸ್ಪದ ಕೊಡಬಹುದು. ಯುವಜನತೆ ಸೇರಿದಂತೆ ಹೊಸ ರಾಜಕೀಯ ಶಕ್ತಿ ಮತ್ತು ಚಲನೆಗಳಿಗೆ ನಾಂದಿಯಾಗಬಹುದು. ಅಮೆರಿಕನ್ ಜನತೆಯನ್ನು ಹಿಮ್ಮೆಟ್ಟಿಸುತ್ತಾ, ದುರ್ಬಲಗೊಳಿಸುತ್ತಾ ಬರುವ ಆಳುವ ವರ್ಗದ ರಾಜಕೀಯ ದಾಳಿಯ ಸತತ ಮುನ್ನಡೆಯನ್ನು ಕನಿಷ್ಠ ನಿಲ್ಲಿಸಬಹುದು.


ಧಗಧಗಿಸುತ್ತಿರುವ ಒರಿಸ್ಸಾ...

ಪುಟ 7ರಿಂದ

ಕಾರಣವಾಗಿರಬಹುದು ಎಂಬ ಗುಮಾನಿಗಳಿವೆ. ಒಂದು ವೇಳೆ ಇದೇ ಸತ್ಯವಾಗಿದ್ದಲ್ಲಿ ಮೂಲ ಸ್ವರೂಪವೇ ಬೇರೆಯಾಗಲಿದೆ. ಮೂಲಭೂತವಾದವಂತೂ ಕಾರಣವಾಗಿರಲು ಸಾಧ್ಯವಾಗಿರುವುದಿಲ್ಲ. ಪೀಪಲ್ಸ್ ಲಿಬರೇಷನ್ ರೆವುಲ್ಯೂಷನರಿ ಗ್ರೂಪ್ ಮತ್ತು ಸ್ವಾಮೀಜಿ ನಡುವೆ ವೈಯಕ್ತಿಕ ಕಾರಣಗಳು ಇರಲೂಬಹುದು ಎಂಬ ಶಂಕೆ ಸಹಜವಾಗಿ ಮೂಡುತ್ತವೆ. 2007ರ ಡಿಸೆಂಬರ್‌ನಲ್ಲಿ ಲಕ್ಷ್ಮಣಾನಂದರ ಹತ್ಯೆಗೆ ಪ್ರಯತ್ನ ನಡೆಸಲಾಗಿತ್ತು. ಆಗಲೂ ಸಹ ಸಂಘಪರಿವಾರ ತನ್ನ ಸ್ವಾರ್ಥ ಹಿತಾಸಕ್ತಿಗಾಗಿ ಕೋಮು ಗಲಭೆಗಳನ್ನು ಹಬ್ಬಿಸಿತ್ತು. ಈಗಲೂ ಅದೇ ಕೆಲಸದಲ್ಲಿ ನಿರವಾಗಿದೆ.

ಒರಿಸ್ಸಾ ಅತಿ ಹೆಚ್ಚಿನ ಬುಡಕಟ್ಟು ಮತ್ತು ಆದಿವಾಸಿಗಳನ್ನು ಹೊಂದಿರುವ ರಾಜ್ಯವಾಗಿದೆ. ನೈಸರ್ಗಿಕ ಸಂಪನ್ಮೂಲಗಳಿಂದ ತುಂಬಿತುಳುಕುತ್ತಿದ್ದು, ಪೋಸ್ಕೊ, ಆರ್ಸೆಲೊಮಿತ್ತಲ್‌ನಂತಹ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು ರಾಜ್ಯದ ಮೇಲೆ ಬಿದ್ದಿದೆ. ಇದಿಷ್ಟೆ ಅಲ್ಲ ಅನಕ್ಷರತೆ, ಬಡತನ, ನಿರುದ್ಯೋಗ, ಅನಾರೋಗ್ಯ ದಂತಹ ಸಮಸ್ಯೆಗಳು ಅಲ್ಲಿನ ಜನತೆಯನ್ನು ನಿರಂತರವಾಗಿ ಕಾಡುತ್ತಿವೆ. ಹಲವಾರು ಜಿಲ್ಲೆಗಳಲ್ಲಿ ಹಣ ಪಾವತಿಸಿ ಕುಡಿವ ನೀರನ್ನು ಖರೀದಿಸುವಂತಹ ಪರಿಸ್ಥಿತಿ. ಈ ಕುರಿತು ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳದಿರುವ ಸಂಘಪರಿವಾರದವರು, ಗ್ರಾಮೀಣ ಪ್ರದೇಶಗಳಲ್ಲಿ ಬುಡಕಟ್ಟುಜನ, ಆದಿವಾಸಿಗಳಿಗೆ ಶಿಕ್ಷಣ, ಆರೋಗ್ಯ ಸೇವೆಗಳನ್ನು ಒದಗಿಸುತ್ತಿರುವ ಕ್ರೈಸ್ತ ಮಿಷನರಿಗಳ ಮೇಲೆ ಹವ್ಯಾಹತವಾಗಿ ಧಾಳಿಗಳನ್ನು ನಡೆಸುತ್ತಿದ್ದಾರೆ.

ಗಲಭೆ ಪ್ರದೇಶಕ್ಕೆ ಭೇಟಿ ನೀಡಿದ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಪ್ರಕಾಶ್ ಜೈಸ್ವಾಲ್ ರಾಜ್ಯ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಸೂಕ್ತ ಸಮಯಕ್ಕೆ ಸಮರ್ಪಕ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಟೀಕಿಸಿದ್ದಾರೆ. ಒಂದೆಡೆ ಇದು ಸತ್ಯವಾದರೂ ಜವಾಬ್ದಾರಿಯಿಂದ ನುಣಚಿಕೊಳ್ಳುವ ತಂತ್ರವೂ ಆಗಿದೆ. ಆಯಾ ರಾಜ್ಯಗಳಲ್ಲಿ ಏನಾಗುತ್ತಿದೆ ಎಂಬ ಕುರಿತು ರಾಜ್ಯಪಾಲರಿಂದ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂಬುದನ್ನೇ ಅವರು ಮರೆತಂತಿದ್ದಾರೆ. ಪಶ್ಚಿಮ ಬಂಗಾಳ ಅಥವಾ ಕೇರಳಗಳಲ್ಲಿ ಒಂದೆರಡು ಗ್ರಾಮಗಳಲ್ಲಿ ಘರ್ಷಣೆಗಳು ನಡೆದರೆ ರಾಜ್ಯಪಾಲರಿಂದ ವರದಿ ತರಿಸಿಕೊಂಡು ಅಲ್ಲಿನ ಸರ್ಕಾರಗಳನ್ನು ವಜಾ ಮಾಡುವಂತೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವ ಕೇಂದ್ರ ಸರ್ಕಾರ ಈಗ ತನ್ನದೇನೂ ಪಾತ್ರ ಇಲ್ಲ ಎಂಬಂತೆ ವರ್ತಿಸುತ್ತಿದೆ. ಅಮೆರಿಕದ ಬೂಟು ನೆಕ್ಕುತ್ತಿರುವ ಯುಪಿಎ ಸರ್ಕಾರಕ್ಕೆ ದೇಶದೊಳಗೆ ನಡೆಯುತ್ತಿರುವ ಇಂತಹ ಘಟನೆಗಳು ಪ್ರಮುಖ ವಿಷಯಗಳೇ ಅಲ್ಲ.



ಸೂರಿಯವ ಜನ್ಮದಿನಾಚರಣೆಯಂದು ಉದ್ಘಾಟನೆಯಾದ 'ಸೂರಿಭವನ'. ಕೆ.ಆರ್.ಪುರಂ ಪ್ರದೇಶದ ಉದಯ ನಗರದಲ್ಲಿರುವ ಸಿಪಿಐ(ಎಂ) ಪೂರ್ವವಲಯ ಸಮಿತಿ ಮಾಲೀಕತ್ವದ ಈ ಭವನವನ್ನು ಸಿಪಿಐ(ಎಂ)ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಸೀತಾರಾಂ ಯೆಚೂರಿ ಉದ್ಘಾಟಿಸಿದರು.

ಬೆಂಗಳೂರಿನ ಕಾರ್ಮಿಕರಿಂದ ಸೂರಿ ಜನ್ಮದಿನದ 'ಸಂಕಲ್ಪ' ರಕ್ತದಾನ ಶಿಬಿರ


ಬೆಂಗಳೂರು ಇಂದು ಅತಿ ದೊಡ್ಡ ನಗರವಾಗಿ ದೇಶ ಹಾಗೂ ವಿಶ್ವದಲ್ಲಿ ದೊಡ್ಡ ಹೆಸರು ಪಡೆದಿದೆ. ಈ ಬೆಳವಣಿಗೆಗೆ ಮುಖ್ಯ ಕಾರಣ ಇಲ್ಲಿಯ ಕಾರ್ಮಿಕ ವರ್ಗ ಕಾರ್ಮಿಕರು ತಮ್ಮ ದುಡಿತದಿಂದಾಗಿ ಈ ನಗರವನ್ನು ಕಟ್ಟಿ ಬೆಳೆಸಿದ್ದಾರೆ. ಬೆಂಗಳೂರಿನಲ್ಲಿ ಬೆಳವಣಿಗೆ ಹಂತ ಪ್ರಾರಂಭವಾಗುವ ಸಮಯದಿಂದಲ್ಲಿ ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಹಜವಾಗಿ ಅದು ಕಾರ್ಮಿಕ ವರ್ಗದ ಶೋಷಣೆ ಜೊತೆ ಜೊತೆಯಲ್ಲಿ ಪ್ರಾರಂಭವಾಗುತ್ತದೆ. ಶೋಷಣೆಯ ವಿರುದ್ಧ, ಬಂಡವಾಳಶಾಹಿ, ಅಧಿಕಾರಶಾಹಿ, ಪ್ರಭುತ್ವದ ವಿರುದ್ಧ ರಾಜಿ ರಹಿತವಾದ ಹೋರಾಟದ ನಾಯಕರಾಗಿ ಕಾರ್ಮಿಕರ ಪರವಾದ ದೊಡ್ಡ ಧ್ವನಿಯನ್ನು ಎತ್ತಿದ ಜನನಾಯಕ ಕಾಂ॥ ಎಸ್.ಸೂರ್ಯನಾರಾಯಣರಾವ್‌ರವರು.

ಕಾಂ॥ ಸೂರ್ಯನಾರಾಯಣರಾವ್‌ರವರು ಇಂದು ನಮ್ಮೊಂದಿಗಿಲ್ಲ, ಆದರೆ ಅವರು ಕಂಡ ಚಳುವಳಿಯ ಜೀವನ, ಕನಸುಗಳು, ಆದರ್ಶಗಳು, ಹೋರಾಟದ ಕಿಚ್ಚು, ಚಳುವಳಿಯನ್ನು ಮುಂದೊಯ್ಯುವ ನಾಯಕತ್ವದ ತಂಡ, ಅವರ ಅಸಂಖ್ಯಾತ ಅಭಿಮಾನಿಗಳು ನಮ್ಮೊಂದಿಗಿದ್ದು ಅವರೊಂದಿಗೆ ಕಾಂ॥ ಸೂರಿಯವರ ಕಂಡ ಶೋಷಣೆ ರಹಿತ ಸಮಾಜ, ಕಾರ್ಮಿಕ ವರ್ಗದ ಸಮಾಜದ ಪರವಾದ ಚಳುವಳಿಯ ಅಡಿಯಲ್ಲಿ ಕಾರ್ಮಿಕರನ್ನು ಕೊಂಡೊಯ್ಯಲು ಕಾಂ॥ ಸೂರಿಯವರ 84ನೇ ಜನ್ಮದಿನಾರಣೆಯನ್ನು ಬೆಂಗಳೂರಿನ ಕಾರ್ಮಿಕ ವರ್ಗವು ಹಮ್ಮಿಕೊಂಡಿತ್ತು.

ಇಂದು ಬೆಲೆ ಏರಿಕೆ, ರೈತರ ಆತ್ಮಹತ್ಯೆ, ಕಾರ್ಮಿಕರಿಗೆ ಸರಿಯಾಗಿ ಕನಿಷ್ಟ ಕೂಲಿ ಇಲ್ಲದಿರುವುದು, ಶಿಕ್ಷಣದ ವ್ಯಾಪಾರೀಕರಣ, ನಿರುದ್ಯೋಗ ಜನತೆಯ ಹಲವು ಸಮಸ್ಯೆಗಳಿಗಾಗಿ ಅಸಂಘಟಿತ ಕಾರ್ಮಿಕರಿಗೆ ರಾಜ್ಯವ್ಯಾಪಿ ಸಮಾನ ಕನಿಷ್ಟ ಕೂಲಿಗಾಗಿ ಆಗ್ರಹಿಸುತ್ತಾ ಮಹಾನಗರ ಬೆಂಗಳೂರಿನಲ್ಲಿ ಜೀವನ ನಡೆಸುವುದೇ ಕಷ್ಟದ ಪರಿಸ್ಥಿತಿ ಇರುವಾಗ ಕಾರ್ಮಿಕರಿಗೆ ರೂ.10,000/- ಕನಿಷ್ಟ ಕೂಲಿಗಾಗಿ ಆಗ್ರಹಿಸಬೇಕಾಗಿದೆ.

ಬೆಂಗಳೂರಿ ಬೆಳವಣಿಗೆಯ ಈ ಸಂದರ್ಭದಲ್ಲಿ ಬಡವರು, ಕಾರ್ಮಿಕರು, ಮಧ್ಯಮ ವರ್ಗವು ಸೇರಿದಂತೆ ದೊಡ್ಡ ಪ್ರಮಾಣದ ಜನತೆಯೂ ಒಂದು ಸ್ವಂತ ನಿವೇಶನ ಹೊಂದುವುದೇ ಕಷ್ಟಕರವಾಗಿರುವಾಗ ಆಳುವ ವರ್ಗವು ವಸತಿ-ನಿವೇಶನ ನೀಡುವ ಬದಲು ಭೂಗಳ್ಳರು, ಶ್ರೀಮಂತರು ಮತ್ತಷ್ಟು ಬೆಳೆವಣಿಗೆಯಾಗಲು ಪ್ರೋತ್ಸಾಹಿಸುತ್ತಿದೆ. ಮತ್ತೊಂದು ಕಡೆ ಬೆಲೆ ಏರಿಕೆಯ ಬವಣೆಯಲ್ಲಿ ಜೀವನ ನಡೆಸುವುದೆ ಕಷ್ಟವಾಗಿದೆ. ಸರ್ಕಾರವು ಜನತೆಗೆ ರೇಷನ್ ವ್ಯವಸ್ಥೆ ಸಿಗದಂತೆ ಮಾಡಲು ಹಂತ ಹಂತವಾಗಿ ಕಡಿತ ಮಾಡಲು ಹೊರಟಿದೆ. ರೇಷನ್ ಅಂಗಡಿಗಳಲ್ಲಿ ಸರಿಯಾಗಿ ರೇಷನ್ ನೀಡದೆ ಕಾಳಸಂತೆಕೋರರನ್ನು ಬೆಳೆಯಲು ಬಿಟ್ಟಿದೆ. ರಾಜ್ಯದಲ್ಲಿ ಪ್ರಮಾಣದ ಕಾರ್ಡ್ ಆಗಿ ಹಸಿರು, ಹಳದಿ, ಕೆಂಪು ಎಂದು ವಿಂಗಡಿಸಿದ್ದು ಕಾರ್ಡ್ ಮಾತ್ರ ನೋಡಲು ಸುಂದರವಾಗಿದೆ. ಆದರೆ ಅದನ್ನು ಹಿಡಿದು ರೇಷನ್ ಅಂಗಡಿಗೆ ಹೊರಟಾಗ ಅಕ್ಕಿ ಇರಲಿ, ಗೋಧಿ ಇರಲಿ, ಸಕ್ಕರೆ ಇರಲಿ ಕಳಪೆಯಾಗಿರುತ್ತದೆ. ಸಿಮೆಎಣ್ಣೆಯಂತೂ ಸರಿಯಾಗಿ ಕೊಡುವುದಿಲ್ಲ, ಯೂನಿಟ್ ಪದ್ದತಿ ತಂದು ಒಬ್ಬ ಮನುಷ್ಯನ ಅವಶ್ಯಕತೆಗೆ ಬೇಕಾಗುವ ಆಹಾರಕ್ಕಿಂತ ಸುಮಾರು ಶೇ. 90 ರಷ್ಟು ಕಡಿಮೆಯಾಗಿ ಆಹಾರ ಪದಾರ್ಥವನ್ನು ನೀಡುತ್ತಿದ್ದಾರೆ.

ಅಂಸಘಟಿತ ಕಾರ್ಮಿಕರಿಗೆ ರಾಜ್ಯವ್ಯಾಪಿ ಸಮಾನ ಕನಿಷ್ಟ ಕೂಲಿಗಾಗಿ, ಬೆಂಗಳೂರಿನಲ್ಲಿ ರೂ.10.000/- ಕನಿಷ್ಟ ಕೂಲಿಗಾಗಿ, ಎಲ್ಲಾ ವಸತಿ-ನಿವೇಶನ ರಹಿತರಿಗೆ ವಸತಿ ನಿವೇಶನಕ್ಕಾಗಿ, ಸಾರ್ವತ್ರಿಕ ಪಡಿತರ ವ್ಯವಸ್ಥೆ-ರೇಷನ್ ಕಾರ್ಡ್‌ಗಾಗಿ ಹಾಗೂ ಪರವಾದ ಇತರೇ ಬೇಡಿಕೆಗಾಗಿ ಪಣತೊಟ್ಟು 'ಸಂಕಲ್ಪ' ಹೆಸರಿನಲ್ಲಿ ರಕ್ತದಾನ ಶಿಬಿರವನ್ನು ವಿನೂತನವಾದ ಕಾರ್ಯಕ್ರಮವನ್ನು ಕಾಂ॥ಸೂರಿರವರು ಹುಟ್ಟಿದ ಆಗಸ್ಟ್ 24ರಂದು



ನಗರದ ಸೆಂಟ್ ಜೋಸೆಫ್ ಕಾಲೇಜಿನ ಆವರಣದಲ್ಲಿ ನಡೆಸಲಾಯಿತು.

ಪ್ರಮುಖವಾದ ಬೇಡಿಕೆ ಇಟ್ಟು ಸಂಕಲ್ಪ ಹೆಸರಿನಲ್ಲಿ ನಡೆದ ರಕ್ತದಾನ ಶಿಬಿರವು ಇಡೀ ದಿನದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸುಮಾರು 212 ಜನ ಕಾರ್ಮಿಕರು ರಕ್ತದಾನ ಮಾಡಿದರು. ಉದ್ಘಾಟನೆಯನ್ನು ಕಾಂ॥ಸೀತಾರಾಂ ಯೆಚೂರಿರವರು ಮಾಡಿದರು. ಜಗತ್ತನ್ನು ನಿರ್ಮಿಸಿರುವುದು ದುಡಿಯುವ ಜನ. ಆದರೆ ಅವರಿಗೆ ಅವರ ನ್ಯಾಯಬದ್ಧವಾದ ಪಾಲು ಸಿಗುವುದಿಲ್ಲ. ಆಗ ಅವರು ಹೋರಾಟಕ್ಕಿಳಿಯುತ್ತಾರೆ. ರಾಜ್ಯದ ಕಾರ್ಮಿಕರು ಹಲವಾರು ತ' ಲ' ವ' ುಾ ರ' ು ಗ' ಳ' ವ' ರ' ಗ' ನೆನಪಿಟ್ಟುಕೊಳ್ಳುವಂತಹ ಧೀಮಂತ ಹೋರಾಟ ನಡೆಸಿದವರು ಸೂರ್ಯನಾರಾಯಣ ರಾವ್ ಎಂದು ಯೆಚೂರಿ ಹೇಳಿದರು. ಉದ್ಘಾಟನಾ ಕಾರ್ಯಕ್ರಮಕ್ಕೆ ಶ್ರೀಮತಿ ಯಶೋಧಾ ಸೂರ್ಯನಾರಾಣಯ ರಾವ್, ಮಕ್ಕಳು ಮತ್ತು ಅಳಿಂದಿರು, ಕಾಂ. ಜಿ.ಎನ್. ನಾಗರಾಜ್, ಆರ್.ಶ್ರೀನಿವಾಸ್, ಕಾಂ. ಎಸ್.ವೈ. ಗುರುಶಾಂತ್, ಕಾಂ. ಪ್ರಸನ್ನ ಕುಮಾರ್, ಕಾಂ.ಕೆ.ಎನ್.ಉಮೇಶ್, ಕಾಂ.ಇ.ಕೆ.ಎನ್. ರಾಜನ್, ಕಾಂ.ಪ್ರಕಾಶ್, ಮತ್ತಿತ್ತರು ಭಾಗವಹಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಕಾಂ.ವಿ.ಜೆ.ಕೆ. ನಾಯರ್‌ರವರು ವಹಿಸಿಕೊಂಡು ನಡೆಸಿ ಕೊಟ್ಟರು.

ಸ್ವಾಗತ ಕಾಂ.ಸದಾಶಿವಮೂರ್ತಿ, ನಿರೂಪಣೆ ಕಾಂ. ಟಿ.ಶಿವಶಂಕರ್, ವಂದನಾರ್ಪಣೆ ಕಾಂ. ನಂಜುಂಡರವರು ನಡೆಸಿಕೊಟ್ಟರು.

ರಕ್ತದಾನವನ್ನು ಬಡವರು, ಕಾರ್ಮಿಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೋಗುವ ಸುಮಾರು 9 ಸರ್ಕಾರಿ ಆಸ್ಪತ್ರೆಗಳಿಗೆ ನೀಡಲಾಯಿತು. ಕಾಂ. ಸೂರಿರವರ ಬದುಕಿನ ಹೋರಾಟದ ಬದುಕಿನ ಛಾಯಾಚಿತ್ರ ಪ್ರದರ್ಶನ, ಜನಾರ್ಧನ್ (ಜನ್ನಿ) ರವರಿಂದ ಹೋರಾಟದ ಹಾಡುಗಳು, ಪುಸ್ತಕ ಪ್ರದರ್ಶನ ಕಾರ್ಯಕ್ರಮವು ನಡೆಯಿತು, ಇಡೀ ದಿನದ ಕಾರ್ಯಕ್ರಮದಲ್ಲಿ ಪ್ರಮುಖ ಕಾರ್ಖಾನೆಗಳ ಕಾರ್ಮಿಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಪೂರ್ವ ಸುಮಾರು ಒಂದು ತಿಂಗಳ ಮುಂಚಿತವಾಗಿಯೇ ನಗರದ ಮೈಕೋ ನಾಗನಾಥಪುರ ಆಡುಗೋಡಿ ಘಟಕಗಳು, ಬಿಎಚ್‌ಇಎಲ್, ಬಿಇಎಲ್, ಬಿಇಎಂಎಲ್, ಎಲ್ ಅಂಡ್ ಟಿ, ಐಟಿಸಿ, ಎಸ್ಕಾರ್ಟ್ಸ್, ಸೇರಿದಂತೆ ಇತರೆ ಕಾರ್ಮಿಕರು ಒಳಗೊಂಡು ಕೆಲಸದಲ್ಲಿ ತೊಡಗಿಗೊಂಡರು.

○

ಒಲಂಪಿಕ್ಸ್‌ಗೆ ತೆರೆ ....

ಪುಟ 16 ರಿಂದ

ಪ್ರೋತ್ಸಾಹವನ್ನು ನೀಡುತ್ತಿಲ್ಲ. ಬರುವ ಒಂದೋ, ಎರಡೋ ಪದಕಗಳನ್ನೇ ಐತಿಹಾಸಿಕ ದಾಖಲೆ ಎಂದುಕೊಂಡು ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುತ್ತಿದ್ದೇವೆ. ಇದು ಬದಲಾಗಬೇಕಿದೆ.

ಕ್ರೀಡೆಯಲ್ಲಿನ ಸಾಧನೆ ಆ ದೇಶದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಮೇಲೆ ಬೆಳಕು ಚೆಲ್ಲುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಪರಿಸ್ಥಿತಿಯನ್ನು ಮೆಲುಕು ಹಾಕಿದಾಗ ಶೇ.78ರಷ್ಟು ಜನ ದಿನಕ್ಕೆ ಕೇವಲ 20 ರೂಪಾಯಿ ಆದಾಯದಲ್ಲಿ ಬದುಕುತ್ತಿದ್ದಾರೆ ಎಂಬ ಅಂಕಿಅಂಶಗಳು ಇರುವಾಗ ಎಷ್ಟರಮಟ್ಟಿಗೆ ಕ್ರೀಡಾಸಕ್ತಿ ವಹಿಸಲು ಸಾಧ್ಯ.

ಚಿನ್ನದ ಮೀನು ಅಮೇರಿಕಾದ ಮೈಕೆಲ್‌ಪೆಲ್ಪ್ಸ್ ಈಜು ಸ್ಪರ್ಧೆಯಲ್ಲಿ 8 ಚಿನ್ನದ ಪದಕಗಳನ್ನು ಕೊಳ್ಳೆ ಹೊಡೆದಾತ. ಈತ ದಿನಕ್ಕೆ 12 ಸಾವಿರ ಕ್ಯಾಲೋರಿ ಆಹಾರ ಸೇವಿಸುತ್ತಾನಂತೆ. ವಾರದಲ್ಲಿ 81 ಗಂಟೆ ಈಜುವುದರಲ್ಲೇ ಕಳೆಯುತ್ತಾನೆ. ಇನ್ನುಳಿದ ಸಮಯವನ್ನು ವ್ಯಾಯಾಮ ಶಾಲೆಗಳಲ್ಲಿ ಕಳೆಯುತ್ತಾನೆ. ಈತನಿಗಿರುವ ಅವಕಾಶ/ಸಾಮರ್ಥ್ಯ ನಮ್ಮ ದೇಶದ ಎಷ್ಟು ಮಂದಿ ಯುವ ಜನರಿಗಿದೆ....? ಅಪೌಷ್ಠಿಕತೆಯಿಂದ ಬಳಲುವವರ ಪಟ್ಟಿಯಲ್ಲಿ ಭಾರತ ಮೊದಲ ಸಾಲಿನಲ್ಲಿರುವಾಗ ಒಂದು ದಿನಕ್ಕೆ 12 ಸಾವಿರ ಕ್ಯಾಲೋರಿ ಆಹಾರವನ್ನು ತಿನ್ನುವುದು ಎಲ್ಲಿಂದ ಸಾಧ್ಯವಾಗಬೇಕು.

ಇನ್ನಾದರೂ ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ ಎಂಬ ಸತ್ಯವನ್ನು ಅರಿಯಬೇಕು. ಮಾತ್ರವಲ್ಲ ಚೀನಾ ನಮಗೆ ಮಾದರಿಯಾಗಬೇಕು. ಸಮಗ್ರವಾದ ಕ್ರೀಡಾನೀತಿ, ರಾಷ್ಟ್ರೀಯ ಯುವನೀತಿ ಅತ್ಯಗತ್ಯವಾಗಬೇಕಿದೆ. ಕ್ರೀಡಾರಂಗವನ್ನು ಆದ್ಯತೆಯ ಕ್ಷೇತ್ರವಾಗಿ ಪರಿಗಣಿಸಬೇಕಿದೆ. ಹೆಚ್ಚಿನ ಹಣಕಾಸಿನ ನೆರವಿನ ಅಗತ್ಯವಿದೆ. ಆಗ ಮಾತ್ರವೇ ಹಲವು ಬಿಂದ್ರಾರನ್ನು ಭಾರತ ಕಾಣಲು ಸಾಧ್ಯ.

ಮಂಕಾಗಿರುವ ಅಮೇರಿಕಾ......!

ಈ ಹಿಂದಿನ ಒಲಿಂಪಿಕ್ಸ್‌ಗಳಲ್ಲಿ ಪಾರುಪತ್ಯ ಮೆರೆಯುತ್ತಿದ್ದ ಅಮೇರಿಕಾ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ತುಸು ಮಂಕಾಗಿದ್ದಂತೂ ಸತ್ಯ. ಒಟ್ಟು ಪದಕಗಳ ದೃಷ್ಟಿಯಿಂದ 110 ಪದಕಗಳನ್ನು ಗಳಿಸಿದ್ದರೂ ಕೂಡ ಚಿನ್ನಗಳನ್ನು ಗೆಲ್ಲುವಲ್ಲಿ ಹಿಂದೆಬಿದ್ದಿದೆ. ಚಿನ್ನದ ಮೀನು ಮೈಕಲ್ ಪೆಲ್ಪ್ಸ್ ದಾಖಲೆಯ 8 ಚಿನ್ನ ತಂದುಕೊಡದಿದ್ದರೆ ಪದಕ ಪಟ್ಟಿಯಲ್ಲಿ ಇನ್ನಷ್ಟು ಕೆಳಗಿಳಿಯಬೇಕಿತ್ತು.

ಬಿಜೆಪಿ-ಅಮೇರಿಕಾ ನಡುವಿನ ಸಾಮ್ಯತೆ!

ಆಶ್ಚರ್ಯವಾದರೂ ಇದು ಸತ್ಯ. ಬಿಜೆಪಿ ರಾಜ್ಯದಲ್ಲಿ ಅಧಿಕಾರದ ಹುಚ್ಚು ಆಸೆಗಾಗಿ ಇತರೆ ರಾಜಕೀಯ ಪಕ್ಷಗಳ ಶಾಸಕರುಗಳಿಗೆ ಕೋಟ್ಯಾಂತರ ರೂಪಾಯಿ ಹಣ, ಅಧಿಕಾರದ ಆಮಿಷ ಒಡ್ಡಿ ಶಾಸಕರನ್ನು ಖರೀದಿ ಮಾಡುತ್ತಿರುವಾಗಲೇ ಅತ್ತ ಅಮೇರಿಕಾ ಬಾಕ್ಸಿಂಗ್‌ನಲ್ಲಿ ತಾ ಮುಂದು ಎಂದು ತೋರಿಸಲು ಬಾಕ್ಸಿಂಗ್ ತವರು ಕ್ಯೂಬಾದ 5 ಅಂತರಾಷ್ಟ್ರೀಯ ಬಾಕ್ಸಿಂಗ್ ಪಟುಗಳನ್ನು ಹಣದ ಆಮಿಷ ಒಡ್ಡಿ ಅವರನ್ನು ಖರೀದಿ ಮಾಡಿದೆ. ಇಂಥ ಅನೈತಿಕ ಮಾರ್ಗಗಳಿಗೆ ಹೆಸರುವಾಸಿಯಾಗಿರುವ ಅಮೇರಿಕಾ ಸಮಾಜವಾದಿ ಚೀನಾವನ್ನು ಹಿಂದಿಕ್ಕಲು ಸಾಧ್ಯವಾಗಲಿಲ್ಲ.

ಮಿನುಗುತ್ತಿರುವ ಪುಟ್ಟ ಹಣತೆ

ಅಮೇರಿಕಾ ದರ್ಪ ದೌರ್ಜನ್ಯದ ನಡುವೆಯೂ ಉತ್ತಮ ಸಾಧನೆಗಳನ್ನು ಮಾಡುತ್ತಿರುವ ಪುಟ್ಟ ಕ್ಯೂಬಾ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ 26 ಪದಕಗಳನ್ನು ಗಳಿಸಿದೆ. ವಿಶ್ವ ಭೂಪಟದಲ್ಲಿ ಮಿರಮಿರ ಮಿನುಗುತ್ತಿದೆ. ತನ್ನ ದೇಶದ ಬಾಕ್ಸರ್‌ಗಳನ್ನು ಅಮೇರಿಕಾ ಖರೀದಿ ಮಾಡಿಕೊಂಡಿರುವ ನಡುವೆಯೂ ಸಮಾಜವಾದಿ ಕ್ಯೂಬಾ ಅಂಜದೆ ಒಲಿಂಪಿಕ್ಸ್‌ನಲ್ಲಿ ದೇಶದ ಮಟ್ಟಿಗೆ ಉತ್ತಮ ಸಾಧನೆಯನ್ನೇ ತೋರಿದೆ.

ಒಲಿಂಪಿಕ್ಸ್ ಉದ್ಘಾಟನೆಯಿಂದ ಸಮಾರೋಪದವರೆಗೆ ಎಲ್ಲವನ್ನೂ ಅಚ್ಚುಕಟ್ಟಾಗಿ ನಡೆಸಿಕೊಟ್ಟು, ಕ್ರೀಡಾಪಟುಗಳಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದ ರೀತಿಯಲ್ಲಿ ಅತ್ಯಂತ ಜಾಗರೂಕತೆಯಿಂದ ನಿರ್ವಹಿಸಿದ್ದರ ಬಗ್ಗೆ ಜಗತ್ತಿನಾದ್ಯಂತ ಚೀನಾಕ್ಕೆ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ಈ ಹಿಂದಿನ ಒಲಿಂಪಿಕ್ಸ್ ಕ್ರೀಡಾಕೂಟಗಳಲ್ಲಿ ಆದ ತಪ್ಪುಗಳನ್ನು ಅಧ್ಯಯನ ನಡೆಸಿ ಕನಿಷ್ಟ ಸಣ್ಣ ತೊಡಕು ಆಗದಂತೆ ಎಚ್ಚರ ವಹಿಸುತ್ತಿದಲ್ಲದೆ ಕ್ರಿಡಾಪಟುಗಳಿಗೆ ಅತ್ಯಾಧುನಿಕವಾದ ಹಾಗೂ ಗುಣಮಟ್ಟದ ಕ್ರೀಡಾ ಸಾಮಗ್ರಿಗಳನ್ನು ಒದಗಿಸಿ ಕ್ರೀಡಾಪಟುಗಳಿಂದಲೂ ಚೀನಾ ಮೆಚ್ಚುಗೆಗೆ ಪಾತ್ರವಾಗಿದೆ. ಇಂಥ ಒಂದು ಅದ್ಭುತಕ್ಕೆ ಮುನ್ನುಡಿ ಬರೆದ ಚೀನಾಕ್ಕೆ ಕೆಂಪು ನಮನಗಳು. ಮರಾತನ ನಗರಿ ಲಂಡನ್ 2012 ರ 30ನೇ ಒಲಿಂಪಿಕ್ಸ್ ಕ್ರೀಡಾಕೂಟ ಸಂಘಟಿಸಲು ಸಜ್ಜಾಗುತ್ತಿದೆ. ಭಾರತ ಈ ವೇಳೆಗಾದರೂ ಫಲ ಪಡೆಯಲು ಬಿತ್ತನೆ ಹಾಕುವುದು ಅಗತ್ಯವಾಗಿದೆ.

JANASHAKTHI KANNADA VARA PATRIKE SEPTEMBER7, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09



ಒಲಂಪಿಕ್ಸ್‌ಗೆ ತೆರೆ : ಸ್ಫೂರ್ತಿಯ ಸೆಲೆಯಾದ ಚೀನಾ

ಅಂಗರಾಜು

ಹಕ್ಕಿಗೂಡಿನಲ್ಲಿ ಕ್ರೀಡಾಹಕ್ಕಿಗಳ ಕಲರವ ನಿಂತಿದೆ. 29ನೇ ಬೀಜಿಂಗ್ ಒಲಿಂಪಿಕ್ಸ್ ವರ್ಣರಂಜಿತ ತೆರೆ ಕಂಡಿದೆ. ಮೊದಲ ಬಾರಿಗೆ 81 ದೇಶಗಳು ಪದಕದ ರುಚಿ ನೋಡಿವೆ. ಚೀನಾ ವಿಶ್ವ ದಾಖಲೆಯ ಕ್ರೀಡಾಕೂಟ ಸಂಘಟಿಸಿ ಇಡೀ ವಿಶ್ವವನ್ನೇ ನಿಬ್ಬೆರಗಾಗಿಸಿದೆ. ಮಾತ್ರವಲ್ಲ ಪದಕಗಳ ಪಟ್ಟಿಯಲ್ಲಿ ಅಗ್ರ ಪಂಕ್ತಿ ಕಾಯ್ದುಕೊಂಡು ತಲೆ ಎತ್ತಿ ನಿಂತಿದೆ. ಭಾರತವೂ ಮೊದಲ ಬಾರಿಗೆ ಒಲಂಪಿಕ್ಸ್‌ನಲ್ಲಿ ತನ್ನ (ಅಲ್ಪ)ಸ್ಥಾನ ಉತ್ತಮಪಡಿಸಿಕೊಂಡಿದೆ. ಇನ್ನೊಂದೆಡೆ ಜಗತ್ತಿನ ಹಿರಿಯಣ್ಣನಂತೆ ವರ್ತಿಸುವ ಅಮೇರಿಕಾ ಕೊಂಚ ಮಸುಕಾಗಿದೆ. ಇವು ಒಲಿಂಪಿಕ್ಸ್ ಇತಿಹಾಸದಲ್ಲಿ ಆದ ಮಹತ್ತರ ಬದಲಾವಣೆಗಳೆಂದೇ ಹೇಳಬಹುದು.

ಈ ಮಹತ್ತರ ಬದಲಾವಣೆಗಳ ನಡುವೆ ಹಲವು ಗಂಭೀರ ಪ್ರಶ್ನೆಗಳು ಹುಟ್ಟಿಕೊಂಡಿರುವುದೂ ಸತ್ಯ.

ಚೀನಾ ಪದಕ ಬೇಟೆಯ ನಾಗಾಲೋಟ..... ಏಕೆ?

ಹೀಗೊಂದು ಪ್ರಶ್ನೆ ಎಲ್ಲರನ್ನೂ ಕಾಡಿರುವುದರಲ್ಲಿ ಆಶ್ಚರ್ಯ ಪಡಬೇಕಿಲ್ಲ. ಕೆಲವರು ಇದಕ್ಕೆ ತೀರ ಬಾಲಿಶತನ ಉತ್ತರಗಳನ್ನು ಕೊಟ್ಟಿದ್ದಾರೆ. ಚೀನಾದಲ್ಲಿ ಜನಸಂಖ್ಯೆ ಹೆಚ್ಚಿದೆ, ಹೀಗಾಗಿ ಪದಕ ಗೆದ್ದಿದ್ದಾರೆ ಎಂದು. ಒಂದು ವೇಳೆ ಈ ವಿಶ್ಲೇಷಣೆ ನಿಜವೇ ಆಗಿದ್ದಲ್ಲಿ ಭಾರತ ಪದಕ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರಬೇಕಿತ್ತು. ಆದರೆ 49ನೇ ಸ್ಥಾನಕ್ಕಿಳಿಯಬೇಕಾಯಿತು. ಹೀಗಾಗಿ ವಾಸ್ತವದತ್ತ ದೃಷ್ಟಿ ಹಾಯಿಸುವುದು ಅಗತ್ಯವೆನಿಸುತ್ತದೆ.

ಚೀನಾ 1988 ರ ಒಲಿಂಪಿಕ್ಸ್‌ನಲ್ಲಿ ಕೇವಲ 25 ಪದಕಗಳನ್ನು ಗಳಿಸಿತ್ತು. ಇದರಲ್ಲಿ 5 ಚಿನ್ನದ ಪದಕಗಳು ಮಾತ್ರ. 2008ರ ಒಲಿಂಪಿಕ್ಸ್‌ನಲ್ಲಿ 51 ಚಿನ್ನಗಳ ಜೊತೆಯಲ್ಲಿ 101 ಪದಕಗಳನ್ನು ತನ್ನದಾಗಿಸಿಕೊಂಡಿದೆ. ಇದಕ್ಕೆ ಬಹುಮುಖ್ಯ ಕಾರಣ ಅದರ ಆರ್ಥಿಕ/ಸಾಮಾಜಿಕ ಪ್ರಗತಿ. ಜೊತೆಗೆ ವೈಜ್ಞಾನಿಕ ಕ್ರೀಡಾ ನೀತಿ ಮತ್ತು ಆದ್ಯತೆ.



ಚೀನಾದ ಕ್ರೀಡಾ ಆದ್ಯತೆ ಹೀಗಿದೆ

ಸುಮಾರು 8 ಲಕ್ಷದ 50 ಸಾವಿರ ಮೈದಾನಗಳು, 6 ಲಕ್ಷದ 20 ಸಾವಿರ ಸ್ಟೇಡಿಯಂಗಳು, ಒಂದು ವರ್ಷದಲ್ಲಿ 45,000 ಕ್ರೀಡಾ ಕೂಟಗಳನ್ನು ಸಂಘಟಿಸಲಾಗುತ್ತದೆ. 44 ಸಾವಿರ ಕ್ರೀಡಾಶಾಲೆಗಳು ಕ್ರೀಡಾಪಟುಗಳಿಗೆ ತರಬೇತಿ ನೀಡುತ್ತಿವೆ. ಚೀನಾದ ಪ್ರತೀ ಗ್ರಾಮದಲ್ಲಿ ಕನಿಷ್ಟ ಒಂದು ಬಾಸ್ಕೆಟ್‌ಬಾಲ್ ಕೋರ್ಟ್ ಮತ್ತು ಪಿಂಗ್‌ಪಾಂಗ್ ಟೇಬಲ್ ಟೆನ್ನಿಸ್ ಟೇಬಲ್‌ಗಳು ಇವೆ. ಪರಿಣಾಮವಾಗಿ ಕಳೆದ 2005ರ ಸಮೀಕ್ಷೆಯ ಪ್ರಕಾರ ಚೀನಾದ ಶೇ.30ರಷ್ಟು ಜನ ಕ್ರೀಡೆಯಲ್ಲಿ ಪಾಲ್ಗೊಂಡಿದ್ದಾರೆ. ಜೊತೆಗೆ 2010ರೊಳಗೆ ಶೇ.40ರಷ್ಟು ಜನರನ್ನು ತಲುಪುವ ಗುರಿ ಹೊಂದಲಾಗಿದೆ. ಅಂದರೆ 50 ಕೋಟಿಗೂ ಮಿಗಿಲಾಗಿ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ ಎಂದಾಯಿತು. ಇದರ ಫಲವಾಗಿ 46,758 ವೃತ್ತಿಪರ ಅಥ್ಲೇಟುಗಳನ್ನು ಆಯ್ಕೆ ಮಾಡಲಾಗಿದೆ ಮತ್ತು ರಾಷ್ಟ್ರಮಟ್ಟಕ್ಕೆ 15,924 ಅಥ್ಲೀಟುಗಳನ್ನು ಆಯ್ಕೆ ಮಾಡಲಾಗಿದೆ. ಈ



ಬುನಾದಿ ಮೇಲೆ 3222 ಅಂತರಾಷ್ಟ್ರೀಯ ಅಥ್ಲೀಟುಗಳು ಹೊರಬಂದಿದ್ದಾರೆ. ಈ ಒಟ್ಟು ಪ್ರಕ್ರಿಯೆಯಲ್ಲಿ ಚೀನಾದ "ಫೈನಾನ್ಷಿಯಲ್ ಪವರ್ ಆಫ್ ದಿ ನ್ಯಾಷನಲ್ ಗೌರ್ನಮೆಂಟ್" ಸಂಸ್ಥೆ ನಡೆಸುತ್ತದೆ.

ಇವೆಲ್ಲದರ ಪೂರ್ವ ಪರಿಶ್ರಮ ಚೀನಾ ಕ್ರೀಡೆಯಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ. ಇದಲ್ಲದೆ ಚೈನಾ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಗೆ ಉತ್ತೇಜನ ನೀಡುತ್ತಿದೆ. ಸ್ಟೇಟ್ ಸ್ಪೋರ್ಟ್ ಜನರಲ್ ಅಡ್ಮಿನಿಸ್ಟ್ರೇಷನ್ ಅಡಿಯಲ್ಲಿ ಚೈನಾ ಅಭಿವೃದ್ಧಿ ಹೊಂದುತ್ತಿರುವ 88 ದೇಶಗಳಿಗೆ 2,324 ಕೋಚ್‌ಗಳನ್ನು ಕಳುಹಿಸಲಾಗಿದೆ. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ವಿಯೆಟ್ನಾಂ ಇತರೆ ದೇಶಗಳಿಗೆ ತನ್ನ ತರಬೇತುದಾರರನ್ನು ತನ್ನ ಸ್ವಂತ ಹಣವನ್ನು ಖರ್ಚು ಮಾಡಿ ಕಳುಹಿಸಿಕೊಟ್ಟಿದೆ. ಇದನ್ನು ಚೈನಾ ಹಣಕಾಸು ಇಲಾಖೆ (ಚೈನಾ ಮಿನಿಸ್ಟರಿ ಆಫ್ ಫೈನಾನ್ಸ್) ಹಣವನ್ನು ಭರಿಸುತ್ತಿದೆ.

ಇಷ್ಟಾದರೂ ಚೀನಾದ ವಿರುದ್ಧ ತೀವ್ರತರವಾದ ಅಪ ಪ್ರಚಾರ ನಡೆಸಲಾಯಿತು.

1. ಮಾಲಿನ್ಯ ತುಂಬಿದ ದೇಶವೇ?

ರಾಷ್ಟ್ರೀಯ ಛಾನೆಲ್‌ಗಳು, ಸ್ಥಳೀಯ ಮಾಧ್ಯಮಗಳು ಸೇರಿ ಚೀನಾದಲ್ಲಿ ಮಾಲಿನ್ಯ ತುಂಬಿ ತುಳುಕುತ್ತಿದೆ. ಇಲ್ಲಿನ ಹೊಗೆ, ಧೂಳು ಇತರೆ ಮಾಲಿನ್ಯದಿಂದಾಗಿ ಒಲಿಂಪಿಕ್ ಕ್ರೀಡಾಪಟುಗಳಿಗೆ ತಮ್ಮ ಪ್ರದರ್ಶನದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬಿತ್ಯಾದಿ ಪುಂಖಾನುಪುಂಖ ವಾಗಿ ಅಪಪ್ರಚಾರಗಳು ನಡೆದವು. ಆದರೆ ನಿಜವಾಗಿ ಪರಿಸ್ಥಿತಿ ಇವರು ಹೇಳಿದ ರೀತಿ ಇದೆಯೇ?



ವಾಸ್ತವವನ್ನು ಅವಲೋಕಿಸುವುದು ವಿವೇಕ ತಾನೆ....? ಈ ಬಗ್ಗೆ ಡೈರೆಕ್ಟರ್ ಆಫ್ ಇಟಾಲಿಯನ್ ಇನ್ಸ್ಟಿಟ್ಯೂಟ್ ಆಫ್ ಅಟ್ಮೋಸ್ಪಿಯರ್ ಪೊಲ್ಯೂಷನ್ ಸಂಸ್ಥೆಯ ಐವೋ ಅಲೆಗ್ರಿನಿ ಹೀಗೆ ಹೇಳುತ್ತಾರೆ. "ಪರಿಸರ ಮಾಲಿನ್ಯ ತಡೆಗಟ್ಟುವಲ್ಲಿ ಯುರೋಪಿಯನ್ ದೇಶಗಳು 25 ವರ್ಷಗಳಲ್ಲಿ ಮಾಡಿದ ಎಂದ ಸಾಧನೆಯನ್ನು ಚೀನಾ ಕೇವಲ 5 ವರ್ಷಗಳಲ್ಲಿ ಮಾಡಿದೆ ಎಂದು ಉದ್ಗರಿಸಿದ್ದಾರೆ. ಈ ಮಾತನ್ನು ಇವರು ನೆರೋಲದಲ್ಲಿ (ಇಟಲಿ) ಜೂನ್ 4, 2008 ರಂದು ವಿಚಾರಸಂಕಿರಣವೊಂದರಲ್ಲಿ ಹೇಳಿದ್ದಾರೆ. ಹೀಗಾಗಿ ಮಾಧ್ಯಮಗಳ ಈ ಕಪೋಲಕಲ್ಪಿತ ಈ ಅಪಪ್ರಚಾರಗಳು ಇನ್ನಾದರೂ ನಿಲ್ಲಬೇಕಿದೆ.

ಭಾರತ ಪರಿಸ್ಥಿತಿ ಏನು........?

ವಿಶ್ವಬ್ಯಾಂಕಿನ ಆಣತಿಯಂತೆ ಸಾಮಾಜಿಕ ಕ್ಷೇತ್ರದ ಮೇಲಿನ ವೆಚ್ಚದ ಕಡಿತದಿಂದಾಗಿ ಕ್ರೀಡಾ ಕ್ಷೇತ್ರಕ್ಕೂ ಗಣನೀಯ ಪ್ರಮಾಣದಲ್ಲಿ ಹಣಕಾಸು ಕಡಿತ ಮಾಡುತ್ತ ಬರಲಾಗಿದೆ. ಹೀಗಾಗಿ ಕ್ಯೂಬಾ, ಜಮೈಕಾದಂತಹ ಪುಟ್ಟ ಹಣತೆಗಳ ಎದುರು ಭಾರತ ಕುಬ್ಜವಾಗಿ ನಿಂತಿದೆ. ರಾಷ್ಟ್ರೀಯ ಕ್ರೀಡಾ ನೀತಿಯಾಗಲಿ ರಾಷ್ಟ್ರೀಯ ಯುವ ನೀತಿಯಾಗಲಿ ಕನಸಿನ ಮಾತಾಗಿದೆ. ಭಾರತ ಮಂತ್ರದಿಂದ ಮಾವಿನ ಕಾಯಿಗಾಗಿ ಜಪಿಸುತ್ತಿದೆ. ಆದರೆ ಚೀನಾ ಕಲ್ಲಿನಿಂದ ಹೊಡೆದುರುಳಿಸಿ ಮಾವಿನ ಕಾಯಿಯ ರುಚಿ ನೋಡತೊಡಗಿದೆ. ವಿಜ್ಞಾನ-ತಂತ್ರಜ್ಞಾನವನ್ನು ಸರಿಯಾಗಿ ಬಳಸಿಕೊಂಡಿದ್ದಲ್ಲದೆ ಚೈನಾದ ಒಟ್ಟು ಜನಸಮೂಹವನ್ನು ಕ್ರೀಡೆಯಲ್ಲಿ ಒಳಗೊಳ್ಳುವಂತೆ ಮಾಡಿದ್ದು ಚೀನಾ ಇಂದಿನ ಸಾಧನೆಗೆ ಮೂಲಭೂತ ಕಾರಣ ಎಂಬುದನ್ನು ಒಪ್ಪಲೇಬೇಕು.

10 ಮೀಟರ್ ಏರ್ ರೈಫಲ್‌ನಲ್ಲಿ ಭಾರತಕ್ಕೆ ಚಿನ್ನ ತಂದುಕೊಟ್ಟ ಅಭಿನವ ಬಿಂದ್ರಾ ಒಲಿಂಪಿಕ್ಸ್ ನಂತರ ಭಾರತಕ್ಕೆ ಭೇಟಿ ಕೊಟ್ಟಾಗ ಪತ್ರಕರ್ತರೆದುರು "ಒಲಿಂಪಿಕ್ಸ್ ಕ್ರೀಡೆಗಳಿಗೆ ದೇಶದಲ್ಲಿ ಆದ್ಯತೆ ನೀಡಬೇಕು ಹಾಗಾದರೆ ಭಾರತ ಕೂಡ ಕ್ರೀಡಾ ದೇಶ ಅನ್ನಿಸಿಕೊಳ್ಳುತ್ತೆ. ಹಾಗಾಗಿ ಉತ್ತಮ ಯೋಜನೆಗಳನ್ನು ರೂಪಿಸಬೇಕು" ಎಂದು. ಅಂದರೆ ಭಾರತ ದೇಶ ಒಂದು ಕ್ರೀಡಾ ದೇಶವಾಗಿಲ್ಲ ಎಂದೇ ಅರ್ಥ ಮತ್ತು ಈ ದಿಶೆಯಲ್ಲಿ ಆದ್ಯತೆ ನೀಡುತ್ತಿಲ್ಲವೆಂತಲೇ ಅವರ ಮಾತಿನಲ್ಲಿ ಕಾಣುತ್ತದೆ. ಒಂದು ವೇಳೆ ಆದ್ಯತೆ ನೀಡಿದ್ದೇ ಆಗಿದ್ದರೆ ದೇಶೀಯ ಕ್ರೀಡೆ ಹಾಕಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಬಹುದಿತ್ತು. ಆದರೆ ಹಾಗಾಗಲಿಲ್ಲ. ಇದು ನಮ್ಮ ಕ್ರೀಡಾ ದುರಾವಸ್ಥೆಗೆ ನೈಜ ಉದಾಹರಣೆ.

ಅಭಿನವ್ ಬಿಂದ್ರಾ ಮೊದಲ ಬಾರಿಗೆ ಒಲಂಪಿಕ್ಸ್ ಚಿನ್ನ ದಕ್ಕಿಸಿಕೊಂಡಿದ್ದಾರೆ. ಹಾಗಂತ ನಾವು ಹೆಮ್ಮೆ ಪಡಬಹುದೇನೋ...... ಆದರೆ ನಿಜವಾಗಿಯೂ ಅದಕ್ಕೆ ನಾವು ಅರ್ಹರೇ.....? ಬಿಂದ್ರಾ ತನ್ನ ವೈಯಕ್ತಿಕ ಸಾಮರ್ಥ್ಯದ ಮೂಲಕ ಪದಕ ತನ್ನದಾಗಿಸಿಕೊಂಡವರು. ಇದರಲ್ಲಿ ದೇಶದ ಕೊಡುಗೆ ಏನೇನು ಇಲ್ಲ. ಬಿಂದ್ರಾ ಭಾರತೀಯ ಎನ್ನುವುದನ್ನು ಬಿಟ್ಟರೆ.

ಕುಸ್ತಿಯಲ್ಲಿ ಸುಶೀಲ್‌ಕುಮಾರ್ ಕಂಚಿನ ಪದಕ ಹೊತ್ತು ತಂದಿದ್ದಾರೆ. ಹರ್ಯಾಣದ ಅತ್ಯಂತ ಬಡ ಕುಟುಂಬವೊಂದರಲ್ಲಿ ಬೆಳದ ಸುಶೀಲ್ ಸಾಮಾನ್ಯ ಸರ್ಕಾರಿ ಹಾಸ್ಟೆಲ್‌ನಲ್ಲಿ ಓದುತ್ತಲೇ ಕುಸ್ತಿಪಟುವಾಗಿ ತನ್ನ ಸ್ವಂತ ಪರಿಶ್ರಮದಿಂದ ಬೆಳೆದವರು.

ಬಾಕ್ಸಿಂಗ್‌ನಲ್ಲಿ ವಿಜಯೇಂದ್ರ ಕುಮಾರ್‌ಗೆ ಕಂಚು ದೊರಕಿದ್ದು ಭಾರತದ ಮಟ್ಟಿಗೆ ಹೊಸ ದಾಖಲೆಯೇ ಸರಿ. "ತಾನು ಒಂದು ಜೊತೆ ಗ್ಲೌಸ್ ಕೊಂಡರೆ ಆ ತಿಂಗಳು ಪೂರ್ತಿ ಊಟವಿಲ್ಲದೆ ಇರಬೇಕಿತ್ತು." ಎಂದು ತನ್ನ ಕಷ್ಟದ ದಿನಗಳನ್ನು ನೆನೆಯುತ್ತಾರೆ. ಇದು ಒಬ್ಬ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುವಿನ ಅಂತರಾಳದ ನೋವು.

ಪದಕ ಗೆದ್ದನಂತರ ಹಣದ ಹೊಳೆಯನ್ನೇ ಹರಿಸುವ ನಮ್ಮ ಸರ್ಕಾರಗಳು, ಕಾರ್ಪೊರೇಟ್ ಸಂಸ್ಥೆಗಳು ಕ್ರೀಡಾಪ್ರತಿಭೆಗಳನ್ನು ಬೆಳೆಸಲು ಕನಿಷ್ಠ

ಪುಟ 15ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH